ಮೇ 18, 2025

40ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1985

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಪ್ರಧಾನಿ ಮೋದಿಯವರಿಗೆ ಭಾರೀ ಅಪಮಾನ!

## ‘ದೇಶದ್ರೋಹಿ’ ಜಾವಿದ್ ಪಾಶ ಜೈಲುಪಾಲು!






## ಮಗೂನ ಕೊಂದು ಕೆರೆ ಹೂಳಲ್ಲಿ ತುಳಿದ!

## ‘ಕದನ ವಿರಾಮ’ದಲ್ಲೂ ಕಿತಾಪತಿ ಮಾಡಿದ ಕಿಡಿಗೇಡಿ ಪಾಕಿಸ್ತಾನ್!

## ಯಾ ಅಲ್ಲಾ... ಎಂದವನ ಥಳಿಸಿ ಕೊಂದ್ರು!





## ರೌಡಿ ಕಣುಮಾ ಸಂತೋಷ್ ಕಗ್ಗೊಲೆ!

## ಹುಟ್ಟುಹಬ್ಬಕ್ಕೆ ಪಟಾಕಿ ಸಿಡಿಸಿದ್ದಕ್ಕೆ ಡಬ್ಬಲ್ ಮರ್ಡರ್!





# ಪ್ರೇಯಸಿಯನ್ನು ವಿವಾಹವಾಗಲು ಶ್ರೀಮಂತನ ಕೊಂದ!

**ಮಾಡೋದಕ್ಕೆ ಸರಿಯಾದ ಕೆಲಸವಿಲ್ಲ ಜತೆಗೆ ಕೆಲಸ ಮಾಡಿಸಿ ಬದುಕೋಣ ಎಂದರೆ ಕಾಫಿ ತೋಟವಿಲ್ಲ, ಆದರೂ ಅವರಿವರಿಗೆ ಮೋಸ ಮಾಡುತ್ತಾ ಶೋಕಿ ಜೀವನ ನಡೆಸುತ್ತಿದ್ದ ಖತರ್ನಾಕ್ ಒಬ್ಬ ಮದುವೆಯಾಗುವ ಸಲುವಾಗಿ ಪ್ರೇಯಸಿಯನ್ನು ಮೆಚ್ಚಿಸುವ ಸಲುವಾಗಿ ಶ್ರೀಮಂತನ ಕೊಂದು ಆತನ ಬಳಿಯಿದ್ದ ಹಣ, ಒಡವೆ ದೋಚಿದ ಘಟನೆ ದಕ್ಷಿಣ ಕೊಡಗಿನಲ್ಲಿ ನಡೆದಿದ್ದು ಪೊಲೀಸರ ಕಾರ್ಯಾಚರಣೆಯಿಂದ ಆರೋಪಿ ಮತ್ತು ಆತನ ಪಟಾಲಂ ಜೈಲ್ ಸೇರಿದೆ.**

**ಕೊಡಗು**

✍ ಬಿ.ಎಂ. ಲವಕುಮಾರ್


**ಕೊ**ಡಗಿನಲ್ಲಿ ಕೊಲೆಗಳು ನಡೆಯುವುದು ವಿಶೇಷವೇನಲ್ಲ, ಆದರೆ ಯಾವಾಗ ಯಾವ ಕಾರಣಕ್ಕೆ ನಡೆಯುತ್ತದೆ ಎಂಬುದೇ ಗೊತ್ತಾಗುವುದಿಲ್ಲ, ಆಸ್ತಿಗಾಗಿ, ಅನೈತಿಕ ಸಂಬಂಧದ ಹಿನ್ನಲೆಯಲ್ಲಿ, ದ್ವೇಷ, ರೋಷದಿಂದ ಕೊಲೆಗಳು ನಡೆದಿವೆ. ಆದರೆ ಇದೊಂದು ಕೊಲೆ. ಅಡ್ನಾಡಿಯೊಬ್ಬ ಮದುವೆಯಾಗಲು ದಿಢೀರ್ ಶ್ರೀಮಂತನಾಗಲು ವ್ಯಕ್ತಿಯನ್ನು ಕೊಲ್ಲುವ ಮಟ್ಟಕ್ಕೆ ಹೋಗಿ ಜೈಲ್ ಸೇರಿದ್ದಾನೆ. ಇಷ್ಟಕ್ಕೂ ಆಗಿದ್ದೇನು? ಕೊಲೆಯಾದವನು ಮತ್ತು ಕೊಲೆ ಮಾಡಿದವರು ಯಾರು? ಎಂಬುದನ್ನು ನೋಡುತ್ತಾ ಹೋದರೆ ಕ್ರೈಂ ಸ್ಟೋರಿಯೊಂದು ತೆರೆದು ಕೊಳ್ಳುತ್ತದೆ.


ಕೊಲೆಯಾದ ಪ್ರದೀಪ್

ದಕ್ಷಿಣ ಕೊಡಗಿನ ಪೊನ್ನಂಪೇಟೆ ತಾಲೂಕಿನ ಬಿ. ಶೆಟ್ಟಿಗೇರಿ ವ್ಯಾಪ್ತಿಯ ಕೊಂಗಾಣದಲ್ಲಿ ಕೇರಳ ಕಣ್ಣನೂರಿನ ಕೊಲಿಯ ಆಸ್ಪತ್ರೆಯ ಮಾಲೀಕ ಪ್ರದೀಪ್ ಕೋಲಿ(49) ಎಂಬಾತ ಕಾಫಿ ತೋಟ ಖರೀದಿಸಿ ಅಲ್ಲೊಂದು ಮನೆ ನಿರ್ಮಾಣ ಮಾಡಿ ಅಲ್ಲಿ ಹೆಚ್ಚಿನ ದಿನಗಳನ್ನು ಕಳೆಯುತ್ತಿದ್ದನು. ಈತ ಅವಿವಾಹಿತನಾಗಿದ್ದು, ನೆಮ್ಮದಿಯ ಜೀವನಕ್ಕಾಗಿ ಇಲ್ಲಿ ನೆಲೆ ಕಂಡುಕೊಂಡಿದ್ದನು.

ಈ ವ್ಯಕ್ತಿಯ ಬಗ್ಗೆ ಕೆದಕಿದರೆ ಈತನಿಗೆ ಕೇರಳ ರಾಜ್ಯ ಕಣ್ಣೂರು ಜಿಲ್ಲೆಯಲ್ಲಿ ಆಸ್ಪತ್ರೆಯೂ ಇದ್ದು ಇದರ ಮಾಲೀಕನಾಗಿರುವ ಪ್ರದೀಪ್ ಕೊಡಗನ್ನು ಇಷ್ಟಪಟ್ಟಿದ್ದು, ಇಲ್ಲಿನ ಕಾಫಿ ತೋಟದ ಮಧ್ಯೆ ಇರುವ ಮನೆಯಲ್ಲಿ ಹೆಚ್ಚಿನ ಸಮಯ ಕಳೆಯುತ್ತಿದ್ದರು. ಈ ಹಿಂದೆ ವೀರಾಜಪೇಟೆ ಬಳಿಯ ಬಿಟ್ಟಂಗಾಲದಲ್ಲಿ ಯಜ್ಞ ಟವರಿನ್ ಅನ್ನು ಖರೀದಿಸಿ ವಸತಿ ಗೃಹ ಹಾಗೂ ಬಾರ್ ಅಂಡ್ ರೆಸ್ಟೋರೆಂಟ್ ನಡೆಸುತ್ತಿದ್ದರು.


ಇವರ ತಂದೆ ಡಾ. ಭಾಸ್ಕರನ್ ಕೋಲಿ ಅವರಾಗಿದ್ದು,


ಪ್ರದೀಪ್ ಮನೆ

ಪ್ರದೀಪ್ ಸೇರಿ ಇಬ್ಬರು ಪುತ್ರರಾಗಿದ್ದಾರೆ. ತಂದೆಯ ಮರಣದ ನಂತರ ಕೊಡಗಿನ ಬಿಸಿನೆಸ್‌ನ್ನು ನಿಲ್ಲಿಸಿದ್ದರು. ಇವರು ಅವಿವಾಹಿತರಾಗಿದ್ದರು. ಇನ್ನೊಬ್ಬ ಸಹೋದರ ಕಳೆದೆರಡು ವರ್ಷಗಳ ಹಿಂದೆ ಹೃದಯಘಾತದಿಂದ ನಿಧನ ಹೊಂದಿದ್ದರು ಎನ್ನಲಾಗಿದೆ. ಮೇಲಿಂದ ಮೇಲೆ ಕಷ್ಟಗಳು ಬಂದಿದ್ದರಿಂದ ಮಾನಸಿಕ ನೆಮ್ಮದಿಗಾಗಿ ಕೊಂಗಣದ ತೋಟದಲ್ಲಿಯೇ ಮನೆ ನಿರ್ಮಿಸಿ ಅಲ್ಲಿಯೇ ವಾಸವಾಗಿದ್ದರು. ಆದರೆ ಇವರೊಬ್ಬ ಶ್ರೀಮಂತರು ಎನ್ನುವುದು ಎಲ್ಲರಿಗೂ ಗೊತ್ತಾಗಿತ್ತು. ಇದು ಕೊಲೆಯಾದ ಪ್ರದೀಪ್ ಕೋಲಿ ಅವರ ಕಥೆಯಾದರೆ, ಕೊಲೆ ಮಾಡಿದ ಹಂತಕ ಅನಿಲ್ ಕಥೆಯೇ ವಿಭಿನ್ನ.

ಹಂತಕ ಪೊನ್ನಂಪೇಟೆ ಮುಗುಟಗೇರಿಯ ನಿವಾಸಿ ಅನಿಲ್ ಎನ್.ಎಸ್. ಅಲಿಯಾಸ್ ಮುತ್ತಣ್ಣ (25) ಆಗಿದ್ದು, ಪಕ್ಕಾ ಶೋಕಿವಾಲನಾಗಿದ್ದನು. ತಾಯಿ, ತಂಗಿಯೊಂದಿಗೆ ಬಾಡಿಗೆ ಮನೆಯಲ್ಲಿ ವಾಸವಿದ್ದ ಈತ ಜೀವನ ಇರುವುದೇ ಎಂಜಾಯ್ ಮಾಡೋಕೆ ಎಂದು ನಂಬಿದ್ದನು. ಯಾವುದೇ ಕೆಲಸವಿಲ್ಲದ ಕಾರಣ ಎಲ್ಲರಿಗೂ ಪಂಗನಾಮ ಹಾಕುವುದೇ ಇವನ ಜೀವನವಾಗಿತ್ತು. ತನ್ನದೇ ಪಟಾಲಂ ಜತೆಗೆ ಸುತ್ತಾಡುವುದು, ಹೆಂಡ ಕುಡಿದು ಮಜಾ ಮಾಡೋದು ದಿನಚರಿಯಾಗಿತ್ತು. ಇದಕ್ಕೆ ಹಣ ಬೇಕಲ್ಲವೆ? ಹೀಗಾಗಿ ಯಾರಿಗಾದರೂ ಮುಂಡಾಯಿಸಿ ಹಣ ಮಾಡುತ್ತಿದ್ದನು.

ಇನ್ನು ಏನಾದರೊಂದು ಕೆಲಸ ಮಾಡಲು ಹೋಗುತ್ತಿದ್ದ ಅನಿಲ್ ಅಲ್ಲಿಯೇ ಜನರನ್ನು ಪರಿಚಯ ಮಾಡಿಕೊಳ್ಳುತ್ತಿದ್ದನು. ಅವರ ವೀಕ್‌ನೆಸ್ ತಿಳಿದುಕೊಂಡು ಜಮೀನಿನಲ್ಲಿ ನಿಧಿ ಇರುವುದಾಗಿ ನಂಬಿಸಿ ಮೋಸ ಮಾಡುತ್ತಿದ್ದನು. ಈಗಾಗಲೇ ಬೆಂಗಳೂರು, ಹಾಸನ, ಪೊನ್ನಂಪೇಟೆ ಕಡೆಗಳಲ್ಲಿ ಹಣ ಪಡೆದು ಮೋಸ ಮಾಡಿರುವುದು ಕೂಡ ಬೆಳಕಿಗೆ ಬಂದಿದೆ. ತನ್ನನ್ನು ಬೆಂಗಳೂರಿನ ಕೆಲವರು ಕುಂದಾ ಸಮೀಪ ನಿಧಿ ಹುಡುಕಿಕೊಟ್ಟು ಅವರಿಗೆ ನೀಡಿ, ಅವರಿಂದ ಬರಬೇಕಾದ ಹಣ ಕೇಳಿದ್ದಕ್ಕೆ ಕಟ್ಟಿಹಾಕಿ ತನ್ನನ್ನು ಕೂಡಿ ಹಾಕಿದ್ದರೂ ಎಂದು ಕಳೆದ ಕೆಲವು ತಿಂಗಳುಗಳ ಹಿಂದೆ ಗೋಣಿಕೊಪ್ಪಲು ಪೊಲೀಸರಿಗೆ ದೂರು ನೀಡಿದ್ದನು.


ಎಸ್ಪಿ ರಾಮರಾಜನ್

ಪೊಲೀಸರು ವಿಚಾರಣೆ ಮಾಡಿದಾಗ ಮಾತಿಗೊಂದು ಸುಳ್ಳು ಹೇಳುತ್ತಿದ್ದದ್ದನ್ನು ಗಮನಿಸಿದ ಪೊಲೀಸರು ಗಂಭೀರವಾಗಿ ಪರಿಗಣಿಸದೆ ಈತನನ್ನು ಹಾಗೆ ಬಿಟ್ಟು ಈ ಹಿಂದೆ ಕಳುಹಿಸಿದ್ದರು ಎಂದು ಎಂಬ ಮಾತುಗಳು ಹರಿದಾಡುತ್ತಿವೆ. ಇಷ್ಟೇ ಅಲ್ಲದೆ ಒಂಟಿಯಾಗಿ ವಾಸ ಮಾಡುವ ಹಾಗೂ ಹೆಚ್ಚಿನ ಆಸ್ತಿ ಹೊಂದಿರುವವರನ್ನು ಗುರುತಿಸಿ ಆಸ್ತಿ ಖರೀದಿ, ಮಾರಾಟ ಮಾಡುವ ನೆಪದಲ್ಲಿ ಮೋಸ ಮಾಡುತ್ತಿದ್ದನು. ಈ ಹಿಂದೆ ತಿತಿಮತಿಯ ಒಂಟಿ ಮಹಿಳೆಯನ್ನು ಸಂಪರ್ಕಿಸಿ ಅವರಿಗೆ ಮೋಸ ಮಾಡಲು ಮುಂದಾಗಿದ್ದನು. ಆದರೆ ಆಕೆಗೆ ಸ್ಥಳೀಯವಾಗಿ ಸಂಬಂಧಿಕರಿರುವುದು ಗೊತ್ತಾಗಿ ತನ್ನ ವ್ಯವಹಾರವನ್ನು ಸ್ಥಗಿತಗೊಳಿಸಿದ್ದನು. ಬಹುಶಃ ಆಕೆಯ ನಸೀಬು ಗಟ್ಟಿಯಿತ್ತು ಏನೋ?


ಆರೋಪಿ ಅನಿಲ್

ಕೋಣನಕಟ್ಟೆಯಲ್ಲಿ 50 ಎಕರೆ ಜಮೀನಿನ ಮಾಲೀಕರನ್ನು ಆಸ್ತಿ ಖರೀದಿಸುವ ನೆಪದಲ್ಲಿ ಪರಿಚಯಿಸಿಕೊಂಡಿದ್ದ. ಆದರೆ ಇವರಿಗೆ ಮನೆಯಲ್ಲಿ ಮಕ್ಕಳು ಇರುವುದರಿಂದ ವ್ಯವಹಾರ ಸರಿಬರುವುದಿಲ್ಲ ಎಂದು ವ್ಯವಹಾರವನ್ನು ಕೈಬಿಟ್ಟಿದ್ದನು. ಈತನಿಗೆ ಎಲ್ಲಾ ರೀತಿಯ ಚಟವಿದ್ದು ಕೆಲವು ಮಹಿಳೆಯರಿಗೆ ಕಾರನ್ನು ಕೂಡ ಖರೀದಿಸಿ ಉಚಿತವಾಗಿ ನೀಡಿರುವ ಮಾಹಿತಿಯಿದೆ. ಮೋಸ ಮಾಡಿದ ಹಣವನ್ನು ಹೆಣ್ಣು ಹೆಂಡಕ್ಕಾಗಿ ಕಳೆಯುತ್ತಿದ್ದ ಈತ ಹಲವು ತಂತ್ರಗಾರಿಕೆ ಮಾಡುತ್ತಿದ್ದನು.

ಈತನ ಶೋಕಿಯನ್ನು ನೋಡಿದವರು ಇವನೊಬ್ಬ ಫ್ರಾಡ್ ಎಂದು ಹೇಳುವುದು ಕಷ್ಟವಾಗಿತ್ತು. ಇನ್ನು ಇವನ ಲೈಫ್ ಸ್ಟೈಲ್ ನೋಡಿ ಹುಡುಗಿಯೊಬ್ಬಳು ಮೆಚ್ಚಿದ್ದಳಾದರೂ ಆಕೆಯ ಮನೆಗೆ ಹೆಣ್ಣು ಕೇಳಲು ಹೋದಾಗ ಆಕೆಯ ಹೆತ್ತವರು ಸರಿಯಾಗಿ ಕ್ಲಾಸ್ ತೆಗೆದುಕೊಂಡಿದ್ದರು. ನಿನಗೆ ಆಸ್ತಿ ಇಲ್ಲ, ಮನೆಯಿಲ್ಲ, ಕೆಲಸವಿಲ್ಲ ನಿನಗೆ ಹೇಗೆ ಹೆಣ್ಣು ಕೊಡುವುದೆಂದು ಕೇಳಿದ್ದರು.

ಯಾವಾಗ ಹುಡುಗಿ ಮನೆಯವರು ನಿನಗೇನು ಇಲ್ಲ ಹಾಗಾಗಿ ನಿನಗೆ ಹುಡುಗಿ ಕೊಡುವುದಿಲ್ಲವೆಂದು ಉಗಿದು ಕಳಿಸಿದರೋ ಆ ತಕ್ಷಣದಿಂದಲೇ ಏನಾದರು ಮಾಡಿ ದಿಢೀರ್ ಶ್ರೀಮಂತನಾಗಬೇಕು ಎಂಬ ಹಠ ಬಂದಿದೆ. ಅಲ್ಲಿ ತನಕ ಮೋಸ, ವಂಚನೆ ಮಾಡುತ್ತಿದ್ದವನು ಹಣಕ್ಕಾಗಿ ಕೊಲೆ ಮಾಡುವ ಮಟ್ಟಕ್ಕೆ ಹೋಗುವ ತೀರ್ಮಾನಕ್ಕೆ ಬಂದುಬಿಟ್ಟನು. ಹೀಗಿರುವಾಗಲೇ ಅವನ ಕಣ್ಣಿಗೆ ಬಿದ್ದಿದ್ದು ಬಿ. ಶೆಟ್ಟಿಗೇರಿ ವ್ಯಾಪ್ತಿಯ ಕೊಂಗಾಣದಲ್ಲಿದ್ದ ಪ್ರದೀಪ್ ಕೋಲಿ.

ಅವರ ಬೆನ್ನು ಬಿದ್ದ ಹಂತಕ ಅನಿಲ್ ಅವರ ಬಗ್ಗೆ ಮಾಹಿತಿ ಕಲೆ ಹಾಕಲಾರಂಭಿಸಿದ್ದನು. ಆತನಿಗೆ ಅವರು ಮದುವೆಯಾಗದ ಅವಿವಾಹಿತ ಎಂಬುದು ಗೊತ್ತಾಗಿತ್ತು. ಜತೆಗೆ ಸ್ಥಳೀಯ ನಿವಾಸಿ ಅಲ್ಲ ಹಾಗೂ ಹೆಚ್ಚಿನ ಆಸ್ತಿ ಹೊಂದಿರುವ ಕುರಿತು ಮಾಹಿತಿಗಳು ಗೊತ್ತಾಗಿತ್ತು. ಹೀಗಾಗಿ ಅವರನ್ನು ಭೇಟಿ ಮಾಡುವ ಸಲುವಾಗಿ ಅವರ ಬಳಿಗೆ ತೆರಳಿ ಆಸ್ತಿ ಖರೀದಿಸುವ ಬಗ್ಗೆ ಮಾತುಕತೆ ನಡೆಸಿದ್ದನು. ಖರೀದಿದಾರರು ವಿದೇಶದಲ್ಲಿರುವುದಾಗಿ ತಿಳಿಸಿ ಅವರ ಪರವಾಗಿ ಆಸ್ತಿ ಖರೀದಿಸುವುದಾಗಿ ತಿಳಿಸಿ ಪ್ರದೀಪ್ ಕೋಲಿ ಅವರಿಗೆ ತಿಳಿಸಿ ಒಂದು ಲಕ್ಷವನ್ನು ಮುಂಗಡವಾಗಿ ಅವರಿಗೆ ನೀಡಿ ಪರಿಚಯ ಮಾಡಿಕೊಂಡಿದ್ದನು.

ಇದಾದ ನಂತರ ಅವರು ಎಲ್ಲಿ ಇರುತ್ತಾರೆ? ಅವರ ಮನೆಯಲ್ಲಿ ಏನೇನಿದೆ ಎಂಬುದನ್ನು ತಿಳಿದುಕೊಂಡು ಅವರನ್ನು ಮುಗಿಸಿ ಹಣ ಲಪಟಾಯಿಸಲು ವ್ಯವಸ್ಥೆ ಮಾಡಿದ್ದನು. ಅದಕ್ಕಾಗಿ ತನ್ನದೇ ಪಟಾಲಂನ ಸೋಮವಾರಪೇಟೆ ಅಬ್ಬೂರು ಕಟ್ಟೆಯ ದೀಪಕ್ ಅಲಿಯಾಸ್ ದೀಪು (21), ಸೋಮವಾರಪೇಟೆ ನೇರುಗಳಲೆಯ ಸ್ಟೀಫನ್ ಡಿಸೋಜ (26), ಸೋಮವಾರಪೇಟೆ ಹಿತ್ತಲ ಮಕ್ಕಿಯ ಕಾರ್ತಿಕ್ ಹೆಚ್.ಎಂ. (27) ಮತ್ತು ಪೊನ್ನಂಪೇಟೆ ನಲ್ಲೂರಿನ ಹರೀಶ್ ಟಿ.ಎಸ್. (29) ಎಂಬುವರನ್ನು ಕರೆಯಿಸಿಕೊಂಡು ಹೆಂಡದ ಪಾರ್ಟಿ ಮಾಡಿ ಸ್ಕೆಚ್ ಹಾಕಿದ್ದನು.

ಎಲ್ಲಿ ಹೇಗೆ ಕೊಲೆ ಮಾಡಬೇಕು ಎಂಬುದರ ಬಗ್ಗೆ ಸಿದ್ಧತೆ ಮಾಡಿಕೊಂಡು ಏಪ್ರಿಲ್ 23ರಂದು ಕೊಂಗಾಣದ ಪ್ರದೀಪ್ ಮನೆಗೆ ಹೋದ ಐವರು ಅವರ ಮೇಲೆ ದಾಳಿ ಮಾಡಿ ಕುತ್ತಿಗೆಗೆ ಹಗ್ಗದಿಂದ ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಿ ಅಲ್ಲಿಂದ ಹಣ ಮತ್ತು ಆಸ್ತಿಪತ್ರ ಮೊದಲಾದವುಗಳನ್ನು ಲಪಟಾಯಿಸಿ ಪರಾರಿಯಾಗಿದ್ದರು.

ಪ್ರದೀಪ್ ಕೋಲಿ ಅವರ ಕೊಲೆ ಗೊತ್ತಾಗುತ್ತಿದ್ದಂತೆಯೇ ಪೊಲೀಸರು ಸ್ಥಳಕ್ಕೆ ತೆರಳಿ ಮಹಜರು ನಡೆಸಿ, ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಮಾರ್ಗದರ್ಶನದಲ್ಲಿ ವಿರಾಜಪೇಟೆ ಡಿವೈಎಸ್ಪಿ ಎಸ್. ಮಹೇಶ್ ಕುಮಾರ್ ನೇತೃತ್ವದಲ್ಲಿ ಗೋಣಿಕೊಪ್ಪಲು, ವಿರಾಜಪೇಟೆ, ಕುಟ್ಟ ವೃತ್ತ ನಿರೀಕ್ಷಕರುಗಳಾದ, ಅನುಪ್ ಮಾದಪ್ಪ, ಶಿವರಾಜ್ ಮುಧೋಳ್, ಶಿವರುದ್ರಪ್ಪ ವಿರಾಜಪೇಟೆ ನಗರ ಗೋಣಿಕೊಪ್ಪಲು, ಹಾಗೂ ಪೊನ್ನಂಪೇಟೆ, ಶ್ರೀಮಂಗಲ, ಪುಟ್ಟ ಹಾಗೂ ವಿರಾಜಪೇಟೆ ಗ್ರಾಮಾಂತರ ಪಿಎಸ್‌ಐಗಳಾದ ಪ್ರಮೋದ್ ಕುಮಾರ್, ಪ್ರದೀಪ್ ಕುಮಾರ್, ನವೀನ್, ರವೀಂದ್ರ, ಶ್ರೀಮತಿ ಲತಾ, ಮಹಾದೇವ ಎಚ್. ಕೆ. ಹಾಗೂ ಉಪ ವಿಭಾಗ ಮಟ್ಟದ ಅಪರಾಧ ಪತ್ತೆದಳ ಸಿಬ್ಬಂದಿಗಳು, ಡಿಸಿಆರ್‌ಬಿ ಸಿಬ್ಬಂದಿಗಳು, ತಾಂತ್ರಿಕ ಸಿಬ್ಬಂದಿಯನ್ನೊಳಗೊಂಡ ಕಾರ್ಯಾಚರಣೆ ಆರಂಭಿಸಿತ್ತು.

ತನಿಖೆ ನಡೆಸಿದ ತಂಡಕ್ಕೆ ಆರೋಪಿ ಅನಿಲ್‌ಭಾಗಿಯಾಗಿರುವುದು ಗೊತ್ತಾಗಿತ್ತು. ಹೀಗಾಗಿ ಆತ ಸೇರಿದಂತೆ ಸಹಚರರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದು, ಆರೋಪಿಗಳಿಂದ ರೂ. 13,03,000/- ನಗದು ಹಣ, ಕೃತ್ಯಕ್ಕೆ ಬಳಸಿದ ಎರಡು ದ್ವಿ ಚಕ್ರ ವಾಹನ ಹಾಗೂ ಎರಡು ಮೊಬೈಲ್, ಮೃತ ವ್ಯಕ್ತಿಯ ಮೊಬೈಲ್ ಮತ್ತು ಆಸ್ತಿ ಪತ್ರಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಅಂತು ತಾನು ಶ್ರೀಮಂತನಾಗುವ ಆಸೆಗೆ ಬಿದ್ದು ಒಂದು ಜೀವವನ್ನು ಬಲಿ ಪಡೆದ ಹಂತಕ ಸಹಚರರ ಸಹಿತ ಜೈಲ್ ಸೇರಿದ್ದಾನೆ. ☯


ಆರೋಪಿ ಅನಿಲ್‌ನ ಸಹಚರರು

# ಪ್ರಧಾನಿ ಮೋದಿಯವರಿಗೆ ಭಾರಿ ಅಪಮಾನ!

# 'ದೇಶದ್ರೋಹಿ' ಜಾವಿದ್ ಪಾಶ ಜೈಲು ಪಾಲು!!



ಆರೋಪಿ ಜಾವಿದ್ ಪಾಶ

ಪಾಕ್ ಉಗ್ರರಿಂದ ಪಹಲ್ಗಾಮ್ ದಾಳಿ ನಡೆದು 27 ಮಂದಿ ಬಲಿಯಾದ ಬಳಿಕ ಕೆರಳಿ ಕೆಂಡವಾದ ಭಾರತ ಪಾಕ್ ವಿರುದ್ಧ ರಣಕಹಳೆ ಮೊಳಗಿಸಿ ಆಪರೇಷನ್ ಸಿಂಧೂರ ಕಾರ್ಯಾಚರಣೆ ನಡೆಸಿ ಉಗ್ರ ನೆಲೆಗಳ ಧ್ವಂಸಗೊಳಿಸಿದ್ದ ಘಟನೆ ಜರುಗಿದ ಸಮಯದಲ್ಲೇ, ಇಲ್ಲೇ ಭಾರತದಲ್ಲೇ ಇರುವ ಕೆಲವು ಮುಸ್ಲಿಂ ಕಿಡಿಗೇಡಿಗಳು ನಮ್ಮ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರನ್ನು ಜರಿದು ಪಾಕಿಸ್ತಾನದ ಪರ ಸಾಮಾಜಿಕ ಜಾಲತಾಣದಲ್ಲಿ ವಿವಿಧ ಪೋಸ್ಟ್‌ಗಳನ್ನು ಹಾಕಿರುವ ಪ್ರಕರಣಗಳು ನಡೆದಿವೆ! ಈ ಪೈಕಿ ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಕಿರುಗಾವಲು ಗ್ರಾಮದಲ್ಲಿನ ಗ್ಯಾರೇಜ್ ಮೆಕ್ಯಾನಿಕ್ ಜಾವಿದ್ ಪಾಶ ಎಂಬ 'ದೇಶದ್ರೋಹಿ' ಪ್ರಧಾನಿ ಮೋದಿಯವರು ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಬೂಟ್ ಪಾಲಿಶ್ ಮಾಡಿ ಕಾಲಿಗೆ ತೊಡಿಸುತ್ತಿರುವಂತೆ ಎಐ ತಂತ್ರಜ್ಞಾನ ಬಳಸಿ ಅಪಮಾನಕರ ದೃಶ್ಯ ಸಿದ್ಧಪಡಿಸಿರುವ ಪೋಸ್ಟ್ ಹಾಕಿದ್ದು, ಮಳವಳ್ಳಿ ತಾಲೂಕಿನ ಜನತೆಯಲ್ಲಿ ದಿಗ್ಭ್ರಮೆ ಉಂಟುಮಾಡಿದ್ದು, ಕಿರುಗಾವಲು ಪೊಲೀಸ್ ಠಾಣೆಯ ಮುಂದೆ ಜಮಾಯಿಸಿ ಆರೋಪಿ ಜಾವೀದ್ ಪಾಶನ ವಿರುದ್ಧ ದೂರು ಸಲ್ಲಿಸಿದ್ದು, ಮಂಡ್ಯ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರ ನೇತೃತ್ವದಲ್ಲಿ ಆರೋಪಿಯನ್ನು ಬಂಧಿಸಿ ತನಿಖೆ ಕೈಗೊಳ್ಳಲಾಗಿದ್ದು, ಸದ್ಯ, ದೇಶ ದ್ರೋಹಿ ಜಾವಿದ್ ಜೈಲು ಸೇರಿದ್ದಾನೆ!

ನಮ್ಮಲ್ಲಿ ಒಂದು ಗಾದೆ ಪ್ರಚಲಿತದಲ್ಲಿದೆ. ಅದೇನೆಂದರೆ, ಶತ್ರು ಕಿದರ್ ಹೈ? ಎಂದರೆ... ಬಗಲ್ ಮೆ ಹೈ! ಎಂಬ ಗಾದೆ! ನಮ್ಮ ಭಾರತ ದೇಶದ ಕಿರೀಟ ಕಾಶ್ಮೀರದಲ್ಲಿ ಪಾಕಿಸ್ತಾನ್ ಉಗ್ರರು ಕಿತಾಪತಿ ಮಾಡಿ ನಮ್ಮ ನಾಗರಿಕರನ್ನು ಕೊಂದಾಗ, ಪಾಕ್ ಉಗ್ರರನ್ನು ಶಪಿಸುತ್ತೇವೆ ಅಲ್ವಾ, ಅವರಿಗಿಂತಲೂ ಡೇಂಜರಸ್ ನಮಕ್ ಹರಾಮಿಗಳು ನಮ್ಮಲ್ಲೇ ಇದ್ದಾರೆ ಎಂಬುದನ್ನ ಬಹುಷಃ ನಾವ್ಯಾರು ಗಮನಿಸುವುದೇ ಇಲ್ಲಾ! ಇಂಡೋ ಪಾಕ್ ಕ್ರಿಕೆಟ್ ಮ್ಯಾಚ್ ನಡೆದಾಗ ಪಾಕ್ ಗೆದ್ದುಬಿಟ್ಟರೆ ಇಲ್ಲಿ ರಾಜಾರೋಷವಾಗಿ ಪಟಾಕಿ ಹೊಡೆಯೋ ಜನರಿದ್ದಾರೆ!


ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ


ಡಿವೈಎಸ್ಪಿ ಕೃಷ್ಣಪ್ಪ

ಯಾಕೆ ಏನು ಅಂತ ಕೇಳಲು ಹೋದರೆ, ಚಾಕು ಹಿಡಿದುಕೊಂಡು ಬರ್ತಾರೆ ಚುಚ್ಚಲು! ಅಲ್ಲೆಲ್ಲೋ ಗಡಿಯಲ್ಲಿ ಇಂಡೋ ಪಾಕ್ ಸೈನಿಕರ ನಡುವೆ ಹಾಕ್ಯಾಟಗಳಾದರೆ, ಪಾಕಿಸ್ತಾನದ ಜನರನ್ನು ರಕ್ಷಿಸು ಎಂದು ಅಲ್ಲಾನ ಬೇಡುವ ಲಕ್ಷಾಂತರ ಕಿಡಿಗೇಡಿಗಳು ಇಲ್ಲಿದ್ದಾರೆ! ಇದನ್ನೆಲ್ಲಾ ನಾವು ಹಿಂದೂಗಳು ಪ್ರಶ್ನಿಸುವಂತಿಲ್ಲ! ಪ್ರಶ್ನಿಸಿದರೆ ಹಿಂದೂ ಮುಸ್ಲಿಂ ನಡುವೆ ಕೋಮುಗಲಭೆ ಸೃಷ್ಟಿಸಲು ಹೊರಟಿದ್ದಾರೆ ಎಂದು ಇಲ್ಲಿನ ಪೊಲೀಸ್ ವ್ಯವಸ್ಥೆಯೇ ನಮ್ಮ ವಿರುದ್ಧ ದೂರು ಹೆಟ್ಟಿ ಕೋರ್ಟ್ ಗೆ ಅಲೆಸುತ್ತದೆ!

ಹಿಂದೂ ದೇವರುಗಳ ವ್ಯಂಗ್ಯ ಚಿತ್ರ ಬರೆದು,ಹರಿದು ಅವಮಾನ ಮಾಡಿದವರಿಗೆ ಯಾವ ಪ್ರಾಬ್ಲಮ್ಮೂ ಆಗಿವುದಿಲ್ಲ, ಅದೇ ಮೊಹ್ಮದ್ ಪೈಗಂಬರ್ ಚಿತ್ರ ಪ್ರಕಟಿಸಿದವರಿಗೆ ತಿಂಗಳು ಘಟ್ಟಲೆ ಜೈಲ್ ಆಗುತ್ತದೆ!! ಇದೆಂತ ವ್ಯವಸ್ಥೆ ರೀ...?! ಇವರ ವೋಟ್ ಬ್ಯಾಂಕ್‌ಗಾಗಿ ಪ್ರಜೆಗಳು 'ಬಲಿ'ಯಾಗಬೇಕೆ?!

ಇದೇನಾ ಸಂವಿಧಾನ ಪರಿಪಾಲನೆ?! ಒಂದು ದೇಶ ಒಂದು ಕಾನೂನು, ಕಾನೂನಿನ ಮುಂದೆ ಎಲ್ಲರೂ ಒಂದೇ... ಎಂದ ಮೇಲೆ, ಪೊಲೀಸ್ ವ್ಯವಸ್ಥೆ ಹೀಗೇಕಿದೆ?! ಪೊಲೀಸರ ಜುಟ್ಟು ಹಿಡಿದು ಅಲ್ಲಾಡಿಸುವ ರಾಜಕಾರಣಿಗಳು ಹೀಗೇಕೆ ಮಾಡ್ತಾರೆ?! ಇದಕ್ಕೇ ಹೇಳುವುದು, ರಾಜಕಾರಣಿಗಳ ಜುಟ್ಟು ಪ್ರಜೆಗಳ ಕೈಲಿರಬೇಕು ಅಂತಾ!

ಐದು ವರ್ಷಕ್ಕೊಮ್ಮೆ ಎಲೆಕ್ಷನ್ ಬರುತ್ತಲ್ಲ... ಅವತ್ತು ಒಂದು ಬಾಟಲಿ ಎರಡು ಸಾವಿರ ರೂಪಾಯಿ ಗೆ ತಮ್ಮ ಮತವನ್ನು ಮಾರಿಕೊಳ್ಳುವ ಬದಲು, ಯೋಗ್ಯ ಅಭ್ಯರ್ಥಿಗೆ ತಮ್ಮ ಅಮೂಲ್ಯ ಮತವನ್ನು ನೀಡಿ, ಆತನನ್ನು ಗೆಲ್ಲಿಸಿ ಅಸೆಂಬ್ಲಿ/ ಸಂಸತ್‌ಗೆ ಕಳುಹಿಸಿದರೆ... ಖಂಡಿತ ಇಂಥ ಅಪಸವ್ಯಗಳು ನಡೆಯೋದಿಲ್ಲ ಕಣ್ರೀ. ಕೊನೇ ಪಕ್ಷ ಕಮ್ಮಿಯಾದರೂ ಆಗುತ್ತವೆ!

**ಡಿಯರ್ ರೀಡರ್ಸ್,**

ಸುದ್ದಿಯ ಪ್ರಾರಂಭದಲ್ಲೇ ಇದನ್ನೆಲ್ಲಾ ಬರೆಯಲು ಕಾರಣವೇನೆಂದರೆ, ಮಂಡ್ಯ ಜಿಲ್ಲೆ, ಮಳವಳ್ಳಿ ತಾಲೂಕಿನಲ್ಲಿ ನಡೆದಿರುವ ಈ ಘನಘೋರ ಘಟನೆ! ತಾಲೂಕಿನ ಹೋಬಳಿ ಕೇಂದ್ರ, ಕಿರುಗಾವಲುನಲ್ಲಿ ಮುಸ್ಲಿಂ ಕಿಡಿಗೇಡಿಯೊಬ್ಬ ಭಾರತದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರು ಪಾಕಿಸ್ತಾನದ ಮಾಜಿ ಪ್ರಧಾನಿ, ಭ್ರಷ್ಟಾಚಾರದ ಆರೋಪದಡಿ ಈಗ ಕರಾಚಿ ಜೈಲಿನಲ್ಲಿ ಕೊಳೆಯುತ್ತಿರುವ ಇಮ್ರಾನ್ ಖಾನ್ ಅವರ ಎಐ ಫೋಟೋ ಸೃಷ್ಟಿಸಿ, ಮೋದಿಜೀ ಬೂಟ್ ಪಾಲಿಶ್ ಮಾಡಿ ಖಾನ್ ಕಾಲಿಗೆ ತೊಡಿಸುತ್ತಿರುವ ಹಾಗೆ ದೃಶ್ಯ ಸೃಷ್ಟಿಸಿ ಸಾಮಾಜಿಕ ಜಾಲತಾಣದಲ್ಲಿ ಹಾಕಿ ಭಾರಿ ಪ್ರಮಾದವೆಸಗಿದ್ದಾನೆ!


ಪೊಲೀಸರಿಗೆ ದೂರು ಸಲ್ಲಿಸುತ್ತಿರುವ ಬಿಜೆಪಿ ಕಾರ್ಯಕರ್ತರು


ಗ್ರಾಮಾಂತರ ಸಿಪಿಐ ಶ್ರೀಧರ್


ಮಳವಳ್ಳಿ ಟೌನ್ ಪಿಐ ರವಿಕುಮಾರ್


ಪಿಎಸ್ಐ ರವಿಕುಮಾರ್

ಪಾಕಿಸ್ತಾನದಲ್ಲೋ ಅಥವಾ ಅರಬ್ ಕಂಟ್ರೀಸ್‌ನಲ್ಲೋ ಉರ್ದುವಿನಲ್ಲಿ ಅಐ ನಲ್ಲಿ ಈ ಕಿಡಿಗೇಡಿ ದೃಶ್ಯ ಸೃಷ್ಟಿಸಿ, ಅದನ್ನು ಈತ ಕಾಪಿ ಮಾಡಿ ಪ್ರಸಾರ ಮಾಡಿರುವ

☞ 4

ಬೆಳ್ತಂಗಡಿಯ ಸ್ನಾತಕೋತ್ತರ ವಿದ್ಯಾರ್ಥಿನಿ ರೇಷ್ಮಾ ಎನ್. ಬಾರಿಗಾ ಎಂಬಾಕೆ 'ಆಪರೇಷನ್ ಸಿಂಧೂರ'ಕ್ಕೆ ಧಿಕ್ಕಾರ... ಎಂದು ಪೋಸ್ಟ್ ಹಾಕಿದ್ದು, ಇದಕ್ಕೆ ಸಾಮಾಜಿಕ ಜಾಲತಾಣದಲ್ಲಿ ವಿರೋಧ ವ್ಯಕ್ತವಾಗುತ್ತಿದ್ದಂತೆ ಡಿಲೀಟ್

## ರಾಜ್ಯವ್ಯಾಪಿ ಆರೇಳು ಪ್ರಕರಣಗಳು...

ಮಾಡಿದ್ದಾಳೆ. ಆದರೆ, ಪ್ರಕರಣ ದಾಖಲಾಗಿದ್ದು ಪೊಲೀಸರು ಆಕೆಯ ಬೆನ್ನು ಹತ್ತಿದ್ದಾರೆ! ವಿಜಯಪುರದ ಅಲ್ ಅಮೀನ್ ವೈದ್ಯಕೀಯ ಕಾಲೇಜ್ ವಿದ್ಯಾರ್ಥಿನಿ ತಷಾವುದ್ದ ಎಂಬಾಕೆ, ನನ್ನ ಪಾಕಿಸ್ತಾನಿ ಸ್ನೇಹಿತರು ಯಾರೂ ಕೂಡ ಸರ್ಕಾರಿ ಮಿಲಿಟರಿ ಸ್ಥಳಗಳಿಗೆ ಹೋಗಬೇಡಿ... ಗಡಿಗಳಿಂದ 200 ಮೀಟರ್ ದೂರವಿರಿ... ಅಲ್ಲಾನಮ್ಮವರನ್ನು ರಕ್ಷಣೆ ಮಾಡಲಿ... ಎಂದು ಪೋಸ್ಟ್ ಮಾಡಿದ್ದು ಅವಳ ವಿರುದ್ಧವೂ ದೂರು ದಾಖಲಾಗಿದೆ! ದೂರು ದಾಖಲಾಗುತ್ತಿದ್ದಂತೆ ತಷಾವುದ್ದ ಯೂ ಟರ್ನ್ ಹೊಡೆದಿದ್ದಾಳೆ. 'ಇನ್‌ಸ್ಟಾಗ್ರಾಂ ಖಾತೆಯಲ್ಲಿನ ನನ್ನ ಕಮೆಂಟ್ ಕೆಲವರನ್ನು ನೋಯಿಸಿದೆ. ಮನನೊಂದಿರುವ ಎಲ್ಲರಿಗೂ ನನ್ನ ಹೃದಯದಿಂದ ಕ್ಷಮೆ. ಭಾರತೀಯಳಾದ ನಾನು ನನ್ನ ರಾಷ್ಟ್ರವನ್ನು ಪ್ರೀತಿಸುತ್ತೇನೆ. ಇದು ನನ್ನ ತಾಯ್ನಾಡು. ನಾನು ಕಮೆಂಟ್ ಮಾಡಿದ್ದು ನನ್ನ ಮೂರ್ಖತನದ ಕೃತ್ಯ. ಎಲ್ಲರಲ್ಲಿಯೂ ಕ್ಷಮೆಯಾಚಿಸುವೆ. ಮುಂದೆ ಇಂತಹ ತಪ್ಪು ಮಾಡುವುದಿಲ್ಲ ಜೈ ಹಿಂದ್' ಎಂದು ಪೋಸ್ಟ್ ಮಾಡಿದ್ದಾಳೆ. ಈಕೆ ಮುಂಬೈನಲ್ಲಿದ್ದಾಳೆ ಎನ್ನಲಾಗಿದ್ದು, ನಮ್ಮ ಪೊಲೀಸರು ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ.

ಕಾರ್ಕಳ ತಾಲ್ಲೂಕಿನ ನಿಟ್ಟೆ ಇಂಜಿನಿಯರಿಂಗ್ ಕಾಲೇಜಿನ ವಸತಿ ನಿಲಯದ ಗೋಡೆಯ ಮೇಲೆ ವಿದ್ಯಾರ್ಥಿನಿಯೊಬ್ಬಳು ದೇಶವಿರೋಧಿ ಬರಹಗಳನ್ನು ಬರೆದಿರುವುದು ಪತ್ತೆಯಾಗಿದೆ. ''ಹಿಂದೂಸ್ತಾನ್ ನಹಿ ಮುಸ್ಲಿಂಸ್ತಾನ್ ಬೋಲೋ'' ಎಂದು ಗೋಡೆಯ ಮೇಲೆ ಬರೆದಿದ್ದಾಳೆ! ಈ ಘಟನೆಯ ಬಗ್ಗೆ ಕಾರ್ಕಳ ಗ್ರಾಮಾಂತರ ಪೊಲೀಸರು ತನಿಖೆ ಆರಂಭಿಸಿದ್ದು, ಕಿಡಿಕೇಡಿ ವಿದ್ಯಾರ್ಥಿನಿಗಾಗಿ ತೀವ್ರ ಶೋಧ ನಡೆಸುತ್ತಿದ್ದಾರೆ! ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ವಿರುದ್ಧ ಅವಹೇಳನಕಾರಿ ಪೋಸ್ಟ್ ಹಾಕಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಅನೀಸ್ ಹುಲ್ಗರ್ ಎಂಬಾತನನ್ನು ಬಂಧಿಸಲಾಗಿದ್ದು, ಆತ ಪ್ರಮುಖ ರಾಜಕೀಯ ನಾಯಕರ ಚಿತ್ರಗಳನ್ನು ಅವಹೇಳನಕಾರಿ ರೀತಿಯಲ್ಲಿ ಚಿತ್ರಿಸಿ ಅವಮಾನಿಸಿದ್ದಾನೆ. ದಾಂಡೇಲಿಯ ಸಂಡೆ ಮಾರ್ಕೆಟ್ ನಿವಾಸಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹಾಗೂ ಆಸ್ಸಾಂ ರಾಜ್ಯದ ಮುಖ್ಯಮಂತ್ರಿ ಹೇಮಂತ್ ಬಿಸ್ವಾ ಶರ್ಮಾ ಅವರ ಮುಖಗಳ ಭಾವಚಿತ್ರಗಳನ್ನು ನಾಯಿಯ ದೇಹದ ಭಾವಚಿತ್ರಗಳಿಗೆ ಅಂಟಿಸಿದ್ದಾನೆ!



ಎಐಎಮ್ ಐಎಮ್ ಪಕ್ಷದ ಸಂಸದ ಅಸಾವುದ್ದೀನ್ ಓವೈಸ್ ಡಾಗ್ ಚೈನ್ ಹಿಡಿದುಕೊಂಡು ಹೋಗುತ್ತಿರುವ ಭಾವಚಿತ್ರವನ್ನು ಫೇಸ್‌ಬುಕ್ ಖಾತೆ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿದ್ದಾನೆ. ಇದು ಎರಡು ವರ್ಗಗಳ ಜನರ ದ್ವೇಷ-ವೈಷಮ್ಯ ಬೆಳೆಯುವಂತೆ ಮಾಡಲು ಪ್ರಚೋದನಕಾರಿಯಾಗಿದೆ. ಆರೋಪಿ ವಿರುದ್ಧ ದೂರು ದಾಖಲಾಗಿದೆ. ದಾಂಡೇಲಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ!

# ಮಗಳ ಸಾವಿಗೆ ಪ್ರತೀಕಾರ: ತನ್ನ ಪುತ್ರಿಯನ್ನ ಕೊಂದಿದ್ದ ಆರೋಪಿ ತಂದೆಯನ್ನೇ ಹತ್ಯೆಗೈದ!


ಕೊಲೆಯಾದ ನರಸಿಂಹೇಗೌಡ


ಆರೋಪಿ ವೆಂಕಟೇಶ್

ಮಂಡ್ಯ ಜಿಲ್ಲೆಯ ಜಿಲ್ಲೆಯ ಪಾಂಡವಪುರ ಮಾಣಿಕ್ಯಹಳ್ಳಿಯ ಶಿಕ್ಷಕಿ ದಿಪೀಕಾ ಹತ್ಯೆಗೆ ಆಕೆಯ ತಂದೆ ಪ್ರತೀಕಾರ ತೀರಿಸಿಕೊಂಡಿದ್ದಾನೆ. ನಿತೀಶ್ ಎನ್ನುವಾತ 28 ವರ್ಷ ವಯಸ್ಸಿನ ದೀಪಿಕಾಳನ್ನು ಕೊಲೆ ಮಾಡಿ ಬಳಿಕ ಮೇಲುಕೋಟೆ ಬೆಟ್ಟದ ಬಳಿ ಹೂತಿಟ್ಟಿದ್ದ. ಇದೀಗ ಒಂದು ವರ್ಷದ ಬಳಿಕ ನಿತೀಶ್ ತಂದೆಯನ್ನೇ ದೀಪಿಕಾಳ ತಂದೆ ಬರ್ಬರವಾಗಿ ಕೊಲೆ ಮಾಡಿ ಮಗಳ ಹತ್ಯೆಗೆ ಪ್ರತೀಕಾರ ತೀರಿಸಿಕೊಂಡಿದ್ದಾನೆ.

ಮಗಳ ಸಾವಿಗೆ ಪ್ರತೀಕಾರಕ್ಕೆ ಹತ್ಯೆ ಆರೋಪಿಯ ತಂದೆಯನ್ನೇ ಆಕೆಯ ತಂದೆ ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಮಾಣಿಕ್ಯನಹಳ್ಳಿಯಲ್ಲಿ ನಡೆದಿದೆ. ಮಾಣಿಕ್ಯನಹಳ್ಳಿ ಗ್ರಾಮದ ನರಸಿಂಹೇಗೌಡ ಕೊಲೆಯಾದ ವ್ಯಕ್ತಿ. ಅದೇ ಗ್ರಾಮದ ವೆಂಕಟೇಶ್ ಕೊಲೆ ಆರೋಪಿ. ಮಾಣಿಕ್ಯಹಳ್ಳಿ ಗ್ರಾಮದ ದೀಪಿಕಾಳನ್ನು ಅದೇ ಗ್ರಾಮದ ನಿತೀಶ್ ಎಂಬಾತ 2024ರ ಜನವರಿ 22ರಂದು ಬರ್ಬರವಾಗಿ ಕೊಲೆ ಮಾಡಿದ್ದ. ಇದೇ ಪ್ರತೀಕಾರವಾಗಿ ದೀಪಳ ತಂದೆ ವೆಂಕಟೇಶ್, ತನ್ನ ಮಗಳ ಹಂತಕನ ತಂದೆ ನರಸಿಂಹೇಗೌಡ ಹತ್ಯೆ ಮಾಡಿದ್ದಾನೆ. ನನ್ನ ಮಗಳನ್ನ ಸಾಯಿಸಿ ನಿನ್ನ ಮಗಳಿಗೆ ಮದುವೆ ಮಾಡುತ್ತಿದ್ದಿಯಾ ಎಂದು ಬರ್ಬರವಾಗಿ ಕೊಲೆ ಮಾಡಿ ಎಸ್ಕೆಪ್ ಆಗಿದ್ದಾನೆ.


ದೀಪಿಕಾ

### ಘಟನೆ ಹಿನ್ನೆಲೆ

ದೀಪಿಕಾ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಮಾಣಿಕ್ಯಹಳ್ಳಿ ಗ್ರಾಮದವಳು. ಈಕೆಯನ್ನು 2024 ಜನವರಿ 22ರಂದು ಅದೇ ಗ್ರಾಮದ ನಿತೀಶ್ ಎಂಬಾತ ಬರ್ಬರವಾಗಿ ಕೊಲೆ ಮಾಡಿದ್ದ. ಇದೀಗ ಮಗಳ ಕೊಲೆಯ ಪ್ರತೀಕಾರಕ್ಕೆ ತಂದೆ ಕೊಲೆ ಆರೋಪಿಯ ತಂದೆಯನ್ನು ಕೊಲೆ ಮಾಡಿದ್ದಾನೆ.


ನರಸಿಂಹೇಗೌಡನ ಮಗ ನಿತೀಶ್

2024 ಜನವರಿ 19 ರಂದು ಮಾಣಿಕ್ಯನಹಳ್ಳಿ ಗ್ರಾಮದ ದೀಪಿಕಾ ಎಂಬ ಟೀಚರ್ ನಾಪತ್ತೆಯಾಗಿದ್ದಳು. ಬಳಿಕ ಆಕೆ ಜನವರಿ 23 ರಂದು ಮೇಲುಕೋಟೆಯ ಬೆಟ್ಟದಲ್ಲಿ ಶವವಾಗಿ ಪತ್ತೆಯಾಗಿದ್ದಳು. ಈ ವೇಳೆ ರಾಜ್ಯದಲ್ಲಿ ದೊಡ್ಡಮಟ್ಟದ ಸುದ್ದಿಯಾಗಿತ್ತು. ಬಳಿಕ ಮಂಡ್ಯ ಪೊಲೀಸರು ಮಾಣಿಕ್ಯನಹಳ್ಳಿ ಗ್ರಾಮದ ನಿತೀಶ್ ಎಂಬ ಯುವಕನನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಈ ಕೊಲೆ ಮಾಡಿದ್ದು ಬೇರೆ ಯಾರು ಅಲ್ಲ ನಿತೀಶ್ ಎಂದು ತಿಳಿದಿತ್ತು.

ಟೀಚರ್ ದೀಪಿಕಾ ಮತ್ತು ನಿತೀಶ್ ನಡುವೆ ಕೊಲೆಗಿಂತ ಎರಡು ವರ್ಷ ಮುಂಚಿನಿಂದಲೂ ಸಲುಗೆ ಇತ್ತಂತೆ. ಇಬ್ಬರ ಸಲುಗೆ ನೋಡಿ ನಿತೀಶ್‌ಗೆ ದೀಪಿಕಾ ಗಂಡ ಹಾಗೂ ಕುಟುಂಬಸ್ಥರು ವಾರ್ನಿಂಗ್ ಕೂಡ ಕೊಟ್ಟಿದ್ದರು. ನಿತೀಶ್ ಜೊತೆಗಿನ ಸಲುಗೆ ಬಗ್ಗೆ ಪ್ರಶ್ನಿಸಿದ್ದಾಗ ಆತ ತಮ್ಮ ಇದ್ದಂತೆ ಎಂದು ದೀಪಿಕಾ ಹೇಳಿಕೊಂಡಿದ್ದಳು. ಕುಟುಂಬಸ್ಥರ ವಾರ್ನಿಂಗ್ ಬಳಿಕ ಇಬ್ಬರು ಅಂತರ ಕಾಯ್ದುಕೊಂಡಿದ್ದರು. ಇದರಿಂದ ದೀಪಿಕಾಳ ಜೊತೆಗಿನ ಒಡನಾಟ ವಿಲ್ಲದೇ ನಿತೀಶ್ ಘಾಸಿಗೊಂಡಿದ್ದ. ನಂತರ 2024 ಜನವರಿ 19ರಂದು ತನ್ನ ಬರ್ತ್‌ಡೇ ನೆಪದಲ್ಲಿ ಬೆಟ್ಟದ ತಪ್ಪಲಿಗೆ ದೀಪಿಕಾಳನ್ನು ನಿತೀಶ್ ಕರೆಸಿಕೊಂಡಿದ್ದ. ಈ ಶರ್ಟ್ ಕೂಡ ಗಿಫ್ಟ್ ಕೊಡಲು ದೀಪಿಕಾ ಹೋಗಿದ್ದಳು. ಬಳಿಕ ಇಬ್ಬರ ನಡುವೆ ಜಗಳ ಆರಂಭವಾಗಿತ್ತು. ನಿತೀಶ್‌ನನ್ನು ಅವೈಡ್ ಮಾಡುತ್ತಿದ್ದಕ್ಕೆ ದೀಪಿಕಾ ಮೇಲೆ ಸಾಕಷ್ಟು ಆಕ್ರೋಶ ಕೂಡ ಇತ್ತು. ಇದೇ ಕಾರಣಕ್ಕೆ ದೀಪಿಕಾಳನ್ನು ಹತ್ಯೆ ಮಾಡಿದ್ದ.

ಇದಾದ ಬಳಿಕ ಜೈಲು ಸೇರಿದ್ದ ನಿತೀಶ್ ಜಾಮೀನಿನ ಮೇಲೆ ಹೊರಕ್ಕೆ ಬಂದಿದ್ದ. ತನ್ನ ಮಗಳನ್ನು ಕೊಲೆ ಮಾಡಿದ್ದ ನಿತೀಶ್‌ನನ್ನು ಹೇಗಾದರೂ ಮಾಡಿ ಕೊಲೆ ಮಾಡಬೇಕೆಂದು ದೀಪಿಕಾ ತಂದೆ ವೆಂಕಟೇಶ್ ಸ್ಕೆಚ್ಚು ಹಾಕಿದ್ದ. ಅಂದು ಭಾನುವಾರ ಧರ್ಮಸ್ಥಳದಲ್ಲಿ ನಿತೀಶ್ ತಂಗಿ ಮದುವೆ ಸಹ ಇತ್ತು. ಅವತ್ತು ನಿತೀಶ್ ತಂದೆ ನರಸಿಂಹೇಗೌಡ ಮನೆಯಿಂದ ಹೊರ ಹೋಗಿದ್ದಾರೆ. ಈ ವೇಳೆ ಫಾಲೋ ಮಾಡಿಕೊಂಡು ಹೋದ ವೆಂಕಟೇಶ್, ಊರ ಹೊರಗೆ ಇದ್ದ ಟೀ ಅಂಗಡಿ ಬಳಿ ಕುಳಿತಿದ್ದ ನರಸಿಂಹೇಗೌಡಗೆ ವೆಂಕಟೇಶ್ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ. ಕೊಲೆ ಮಾಡುವ ವೇಳೆ ನನ್ನ ಮಗಳನ್ನು ಕೊಲೆ ಮಾಡಿ ನಿನ್ನ ಮಗಳ ಮದುವೆ ಮಾಡುತ್ತಿದ್ದೀಯಾ ಎಂದು ಹೇಳಿ ಭೀಕರವಾಗಿ ಹತ್ಯೆ ಮಾಡಿ ಪರಾರಿಯಾಗಿದ್ದಾನೆ. ಈ ಸಂಬಂಧ ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವೆಂಕಟೇಶ್‌ಗಾಗಿ ಹುಡುಕಾಟ ನಡೆಸಿದ್ದಾರೆ.

ಒಟ್ಟಾರೆ ಒಂದು ವರ್ಷದ ಬಳಿಕ ಕೊಲೆ ಕೇಸ್‌ನಲ್ಲಿ ಜೈಲು ಸೇರಿದ್ದ ಮಗ ಮನೆಗೆ ಬಂದ, ಜೊತೆಗೆ ಮಗಳ ಮದುವೆ ನಡೆಯುತ್ತಿದೆ ಎಂಬ ಖುಷಿಯಲ್ಲಿ ಇದ್ದ ನರಸಿಂಹೇಗೌಡನನ್ನು ಮಗಳ ಕೊಲೆಯ ಪ್ರತೀಕಾರಕ್ಕಾಗಿ ವೆಂಕಟೇಶ್ ಬರ್ಬರವಾಗಿ ಕೊಲೆ ಮಾಡಿದ್ದಾನೆ.

☯


ದೀಪಿಕಾಳ ತಾಯಿ ಹಾಗೂ ಸಹೋದರಿ

---

3 ☞

ಸಾಧ್ಯತೆಯೂ ಇದೆ ಎನ್ನಲಾಗುತ್ತಿದೆ!!

ಉಕ್ಕಿನ ವ್ಯಕ್ತಿ ಮೋದೀಜಿ ಮರದ ತುಂಡು ಹಿಡ್ಕೊಂಡು (ಬ್ಯಾಟ್) ಕ್ರಿಕೆಟ್ ಆಡಿ ಹೊಟ್ಟೆ ಹೊರೆಯುತ್ತಿದ್ದ ವ್ಯಕ್ತಿಯೊಬ್ಬನಿಗೆ 'ಶೂ' ಪಾಲಿಶ್ ಮಾಡಿ ಕಾಲಿಗೆ ತೊಡಿಸುತ್ತಾರೆಂದರೆ...?! ಈ ದೃಶ್ಯವನ್ನು ಕಲ್ಪಿಸಿಕೊಳ್ಳಲಿಕ್ಕೆ ಆಗುವುದಿಲ್ಲ, ಅಂತಾದ್ದರಲ್ಲಿ ಫೋಟೋ ನೋಡುವುದಕ್ಕಾಗುತ್ತದೆಯೇ?! ಅಯೋಗ್ಯ ಜಾವಿದ್ ಪಾಶ ಅಂತಹ ನಾಲ್ಕು ಫೋಟೋಗಳನ್ನು ತನ್ನ ಮೊಬೈಲ್ ನಲ್ಲಿ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದ ಕಣ್ರೀ!! ತಿನ್ನೋದು ಇಲ್ಲಿನ ಅನ್ನ, ನಿಯತ್ತು ಪಾಕಿಸ್ತಾನ ಕ್ಕಾ??


ಕಿರುಗಾವಲು ಪೊಲೀಸ್ ಸ್ಟೇಷನ್ ಮುಂದೆ ಹಿಂದೂ ಕಾರ್ಯಕರ್ತರ ಪ್ರತಿಭಟನೆ

ನಮ್ಮ ಸರ್ಕಾರದ ಆಡಳಿತ ಯಂತ್ರ ಸರಿಯಿಲ್ಲ ಕಣ್ರೀ. ಸರಿಯಾಗಿದ್ರೆ ಇಂಥ ದೇಶದ್ರೋಹಿಗಳನ್ನು ಹುಡುಕಿ ಹುಡುಕಿ ಮೊದಲು ನಮ್ಮ ರಾಜ್ಯದಿಂದ, ನಮ್ಮ ದೇಶದಿಂದ  ಗಡಿಪಾರು ಮಾಡಬೇಕು, ಓದ್ದೋಡಿಸಬೇಕು...

### ಹೆಡ್ ಕಾನ್ಸ್‌ಟೇಬಲ್ ಮಹೇಶ್!

ಮಳವಳ್ಳಿಯ ಎಂ. ಮಹೇಶ್ ಎಂಬುವರು ಕಿರುಗಾವಲು ಪೊಲೀಸ್ ಠಾಣೆಯಲ್ಲಿ ಕಳೆದ ಮೂರು ವರ್ಷಗಳಿಂದ ಹೆಡ್ ಕಾನ್‌ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವಿಶೇಷವಾಗಿ ಗುಪ್ತರ ಮಾಹಿತಿ ಸಂಗ್ರಹಣೆ ಮಾಡುತ್ತಾರೆ. ಅವರು ಕಳೆದ 8-5-2025 ರಂದು ಗಸ್ತು ಮಾಡುತ್ತಿರುವಾಗ, ಅವರ ಬಾತ್ಮೀದಾರರಿಂದ ಒಂದು ಮಾಹಿತಿ ಬರುತ್ತದೆ. ಕಿರುಗಾವಲು ಹಾಸ್ಪಿಟಲ್ ರಸ್ತೆಯ ಗ್ಯಾರೇಜ್‌ನಲ್ಲಿ ಮೆಕ್ಯಾನಿಕ್ ಕೆಲಸ ಮಾಡುತ್ತಿರುವ ಜಾವಿದ್ ಪಾಶ ತನ್ನ ಮೊಬೈಲ್‌ನಲ್ಲಿ ಪ್ರಧಾನಿ ಮೋದಿಯವರಿಗೆ ಅಪಮಾನವಾಗುವಂತ ಆಕ್ಷೇಪಾರ್ಹ ಫೋಟೋಸ್ ಹಾಕಿಕೊಂಡಿದ್ದಾನೆ... ಇಂಡೋ ಪಾಕ್ ನಡುವೆ ಯುದ್ಧ ಶುರುವಾಗಿರುವ ಈ ಸಮಯದಲ್ಲಿ ಈತ ಇಂಥ ಅಕೃತ್ಯಗೈಯುತ್ತಿರುವ ಹಿಂದೆ ಯಾವುದೋ ಉಗ್ರ ಸಂಘಟನೆ ಇರಬಹುದು... ವಿಚಾರಿಸಿ ಸರ್ ಎಂಬ ಮಾಹಿತಿ ಬಂದಿತ್ತು. ಆವಾಗ ಹೆಡ್‌ಕಾನ್‌ಸ್ಟೇಬಲ್ ಎಂ. ಮಹೇಶ್ ಕಾರ್ಯಪ್ರವೃತ್ತರಾಗಿ ತನಿಖಿಸುತ್ತಾರೆ. ವಿಷಯ ನಿಜವಾಗಿರುತ್ತದೆ. ಮಹೇಶ್ ಈ ಸಂಗತಿಯನ್ನು ತಮ್ಮ ಮೇಲಿನ ಅಧಿಕಾರಿಗಳಿಗೆ ವಿವರಿಸಿ, ಸ್ವತಃ ದೂರು ಬರೆದುಕೊಟ್ಟು, ನಂತರ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀಧರ್ ರವರು 'ದೇಶದ್ರೋಹಿ' ಜಾವಿದ್ ಪಾಶನನ್ನು ಬಂಧಿಸುತ್ತಾರೆ.



ಆರೋಪಿ ಜಾವಿದ್‌ನನ್ನು ಬಂಧಿಸಿ ಠಾಣೆಯಲ್ಲಿ ವಿಚಾರಣೆ ನಡೆಸುತ್ತಿರುವಷ್ಟರಲ್ಲೇ ಮಳವಳ್ಳಿ, ಕಿರುಗಾವಲು ಹಾಗೂ ಅಕ್ಕಪಕ್ಕದ ಗ್ರಾಮಗಳ ಹಿಂದೂ ಜನತೆ ಪೊಲೀಸ್ ಠಾಣೆಯತ್ತ ಜಮಾಯಿಸಿ, ಜಾವಿದ್ ವಿರುದ್ಧ ತಾವೂ ಒಂದು ದೂರು ಬರೆದು ಎಲ್ಲರೂ ಸಹಿ ಹಾಕಿ ಸರ್ಕಲ್ ಇನ್ಸ್‌ಪೆಕ್ಟರ್ ಅವರಿಗೆ ಕೊಟ್ಟಿದ್ದಾರೆ. ಅಲ್ಲದೆ, ಪ್ರಧಾನಿ ಮೋದಿಗೆ ಅಪಮಾನ ಮಾಡಿದ ದೇಶದ್ರೋಹಿಯನ್ನು ತಮ್ಮ ವಶಕ್ಕೆ ನೀಡುವಂತೆ ಜಾವಿದ್ ವಿರುದ್ಧ ಧಿಕ್ಕಾರ ಕೂಗಿದ್ದಾರೆ. ಆದರೆ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಡಿವೈಎಸ್ಪಿ ಕೃಷ್ಣಪ್ಪ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀಧರ್ ಅವರ ಸಮಯೋಚಿತ ಕರ್ತವ್ಯದಿಂದ ಅನಾಹುತ ತಪ್ಪಿದೆ. ದೇಶದ್ರೋಹಿ ಜಾವಿದ್ ಬಚಾವ್ ಆಗಿ ಜೈಲು ಸೇರಿಕೊಂಡಿದ್ದಾನೆ!

ಹಲಗೂರು ಸರ್ಕಲ್ ಕಿರುಗಾವಲು ಪೊಲೀಸ್ ಠಾಣೆಯಲ್ಲಿ ಆರೋಪಿ ಜಾವಿದ್ ಪಾಶ ವಿರುದ್ಧ ಕ್ರೈಂ ನಂ. 43/25, ಭಾರತೀಯ ನ್ಯಾಯ ಸಂಹಿತೆ 2023 (ಯು/ಎಸ್ 152, 192, 34) ಅಡಿಯಲ್ಲಿ ಮೊಕದ್ದಮೆ ದಾಖಲಿಸಲಾಗಿದ್ದು, ಎಸ್ಪಿ ಮಲ್ಲಿಕಾರ್ಜುನ್ ಅವರ ಮಾರ್ಗದರ್ಶನದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀಧರ್ ತನಿಖೆ ಮುಂದುವರೆಸಿದ್ದಾರೆ.

☯

# ಯಾ ಅಲ್ಲಾ ಎಂದವನನ್ನು ಥಳಿಸಿ ಕೊಂದರು!

**ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ನಾಗಾರಾಧನೆಯ ಕ್ಷೇತ್ರ ಕುಡುಪು. ಮಂಗಳೂರು ನಗರದಿಂದ ಮೂಡಬಿದ್ರೆಗೆ ಹೋಗುವ ರಸ್ತೆಯಲ್ಲಿ ಸಿಗುವಂತಹ ಕ್ಷೇತ್ರ. ಈ ಕ್ಷೇತ್ರದ ಸನಿಹದಲ್ಲಿಯೇ ಭಟ್ರಕಲ್ಲುರ್ಟಿ ಎಂಬ ದೇವಸ್ಥಾನ ಇದೆ. ಅದರ ಹಿಂಬದಿಯಲ್ಲಿ ದೊಡ್ಡ ಆಟದ ಮೈದಾನವಿದೆ. ಈ ಮೈದಾನ ಮಂಗಳೂರು ಮಹಾನಗರ ಪಾಲಿಕೆಯ ಕುಡುಪು ವಾರ್ಡಿಗೆ ಸಂಬಂಧಿಸಿದ್ದು. ಈ ವಾರ್ಡ್‌ನ ಕಾರ್ಪೊರೇಟರ್ ಭಾಸ್ಕರ ಮೊಯ್ಲಿ. ಈ ಮೈದಾನದಲ್ಲಿ ಪ್ರತೀ ದಿನ ಸ್ಥಳೀಯ ಯುವಕರು ಕ್ರಿಕೆಟ್ ಆಡುತ್ತಾರೆ. ವಾರಕ್ಕೊಮ್ಮೆ ಅಂದರೆ ಆದಿತ್ಯವಾರ ಕ್ರಿಕೆಟ್ ಪಂದ್ಯಾಟಗಳನ್ನು ಆಯೋಜಿಸಲಾಗುತ್ತದೆ. ಸ್ಥಳೀಯವಾಗಿ 50ರಿಂದ 100 ಮಂದಿಯಷ್ಟು ಯುವಕರು ಈ ಮೈದಾನದಲ್ಲಿ ಸೇರುತ್ತಾರೆ. ಈ ರೀತಿ ಸೇರಿದ ಸಂದರ್ಭದಲ್ಲಿಯೇ ಅಪರಿಚಿತ ಯುವಕನೊಬ್ಬನ ಹತ್ಯೆಯಾಗುತ್ತದೆ. ಈ ಸಂಬಂಧ ಪರ ವಿರೋಧ ಚರ್ಚೆಗಳು ಆರಂಭವಾಗುತ್ತದೆ. ಪೊಲೀಸರ ಮೇಲೆ ಒತ್ತಡ ಬರುತ್ತದೆ. ಪೊಲೀಸರು ಅಲ್ಲಿ ಕ್ರಿಕೆಟ್ ಪಂದ್ಯಾಟವನ್ನು ಆಡಲು ಬಂದಂತಹ, ನೋಡಲು ಬಂದಂತಹ, ಒಟ್ಟು 23 ಮಂದಿಯನ್ನು ಬಂಧಿಸಿ ಜೈಲಿಗೆ ಅಟ್ಟಿದ್ದಾರೆ. ಇನ್ನೂ ಹಲವರ ಬಂಧನಕ್ಕಾಗಿ ಬಲೆ ಬೀಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣದ ತನಿಖಾಧಿಕಾರಿ ಮಂಗಳೂರು ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಶಿವಕುಮಾರ್ ಸೇರಿದಂತೆ ಮೂವರನ್ನು ಅಮಾನತುಗೊಳಿಸಲಾಗಿದೆ.**




**ಯಾರೀತ ಅಶ್ರಫ್?....**

ಮಂಗಳೂರು ಗ್ರಾಮಾಂತರ ಠಾಣಾ ವ್ಯಾಪ್ತಿಯ ಕುಡುಪು ಭಟ್ರಕಲ್ಲುರ್ಟಿ ದೇವಸ್ಥಾನದ ಹಿಂಬದಿಯ ಮೈದಾನದ ಬಳಿ ಸಾರ್ವಜನಿಕವಾಗಿ ಥಳಿತಕ್ಕೆ ಒಳಪಟ್ಟು ಮೃತಪಟ್ಟ ಯುವಕನ ಹೆಸರು ಅಶ್ರಫ್. ಈತ ಕೇರಳ ರಾಜ್ಯದ ವಯನಾಡು ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟ ವಯನಾಡು ಜಿಲ್ಲೆಯ ಪುಲ್ಲಂಪಳ್ಳಿ ಎಂಬಲ್ಲಿಯವನು. ವಯಸ್ಸು ಸುಮಾರು 34 ವರ್ಷ. ಮಾನಸಿಕವಾಗಿ ಅಸ್ವಸ್ಥನಾಗಿದ್ದವನು. ಈತನಿಗೆ ಮೂವರು ಸಹೋದರರು, ಮತ್ತು ಇಬ್ಬರು ಸಹೋದರಿಯರಿದ್ದಾರೆ. ಸ್ವಸ್ಥನಾಗಿದ್ದ ಅಶ್ರಫ್ ವ್ಯವಹಾರದಲ್ಲಿ ನಷ್ಟವುಂಟಾಗಿ ಮಾನಸಿಕವಾಗಿ ನೊಂದಿದ್ದ. ಇದರಿಂದ ಊರೂರು ತಿರುಗಾಡುತ್ತಿದ್ದ. ಯಾರಿಗೂ ತೊಂದರೆ ಉಂಟು ಮಾಡುತ್ತಿರಲಿಲ್ಲ. ಯಾರಾದರೂ ತಿಂಡಿ, ಊಟ ಕೊಟ್ಟರೆ ತೆಗೆದುಕೊಳ್ಳುತ್ತಿದ್ದ. ಆರೇಳು ತಿಂಗಳುಗಳಲ್ಲಿ ಒಮ್ಮೆ ಮನೆಗೆ ಹೋಗುತ್ತಿದ್ದ. ಒಂದೆರೆಡು ದಿನ ಇದ್ದು ಮತ್ತೆ ಹೊರಟು ಹೋಗುತ್ತಿದ್ದ. ಆತನ ಮನೆಯವರು ಎಷ್ಟು ತಿಳಿ ಹೇಳಿದರೂ ಕೇಳುತ್ತಿರಲಿಲ್ಲ. ಆತನ ಇರುವನ್ನು ಪತ್ತೆ ಹಚ್ಚುವುದಕ್ಕಾಗಿಯೇ ಆತನ ಸಹೋದರ ಮೊಬೈಲ್ ತೆಗೆದು ಕೊಟ್ಟಿದ್ದರೂ ಅದನ್ನು ಉಳಿಸಿಕೊಂಡಿರಲಿಲ್ಲ.


ಹತ್ಯೆಯಾದ ಅಶ್ರಫ್

ಇಂತಹ ಹಿನ್ನಲೆಯ ಅಶ್ರಫ್ ಸುಮಾರು 6 ತಿಂಗಳ ಹಿಂದೆ ಮಂಗಳೂರಿಗೆ ಬಂದು ಪಚ್ಚನಾಡಿ, ಕುಡುಪು, ವಾಮಂಜೂರು ಪರಿಸರದಲ್ಲಿ ಸುತ್ತಾಡುತ್ತಿದ್ದ. ಹಲವಾರು ಮಂದಿ ಈತನನ್ನು ನೋಡಿದ್ದಾರೆ. ಆದರೆ ಯಾರೂ ವಿಚಾರಿಸಿರಲಿಲ್ಲ. ರಸ್ತೆಯ ಬದಿಯಲ್ಲಿ ಸಿಕ್ಕುವಂತಹ ಪ್ಲಾಸ್ಟಿಕ್ ಬಾಟಲಿಗಳು, ಗುಜರಿ ಸಾಮಾಗ್ರಿಗಳನ್ನು ಹೆಕ್ಕಿ ಪಚ್ಚನಾಡಿಯ ಗುಜರಿ ಅಂಗಡಿಗೆ ಮಾರಾಟ ಮಾಡಿ ಹೊಟ್ಟೆಗೆ ಬೇಕಾಗುವಷ್ಟು ತಿನ್ನುತ್ತಿದ್ದ. ಆತನ ಹೆಸರು, ವಿಳಾಸ ಯಾರಿಗೂ ಗೊತ್ತಿರಲಿಲ್ಲ. ಇಂತಹ ಹಿನ್ನಲೆಯ ಅಶ್ರಫ್ ಗುಂಪು ಥಳಿತಕ್ಕೆ ಒಳಗಾಗಿ ಹತ್ಯೆಗೀಡಾದ ನಂತರ ಈ ಪ್ರಕರಣಕ್ಕೆ ಒಂದು ಬೇರೆಯೇ ಅರ್ಥ ಕಲ್ಪಿಸುವಂತಹ ಪ್ರಯತ್ನಗಳು ನಡೆಯಿತು.

**ಏನಾಯ್ತು ?**

ಏಪ್ರಿಲ್ 27, ಆದಿತ್ಯವಾರ. ಸಾಮಾನ್ಯವಾಗಿ ರಜೆಯ ಮೂಡಿನಲ್ಲಿ ಇರುವಂತಹ ದಿನ. ಅಂದು ಕುಡುಪು ಭಟ್ರಕಲ್ಲುರ್ಟಿ ದೇವಸ್ಥಾನದ ಹಿಂಬದಿಯ ಮೈದಾನದಲ್ಲಿ ಕ್ರಿಕೆಟ್ ಪಂದ್ಯಾಟ ಆಯೋಜಿಸಲಾಗಿತ್ತು. ಸುಮಾರು ಕ್ರಿಕೆಟ್ ತಂಡಗಳು ಈ ಪಂದ್ಯಾಟದಲ್ಲಿ ಭಾಗಿಯಾಗಿದ್ದವು. ಸಂಜೆಯ ವೇಳೆಗೆ ಫೈನಲ್ ಪಂದ್ಯ ಮುಗಿದು ಸಮಾರೋಪ ಸಮಾರಂಭದಲ್ಲಿ ಬಹುಮಾನ ವಿತರಣೆಯ ಕಾರ್ಯಕ್ರಮವೂ ಇತ್ತು. ಸ್ಥಳೀಯ ಕಾರ್ಪೊರೇಟರ್, ಮಾಜಿ ಮೇಯರ್ ಭಾಸ್ಕರ ಮೊಯ್ಲಿಯುವರು ಬಂದಿದ್ದರು. ಪಕ್ಕದ ಪಚ್ಚನಾಡಿ ವಾರ್ಡಿನ ಕಾರ್ಪೊರೇಟರ್ ಸಂಗೀತ ಆರ್. ನಾಯಕ್ ಅವರೂ ಮುಖ್ಯ ಅತಿಥಿಯಾಗಿ ಆಹ್ವಾನಿತರಾಗಿದ್ದರು. ಆದರೆ




ಅವರಿಗೆ ಪಚ್ಚನಾಡಿಯಲ್ಲಿ ಅದೇ ಸಮಯಕ್ಕೆ ಬೇರೆ ಕಾರ್ಯಕ್ರಮ ಇದ್ದುದರಿಂದ ಅವರ ಪತಿ ರವೀಂದ್ರ ನಾಯಕ್ ಅವರು ಬಂದಿದ್ದರು. ಪಂದ್ಯಾಟ ನಡೆಯುತ್ತಿತ್ತು. ಸುಮಾರು 100ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಸ್ಥಳೀಯ ಯುವಕರೇ ಸೇರಿದ್ದರು. ಈ ಸಂದರ್ಭದಲ್ಲಿ ಕುರುಚಲು ಗಡ್ಡ ಇಟ್ಟಿದ್ದಂತಹ, ಮೀಸೆ ಬೋಳಿಸಿ ಕೊಂಡಿದ್ದಂತಹ ಕೊಳಕು ಬಟ್ಟೆ ಧರಿಸಿದ್ದಂತಹ ನೀಳಕಾಯದ ಯುವಕನೊಬ್ಬ ಅಲ್ಲಿಗೆ ಬಂದಿದ್ದ. ಆತ ಅಲ್ಲಿ ಪಂದ್ಯಾಟ ನೋಡುತ್ತಿದ್ದಂತಹ ಕುಡುಪು ನಡುಮನೆಯ ಸಚಿನ್ ಟಿ. ಎಂಬವರ ಪಕ್ಕದಲ್ಲಿ ಕುಳಿತುಕೊಂಡ. ಸಚಿನ್‌ನ ಬದಿಯಲ್ಲಿ ನೀರಿನ ಬಾಟಲಿ ಇತ್ತು. ಇದನ್ನು ಹೇಳದೆ ಕೇಳದೆ ಕೈಗೆತ್ತಿಕೊಂಡ ಅಪರಿಚಿತ ಯುವಕ ಕಚ್ಚಿ ನೀರನ್ನು ಕುಡಿದ. ಇದನ್ನು ನೋಡಿದ ಸಚಿನ್ ತಾನು ಕುಡಿಯಲಿಕ್ಕಾಗಿ ಖರೀದಿಸಿ ತಂದಿದ್ದ ನೀರನ್ನು ಕಚ್ಚಿ ಕುಡಿದ ಕೋಪದಲ್ಲಿ ಆತನಿಗೆ ಒಂದೇಟು ಬಿಗಿದ. ಏಟು ಬಲವಾಗಿತ್ತು. ನೋವಾದ ಕೂಡಲೇ ಯುವಕ ಯಾ ಅಲ್ಲಾ ಎಂದು ಕಿರುಚಿದ. ತಕ್ಷಣ ಗುಂಪು ಸೇರಿದಂತಹ ಯುವಕರು ಆತನಿಗೆ ಯದ್ವಾತದ್ವವಾಗಿ ಥಳಿಸಿದರು. ಪರಿಣಾಮವಾಗಿ ಆತನ ಪ್ರಾಣ ಪಕ್ಷಿ ಹಾರಿ ಹೋಯಿತು. ಈ ಸಂದರ್ಭದಲ್ಲಿ ಸ್ಥಳೀಯರೊಬ್ಬರು ಕಂಕನಾಡಿ ಗ್ರಾಮಾಂತರ ಠಾಣೆ ಅಂದರೆ ವಾಜಂಜೂರು ಪೊಲೀಸ್ ಠಾಣೆಗೆ ಮಾಹಿತಿ ನೀಡಿದರು.

**ಮಂಗಳೂರು**

✍ ಮೋಹನ್ ಬೋಳಂಗಡಿ

ಕ್ರಿಕೆಟ್ ಪಂದ್ಯಾಟ ಅಲ್ಲಿಗೆ ನಿಂತಿತ್ತು. ಅಲ್ಲಿ ಸೇರಿದ್ದವರಲ್ಲಿ ಬಹುತೇಕರು ಜಾಗ ಖಾಲಿ ಮಾಡಿದ್ದರು. ಪೊಲೀಸರು ಸ್ಥಳಕ್ಕೆ ಬಂದಾಗ ಕೆಲವೇ ಕೆಲವು ಯುವಕರು ಅಲ್ಲಿದ್ದರು. ಪೊಲೀಸರು ಮೃತದೇಹವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಥಳಿಸಿ ಕೊಂದಿರುವ ಕುರುಹುಗಳು ಕಂಡು ಬಂದ ಹಿನ್ನಲೆಯಲ್ಲಿ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಇನ್ಸ್‌ಪೆಕ್ಟರ್ ಶಿವಕುಮಾರ್, ಎಸಿಪಿ ಧನ್ಯಾ ನಾಯಕ್,

☞ 11

## ಇನ್ಸ್‌ಪೆಕ್ಟರ್ ಅಮಾನತು

**ಅ**ಶ್ರಫ್ ಹತ್ಯೆ ಪ್ರಕರಣದಲ್ಲಿ ಕರ್ತವ್ಯ ಲೋಪವೆಸಗಿದ ಆರೋಪದ ಅಡಿಯಲ್ಲಿ ಮಂಗಳೂರು ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಶಿವಕುಮಾರ್ ಕೆ.ಆರ್. ಹಾಗೂ ಹೆಡ್‌ಕಾನ್ಸ್‌ಟೇಬಲ್ ಚಂದ್ರ ಪಿ. ಮತ್ತು ಕಾನ್ಸ್‌ಟೇಬಲ್ ಯಲ್ಲಾಲಿಂಗರವರನ್ನು ಅಮಾನತುಗೊಳಿಸಿ ನಗರ ಪೊಲೀಸ್ ಆಯುಕ್ತ ಅನುಪಮ್ ಅಗರ್‌ವಾಲ್ ಆದೇಶಿಸಿದ್ದಾರೆ. ಈ ಪ್ರಕರಣ ಬೆಳಕಿಗೆ ಬಂದಾಗ ಅದೊಂದು ಕೊಲೆ ಪ್ರಕರಣ ಎಂದು ಮೇಲ್ನೋಟಕ್ಕೆ ಅನಿಸಿತ್ತು. ಆದರೆ ಇನ್ಸ್‌ಪೆಕ್ಟರ್ ಶಿವಕುಮಾರ್ ಇದನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತಾರದೇ ಅಸ್ವಾಭಾವಿಕ ಮರಣ ಎಂದು ದಾಖಲಿಸಿಕೊಂಡಿದ್ದರು. ಠಾಣಾ ಪ್ರಭಾರದಲ್ಲಿದ್ದಂತಹ ಹೆಡ್‌ಕಾನ್ಸ್‌ಟೇಬಲ್ ಚಂದ್ರಾ ಅವರು ಸೂಕ್ತ ಸಮಯದಲ್ಲಿ ಸಮಯೋಚಿತ ನಿರ್ಧಾರವನ್ನು ಕೈಗೊಂಡಿಲ್ಲ ಎಂಬ ಕಾರಣಕ್ಕಾಗಿ ಅವರನ್ನು ಅಮಾನತುಗೊಳಿಸಲಾಗಿದೆ. ಕಾನ್ಸ್‌ಟೇಬಲ್ ಯಲ್ಲಾಲಿಂಗರವರು ಗುಪ್ತವಾರ್ತಾ ಸಿಬ್ಬಂದಿಯಾಗಿದ್ದು ಕ್ರಿಕೆಟ್ ಪಂದ್ಯಾಟ ನಡೆಯುವ ಸ್ಥಳದಲ್ಲಿ ನಿಯೋಜಿತರಾಗಿದ್ದರು. ಆದರೆ ಘಟನೆ ನಡೆಯುವ ಸಂದರ್ಭದಲ್ಲಿ ಅವರು ಸ್ಥಳದಲ್ಲಿ ಇರಲಿಲ್ಲ ಎಂಬ ಕಾರಣಕ್ಕಾಗಿ ಅಮಾನತುಗೊಂಡಿದ್ದಾರೆ. ಪೊಲೀಸರು ಸರಿಯಾದ ಸಮಯದಲ್ಲಿ ಸರಿಯಾದ ರೀತಿಯಲ್ಲಿ ಕಾನೂನು ಕ್ರಮಕೈಗೊಂಡಿದ್ದರೆ ಇಂತಹ ಘಟನೆಗಳಿಗೆ ಆಸ್ಪದ ಇರುತ್ತಿರಲಿಲ್ಲ ಎನ್ನುವುದಂತೂ ಸ್ಪಷ್ಟ.

# ಹುಟ್ಟುಹಬ್ಬದ ದಿನ ಪಟಾಕಿ ಸಿಡಿಸಿದಕ್ಕೆ ಇಬ್ಬರು ಕೊಲೆಯಾಗಿ ಹೋದರು!


ಕೊಲೆಯಾದ ಲಿಂಗಮಯ್ಯ ಹಾಗೂ ಪ್ರತಾಪ್

**ಹುಟ್ಟುಹಬ್ಬದ ಅಂಗವಾಗಿ ಕೇಕ್ ಕತ್ತರಿಸಿ, ಮನೆ ಮುಂದೆ ಸ್ನೇಹಿತರು ಮತ್ತು ಮನೆಯವರೊಂದಿಗೆ ಪಟಾಕಿ ಸಿಡಿಸಿ ಸಂಭ್ರಮಿಸುತ್ತಿರುವಾಗ, ಒಂದೇ ಸಮುದಾಯದ ಎರಡು ಕುಟುಂಬಗಳ ನಡುವೆ ಕ್ಷುಲ್ಲಕ ಕಾರಣಕ್ಕೆ ನಡೆದ ಜಗಳದಲ್ಲಿ ಇಬ್ಬರು ಸತ್ತು , ಮತ್ತೊಬ್ಬ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಘಟನೆ ಚಿಂತಾಮಣಿ ತಾಲ್ಲೂಕಿನ ಬಟ್ಲಹಳ್ಳಿ ಗ್ರಾಮದಲ್ಲಿ ನಡೆದಿದೆ.**


ಪ್ರಮುಖ ಆರೋಪಿ ಜಾನ್‌ಬಾಬು

**ಕೋಲಾರ**

✍ ಕೋಲಾರ ಮಂಜು

**ಚಿ**ಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಬಟ್ಲಹಳ್ಳಿ ಗ್ರಾಮದ ಬುಡ್ಗ ಜನಾಂಗಕ್ಕೆ ಸೇರಿದ ಆದಿಮೂರ್ತಪ್ಪ ಮತ್ತು ಚಿನ್ನಮ್ಮ ಎಂಬ ದಂಪತಿಗಳಿಗೆ ಕೃಷ್ಣಪ್ಪ ಮತ್ತು ಗಂಗನ್ನ ಎಂಬ ಇಬ್ಬರು ಮಕ್ಕಳಿರುತ್ತಾರೆ. ಬಟ್ಲಹಳ್ಳಿಯ ಮೂಲ ನಿವಾಸಿಗಳಾದ ಇವರು ಹಿಂದಿನಿಂದಲೂ ಸೈಕಲ್‌ನಲ್ಲಿ ಹೊಸ ಬಟ್ಟೆಗಳನ್ನು ಹಾಕಿಕೊಂಡು ಹಳ್ಳಿ ಹಳ್ಳಿಗೆ ಹೋಗಿ ಬಟ್ಟೆಗಳನ್ನು ಮಾರಾಟ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಆದಿಮೂರ್ತಪ್ಪನ ಮಕ್ಕಳಾದ ಕೃಷ್ಣಪ್ಪ ಮತ್ತು ಗಂಗನ್ನ ಇಬ್ಬರು ಗ್ರಾಮದಲ್ಲಿ ಅಕ್ಕಪಕ್ಕದಲ್ಲಿಯೇ ವಾಸವಾಗಿರುತ್ತಾರೆ. ದೊಡ್ಡ ಮಗ ಕೃಷ್ಣಪ್ಪನವರಿಗೆ ಪ್ರತಾಪ್ ಮತ್ತು ಸಾಗರ್ ಎಂಬ ಇಬ್ಬರು ಮಕ್ಕಳಿರುತ್ತಾರೆ. ಎರಡನೇ ಮಗ ಗಂಗನ್ನನವರಿಗೆ ಎರಡು ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗನಿರುತ್ತಾನೆ. ಗಂಗನ್ನರವರ ಮನೆ ಪಕ್ಕದಲ್ಲಿ ಸಂಬಂಧಿ ಲಿಂಗಮಯ್ಯ ತನ್ನ ಕುಟುಂಬದೊಂದಿಗೆ ವಾಸವಾಗಿರುತ್ತಾರೆ. ಲಿಂಗಮಯ್ಯ ಸಹ ಬಟ್ಟೆ ವ್ಯಾಪಾರ ಮಾಡುತ್ತಿರುತ್ತಾರೆ.


ಎಸ್ಪಿ ಕುಶಾಲ್ ಚೌಕ್ಸೆ


ಎಎಸ್ಪಿ ರಾಜಾ ಇಮಾಮ್ ಖಾಸಿಂ

ಕಳೆದ 40 ವರ್ಷಗಳ ಹಿಂದೆ ಇದೇ ಸಮುದಾಯದ ಈಶ್ವರಪ್ಪ ಮತ್ತು ಗಂಗಮ್ಮ ದಂಪತಿಗಳು ಆಂಧ್ರಪ್ರದೇಶದಿಂದ ವಲಸೆ ಬಂದು ಬಟ್ಲಹಳ್ಳಿಯ ಆದಿಮೂರ್ತಪ್ಪನವರ ಮನೆ ಬಳಿಯೇ ತನ್ನ ಮಕ್ಕಳಾದ ಮಹೇಶ್, ವಂಶಿ, ಜಾನ್‌ಬಾಬು ಮತ್ತು ಮಹಿಮರಾಜು ಎಂಬುವವರೊಂದಿಗೆ ವಾಸವಾಗಿದ್ದು, ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿರುತ್ತಾರೆ. ಅಕ್ಕಪಕ್ಕಗಳಲ್ಲಿ ಒಂದೇ ಸಮುದಾಯದ ಬಂಧುಗಳು ಇರುವುದರಿಂದ ಈಶ್ವರಪ್ಪ ಅವರೊಂದಿಗೆ ತನ್ನ ಕಷ್ಟಗಳನ್ನು ಹೇಳಿಕೊಳ್ಳುತ್ತಾ ಅವರಿಂದ ಸಹಾಯ ಪಡೆದುಕೊಂಡು ಎಲ್ಲರೊಂದಿಗೆ ಅನ್ಯೋನ್ಯವಾಗಿದ್ದರು. ವರ್ಷಗಳು ಕಳೆಯುತ್ತಿದ್ದಂತೆ ಆದಿಮೂರ್ತಪ್ಪನ ಕುಟುಂಬದವರಿಗೆ ಹತ್ತಿರವಾಗುತ್ತಾ ಅವರು ಮಾಡುತ್ತಿದ್ದ ಬಟ್ಟೆ ವ್ಯಾಪಾರ, ಬಟ್ಟೆಗಳನ್ನು ಎಲ್ಲಿಂದ ತರುತ್ತಾರೆ, ಹಳ್ಳಿ ಮತ್ತು ನಗರಗಳಲ್ಲಿನ ಜನರು ಯಾವ ರೀತಿಯ ಬಟ್ಟೆಗಳನ್ನು ಇಷ್ಟಪಡುತ್ತಾರೆ, ಅವರಿಗೆ ತಕ್ಕ ಬಟ್ಟೆಗಳನ್ನು ತಂದು ಅವರೊಂದಿಗೆ ಯಾವ ರೀತಿ ವ್ಯಾಪಾರ ಮಾಡುತ್ತಾರೆ ಎನ್ನುವುದನ್ನು ಹತ್ತಿರದಿಂದ ನೋಡಿ ತಿಳಿದುಕೊಂಡ ಈಶ್ವರಪ್ಪ ತನ್ನ ಮಕ್ಕಳೊಂದಿಗೆ ಸೇರಿ ಬಟ್ಟೆ ವ್ಯಾಪಾರವನ್ನು ಪ್ರಾರಂಭ ಮಾಡುತ್ತಾನೆ.

ಕೂಲಿ ಕೆಲಸ ಬಿಟ್ಟು ಬಟ್ಟೆ ವ್ಯಾಪಾರ ಮಾಡುತ್ತಿರುವ ಬಗ್ಗೆ ಆದಿಮೂರ್ತಪ್ಪನ ಮಕ್ಕಳಿಗೆ ಹಾಗೂ ಸಂಬಂಧಿ ಲಿಂಗಮಯ್ಯನವರಿಗೆ ತಿಳಿದಿದ್ದು ಈ ಬಗ್ಗೆ ಅವರು ವಿರೋಧ ವ್ಯಕ್ತಪಡಿಸದೆ, ನಾವು ಹಿಂದಿನಿಂದಲೂ ಹಳ್ಳಿಗಳಿಗೆ ಹೋಗಿ ಬಟ್ಟೆ ವ್ಯಾಪಾರವನ್ನು ಮಾಡುತ್ತಿದ್ದೇವೆ. ಈಶ್ವರಪ್ಪನವರು ಈಗ ಬಟ್ಟೆ ವ್ಯಾಪಾರ ಪ್ರಾರಂಭ ಮಾಡಿದ್ದಾರೆ. ಅವರ ವ್ಯಾಪಾರ ಅವರದು ನಮ್ಮ ವ್ಯಾಪಾರ ನಮ್ಮದೆಂದು, ಈಶ್ವರಪ್ಪನ ಮಕ್ಕಳು ವ್ಯಾಪಾರಕ್ಕೆಂದು ಹೋಗುತ್ತಿರುವ ಹಳ್ಳಿಗಳ ಕಡೆಗೆ ಇವರು ಹೋಗುತ್ತಿರಲಿಲ್ಲ. ಹಳ್ಳಿಗಳಲ್ಲಿನ ಜನರು ಆದಿಮೂರ್ತಪ್ಪನ ಮಕ್ಕಳು ಮತ್ತು ಲಿಂಗಮಯ್ಯನವರ ಬಳಿ ಬಟ್ಟೆಗಳನ್ನು ತೆಗೆದುಕೊಂಡು ಪರಿಚಯ, ಜೊತೆಗೆ ಇವರ ಮೇಲೆ ನಂಬಿಕೆ ಇಟ್ಟು ಬಟ್ಟೆ ವ್ಯಾಪಾರ ಮಾಡುತ್ತಿದ್ದರು. ಇವರನ್ನು ಬಿಟ್ಟು ಬೇರೆ ಯಾರ ಬಟ್ಟೆಗಳನ್ನು ತಂದು ಕಡಿಮೆ ಬೆಲೆಗೆ ಕೊಡುತ್ತೇವೆಂದು ಹೇಳಿದರೂ ಅವರು ಯಾರು ತೆಗೆದುಕೊಳ್ಳುತ್ತಿರಲಿಲ್ಲ. ಈಶ್ವರಪ್ಪನ ಮಕ್ಕಳಿಗೆ ಬಟ್ಟೆ ವ್ಯಾಪಾರ ವಿಲ್ಲದೆ ಕುಂಟಿತಗೊಂಡಾಗ ಬಟ್ಟೆ ವ್ಯಾಪಾರದಲ್ಲಿ ಪೈಪೋಟಿಗೆ ಇಳಿದ ಈಶ್ವರಪ್ಪನ ಮಕ್ಕಳು ಆದಿಮೂರ್ತಪ್ಪನ ಮಕ್ಕಳು ಮತ್ತು ಲಿಂಗಮಯ್ಯನವರ ಮೇಲೆ ದ್ವೇಷ ಸಾಧಿಸುತ್ತಿದ್ದರು.


ಡಿವೈಎಸ್ಪಿ ಮುರಳೀಧರ


ಪಿಎಸ್‌ಐ ಪುನೀತ್ ನಂಜರಾಯ

ಕಳೆದ ಒಂಭತ್ತು ವರ್ಷಗಳ ಹಿಂದೆ ಲಿಂಗಮಯ್ಯನ ಸಹೋದರ ಬಟ್ಟೆಗಳನ್ನು ತರಲು ತಮಿಳುನಾಡಿಗೆ ಹೋಗಿದ್ದಾಗ ಈಶ್ವರಪ್ಪನ ಮಕ್ಕಳು ಸೇರಿಕೊಂಡು ಕೊಲೆ ಮಾಡಿ ಯಾರೋ ಅಪರಿಚಿತ ವ್ಯಕ್ತಿಗಳು ಹಣದ ಆಸೆಗಾಗಿ ಆತನನ್ನು ಕೊಲೆ ಮಾಡಿ ಹಣವನ್ನು ಕಿತ್ತುಕೊಂಡು ಹೋಗಿರುವುದಾಗಿ ಕಥೆ ಕಟ್ಟಿದರು. ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡು ಕುಟುಂಬಗಳ ನಡುವೆ ಹಗೆತನ ಬೆಳೆಯುತ್ತಾ ಹೋಯಿತು. ನಾಲ್ಕು ವರ್ಷದ ಹಿಂದೆ ಲಸಿಂಗಮಯ್ಯನವರ ಕುಟುಂಬದವರ ಮೇಲೆ ದೌರ್ಜನ್ಯ ನಡೆಸಿದ ಈಶ್ವರಪ್ಪನ ಮಕ್ಕಳು ಪೊಲೀಸ್ ಠಾಣೆಗೆ ಹೋಗಿ ನಮ್ಮ ಮೇಲೆ ಹಲ್ಲೆ ಮಾಡಿದ್ದಾರೆಂದು ಲಿಂಗಮಯ್ಯನವರ ಕುಟುಂಬದ ವಿರುದ್ಧ ದೂರು ನೀಡಿದರು. ಪೊಲೀಸರು ಪರಿಶೀಲಿಸಿದ ನಂತರ ಎರಡು ಕುಟುಂಬದವರನ್ನು ಪೊಲೀಸ್ ಠಾಣೆಗೆ ಕರೆಸಿ ರಾಜಿ ಪಂಚಾಯಿತಿ ನಡೆಸಿ ಬಿ ರಿಪೋರ್ಟ್ ಹಾಕಿ ಮುಂದೆ ಯಾವುದೇ ಗಲಾಟೆಗಳನ್ನು ಮಾಡಿಕೊಳ್ಳದೆ ನೆಮ್ಮದಿಯಾಗಿ ಜೀವನ ಸಾಗಿರುವಂತೆ ಬುದ್ಧಿ ಹೇಳಿ ಕಳುಹಿಸಿದರು. ಪೊಲೀಸರು ಏನೇ ಬುದ್ಧಿ ಹೇಳಿ ಕಳುಹಿಸಿದರೂ ಈಶ್ವರಪ್ಪನ ಮಕ್ಕಳು ಮಾತ್ರ ಅವರ ಚಾಳಿಯನ್ನು ಬಿಡಲಿಲ್ಲ. ಸಣ್ಣ ವಿಚಾರಕ್ಕೆಲ್ಲ ಕಾಲು ಕೆರೆದುಕೊಂಡು ಜಗಳಕ್ಕೆ ಹೋಗುವುದು ಮಾತ್ರ ಬಿಟ್ಟಿರಲಿಲ್ಲ. ಆದಿಮೂರ್ತಪ್ಪನ ಮಗ ಗಂಗನ್ನರವರ ಮೊಮ್ಮಗ ಮೈಕಲ್‌ನ ಹುಟ್ಟುಹಬ್ಬವನ್ನು ಫೆಬ್ರವರಿ 28ರಂದು ತಮ್ಮ ಮನೆಯಲ್ಲಿ ಕೇಕ್ ಕತ್ತರಿಸಿ ಮನೆ ಮುಂದೆ ಪಟಾಕಿ ಸಿಡಿಸಿದಾಗ ದಾರಿಯಲ್ಲಿ ಹೋಗುತ್ತಿದ್ದ ಈಶ್ವರಪ್ಪನ ಮಗ ಜಾನ್‌ಬಾಬುರವರಿಗೆ ಬೆಂಕಿ ಕಿಡಿ ಬಿತ್ತೆಂದು ಮಹಿಮರಾಜು, ಸಾಯಿನಾಥ್, ದೇವರಾಜ್‌ರವರನ್ನು ಕರೆದುಕೊಂಡು ಬಂದು ಗಂಗನ್ನರವರ ಬಾಮೈದುನ ಮಲ್ಲೇಶ್‌ರವರ ಮೇಲೆ ಗಲಾಟೆ ಮಾಡಿ ಹಲ್ಲೆ ಮಾಡಿರುವ ವಿಚಾರದಲ್ಲಿ ಮಲ್ಲೇಶ್‌ರವರು


ಗಾಯಾಳು ಸಾಗರ್



ಪ್ರತಾಪ್ ಹಾಗೂ ಲಿಂಗಮಯ್ಯರವರ ಮೃತದೇಹಗಳು

☞ 10

# ದಾವಣಗೆರೆಯ ಕುಖ್ಯಾತ ರೌಡಿ ಕಣುಮಾ ಸಂತೋಷ್ ಕೊಲೆ!


ರೌಡಿ ಶೀಟರ್ ಸಂತೋಷ್ ಅಲಿಯಾಸ್ ಕಣುಮಾ

ದಾವಣಗೆರೆಯಲ್ಲಿ ಕುಖ್ಯಾತ ರೌಡಿಶೀಟರ್ ಸಂತೋಷ್ ಅಲಿಯಾಸ್ ಕಣುಮಾನನ್ನು ಎಂಟು ಜನ ಯುವಕರು ಹತ್ಯೆ ಮಾಡಿದ್ದಾರೆ. ಕೊಲೆ ಮಾಡುವ ವಿಡಿಯೋ ಕೂಡ ವೈರಲ್ ಆಗಿದೆ. ಸದ್ಯ ಪೊಲೀಸರು ತನಿಖೆ ಆರಂಭಿಸಿದ್ದು, ಆರೋಪಿಗಳಿಗಾಗಿ ಹುಡುಕಾಟ ನಡೆಸಿದ್ದಾರೆ. ಕಣುಮಾ ಅನೇಕ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಘಟನೆಯಿಂದ ದಾವಣಗೆರೆ ಜನರು ಬೆಚ್ಚಿಬಿದ್ದಿದ್ದಾರೆ.

ಮಂಗಳೂರಿನಲ್ಲಿ ಹಿಂದೂ ಕಾರ್ಯಕರ್ತ, ರೌಡಿಶೀಟರ್ ಸುಹಾಸ್ ಶೆಟ್ಟಿ ಹತ್ಯೆ ಮತ್ತು ಮೈಸೂರಿನಲ್ಲಿ ರೌಡಿಶೀಟರ್ ಕಾರ್ತಿಕ್ ಹತ್ಯೆ ಬೆನ್ನಲ್ಲೇ ಇತ್ತ ದಾವಣಗೆರೆಯಲ್ಲಿ ಕೂಡ ಕುಖ್ಯಾತ ರೌಡಿಶೀಟರ್ ಸಂತೋಷ್ ಅಲಿಯಾಸ್ ಕಣುಮಾನನ್ನು ಹತ್ಯೆ ಮಾಡಲಾಗಿದೆ. ಅವತ್ತು ಸಂಜೆ ಎಂಟು ಜನ ಯುವಕರ ಗುಂಪೊಂದು ನಗರದ ಹದಡಿ ರಸ್ತೆಯ ಸೋಮೇಶ್ವರ ಆಸ್ಪತ್ರೆ ಎದುರಿಗಿರುವ ಕ್ಲಬ್‌ನಲ್ಲಿ ರೌಡಿಶೀಟರ್‌ನ ಹತ್ಯೆ ಮಾಡಲಾಗಿದೆ. ಕೊಲೆ ಮಾಡಿದವರೇ ವಿಡಿಯೋ ಕೂಡ ಮಾಡಿದ್ದಾರೆ. ಸದ್ಯ ಡಿವೈಎಸ್ಪಿ ಶರಣಬಸವೇಶ್ವರ ನೇತ್ರತ್ವದಲ್ಲಿ ತಂಡ ರಚನೆ ಮಾಡಲಾಗಿದ್ದು, ಆರೋಪಿಗಳಿಗೆ ಬಲೆ ಬೀಸಿದ್ದಾರೆ.

ದಾವಣಗೆರೆಯಲ್ಲಿ ಕುಖ್ಯಾತ ರೌಡಿಶೀಟರ್ ಸಂತೋಷ್ ಅಲಿಯಾಸ್ ಕಣುಮಾ ಹೆಸರು ಹೇಳಿದರೆ ಸಾಕು ಕೆಲ ಜನರಿಗೆ ನಡುಕ ಹುಟ್ಟುತ್ತಿತ್ತು. ವಿಶೇಷವಾಗಿ ಯಾವುದಾದರೂ ಜಗಳ ಇರುವ ಜಾಗಗಳಿದ್ದರೇ ಬುದ್ಧಿವಂತರು ಈನಿಗೆ ಹೇಳುತ್ತಿದ್ದರು. ಹೀಗೆ ಕೊಲೆ ಸುಲಿಗೆ ಸೇರಿದಂತೆ ಹತ್ತಾರು ಪ್ರಕರಣಗಳು ಆತನ ಮೇಲಿದ್ದವು.

ಇಂತಹ ಕುಖ್ಯಾತ ರೌಡಿಶೀಟರ್ ಇದೀಗ ಕೊಲೆ ಆಗಿದ್ದಾನೆ.

ಸಂತೋಷ ಅಲಿಯಾಸ್ ಕಣುಮಾ ದಾವಣಗೆರೆಯ ಕುಖ್ಯಾತ ರೌಡಿಶೀಟರ್‌ಗಳಲ್ಲಿ ಈತ ಒಬ್ಬ. ಒಂದು ರೀತಿಯಲ್ಲಿ ನೋಡಲು ಕಟ್ಟುಮಸ್ತಾದ ಆಳು. ಎದುರು ನಾಲ್ಕು ಜನ ಬಂದ್ರು ಮುಗಿಸಿ ಹಾಕಿ ಬಿಡುತ್ತೇನೆ ಎಂಬ ಹುಚ್ಚು ಸಾಹಸದ ವ್ಯಕ್ತಿ. ಇಂತಹ ಕುಖ್ಯಾತ ರೌಡಿಶೀಟರ್‌ನನ್ನು ಮುಖದ ಮೇಲೆ ಮೀಸೆ ಬಾರದ ಐದಾರು ಯುವಕರು ಸೇರಿ ಕೊಲೆ ಮಾಡಿದ್ದಾರೆ.

### ಕೇವಲ 30 ಸೆಕೆಂಡ್‌ನಲ್ಲಿ ಕೊಲೆ

ದಾವಣಗೆರೆ ನಗರದ ಹದಡಿ ರಸ್ತೆಯ ಸೋಮೇಶ್ವರ ಆಸ್ಪತ್ರೆಯ ಎದುರಿಗೆ ಇರುವ ಇಸ್ಪೀಟ್ ಕ್ಲಬ್‌ನಲ್ಲಿ ಕೊಲೆ ಮಾಡಲಾಗಿದೆ. ವೈರಲ್ ಆದ ವಿಡಿಯೋದಲ್ಲಿ ಮೊದಲು ಬಂದು ಮಾತಾಡಿದ್ದಾರೆ. ಆಮೇಲೆ ಅವರ ಪ್ಲಾನ್ ಪ್ರಕಾರ ಕೆಳಕ್ಕೆ ಹಾಕಿ ನೇರವಾಗಿ ಕೋಣ ಕಡಿಯುವ ಮಚ್ಚಿನಿಂದ ಹೊಡೆದಿದ್ದಾರೆ. ತಲೆ, ಮುಖದ ಭಾಗಕ್ಕೆ ನಾಲ್ಕು ಏಟು ಹಾಕಿದ್ದಾರೆ. ಸತ್ತಿದ್ದಾನೆ ಎಂದು ಖಚಿತಪಡಿಸಿಕೊಳ್ಳಲು ಹೊಟ್ಟೆಗೆ ಚಾಕು ಹಾಕಿದ್ದಾರೆ. ಕೇವಲ 30 ಸೆಕೆಂಡ್‌ನಲ್ಲಿ ಮಾಡಿ ಮುಗಿಸಿದ್ದಾರೆ.


ಐಜಿಪಿ ರವಿಕಾಂತೇಗೌಡ

ಕುಖ್ಯಾತ ರೌಡಿಶೀಟರ್ ಸಾವಿನ ಸುದ್ದಿ ಕೇಳುತ್ತಿದ್ದಂತೆ ಜನ ಸಾಗರವೇ ಸೇರಿತ್ತು. ಹದಡಿ ರಸ್ತೆ ಸಂಚಾರ ಸ್ಥಗಿತವಾಗಿತ್ತು. ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡುವಂತಾಗಿತ್ತು. ಕೊಲೆ ಮಾಡಿದವರು ಸ್ಥಳೀಯರಾಗಿದ್ದು, ಅದರಲ್ಲೂ ಆತನ ಜೊತೆಗಿರುವವ ಮಾಡಿದ್ದಾರೆ ಎಂಬ ಮಾತುಗಳು ಕೇಳಿಬಂದಿವೆ.

ಈ ಕಣುಮಾ ಮೊದಲು ಬಾಲ್ಯದಲ್ಲಿ ತರಕಾರಿ ಮಾರಾಟ ಮಾಡುತ್ತಿದ್ದ. ನಂತರ ಹಂದಿ ಸಾಗಾಣಿಕೆ ಶುರು ಮಾಡಿದ್ದ. ಆಗಲೇ ಕೈಗೆ ಸ್ವಲ್ಪ ದುಡ್ಡು ಬಂದ ಹಿನ್ನೆಲೆ ರೌಡಿಸಂಗೆ ಕೈ ಹಾಕಿದ್ದ. ಬೆಂಗಳೂರಿನ ಕೆಲ ರೌಡಿಶೀಟರ್‌ಗಳ ಜೊತೆಗೆ ಈತನ ಸಂಪರ್ಕವಿತ್ತು. ಈ ಹಿಂದೆ ಓರ್ವ ರೌಡಿಶೀಟರ್ ಮುಗಿಸಲು ಬೆಂಗಳೂರಿನ ಗ್ಯಾಂಗ್ ಕರೆಸಿ ಸಿಕ್ಕು ಬಿದ್ದಿದ್ದ. ಮೇಲಾಗಿ ಕೆಲ ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದ. ಆತನ ಅತ್ತೆಯನ್ನ ಕಾಂಗ್ರೆಸ್‌ನಿಂದ ಕಾರ್ಪೊರೇಟರ್ ಮಾಡಿದ್ದ. ಇಂತಹ ವ್ಯಕ್ತಿ ಸಣ್ಣ ಹುಡುಗರ ಕೈಗೆ ಸಿಕ್ಕು ಹತನಾಗಿದ್ದಾನೆ.



ಪೂರ್ವ ವಲಯ ಐಜಿಪಿ ಡಾ. ಬಿ.ಆರ್. ರವಿಕಾಂತೇಗೌಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ವಿಧಿವಿಜ್ಞಾನ ಪ್ರಯೋಗಾಲಯ ತಜ್ಞರು, ಶ್ವಾನದಳ ಸೇರಿದಂತೆ ವಿವಿಧ ತಂಡಗಳು ಬಂದು ಪರಿಶೀಲನೆ ಮಾಡಿದ್ದಾರೆ. ಈ ರೌಡಿಶೀಟರ್ ಕೊಲೆಯ ವಿಚಾರ ಇಷ್ಟಕ್ಕೆ ಮುಗಿಯುವಂತೆ ಕಾಣುತ್ತಿಲ್ಲ, ಇನ್ನಷ್ಟು ಪ್ರತೀಕಾರ ಶುರುವಾಗಲಿರುವ ಸಂಶಯಗಳು ವ್ಯಕ್ತವಾಗಿವೆ. ಆದಷ್ಟು ಬೇಗ ಪೊಲೀಸರು ಆರೋಪಿಗಳನ್ನ ಬಂಧಿಸಬೇಕಿದೆ.

# ಪಕ್ಕದ ಮನೆಯವರ ಮೇಲಿನ ದ್ವೇಷಕ್ಕೆ ಬಾಲಕನ ಕೊಂದು ಕೆರೆಯ ಹೂಳಿಗೆ ತುಳಿದ!

ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿ ಭಯಾನಕ ಘಟನೆಯೊಂದು ನಡೆದಿದೆ. ಎಂಟು ವರ್ಷದ ಬಾಲಕನನ್ನು ನೆರೆಹೊರೆಯ ವ್ಯಕ್ತಿ ಅಪಹರಿಸಿ ಕೊಲೆ ಮಾಡಿದ್ದಾನೆ. ಕುಟುಂಬಗಳ ನಡುವಿನ ದ್ವೇಷಕ್ಕೆ ಬಾಲಕ ಕೊಲೆಯಾಗಿದ್ದಾನೆ. ಆರೋಪಿಯ ಪುತ್ರಿಯೇ ಕೊಲೆ ಸತ್ಯ ಬಾಯ್ಬಿಟ್ಟಿದ್ದಾಳೆ. ಸದ್ಯ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಮೃತ ಬಾಲಕ ರಮಾನಂದ

ಪಕ್ಕದ ಮನೆಯವರ ಮೇಲಿನ ದ್ವೇಷಕ್ಕೆ ಎಂಟು ವರ್ಷದ ಬಾಲಕನನ್ನು ಅಪಹರಿಸಿ ಕೊಲೆ ಮಾಡಿರುವಂತಹ ಘಟನೆ ಬೆಂಗಳೂರಿನ ಪರಪ್ಪನ ಅಗ್ರಹಾರ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಬಾಲಕ ರಮಾನಂದ (8) ಕೊಲೆಯಾದ ಬಾಲಕ. ಪಕ್ಕದ ಮನೆಯ ನಿವಾಸಿ ಮತ್ತೂರು ಎಂಬಾತನಿಂದ ಕೃತ್ಯವೆಸಲಾಗಿದೆ. ಬಾಲಕ ರಮಾನಂದ ಕುಟುಂಬ ಮತ್ತು ಮತ್ತೂರು ಕುಟುಂಬ ನಡುವೆ ಗಲಾಟೆ ನಡೆದಿದೆ. ಈ ಹಿನ್ನೆಲೆ ಬಾಲಕನನ್ನು ಅಪಹರಿಸಿ ಕೊಲೆ ಮಾಡಲಾಗಿದೆ. ಆರೋಪಿ ಮತ್ತೂರು ಮೃತದೇಹವನ್ನು ಚೀಲದಲ್ಲಿ ಕಟ್ಟಿ ಬಿಸಾಡಿದ್ದು, ಅವತ್ತು ರಾಯಸಂದ್ರ ಕೆರೆ ಬಳಿ ಮೃತದೇಹ ಪತ್ತೆಯಾಗಿದೆ. ಸದ್ಯ ಆರೋಪಿ ಮತ್ತೂರುನನ್ನು ಬಂಧಿಸಿ ಪೊಲೀಸರು ವಿಚಾರಣೆ ನಡೆಸಿದ್ದಾರೆ. ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಡಿಸಿಪಿ ಸಾರಾ ಫಾತಿಮಾ

### ಕೊಲೆ ಸತ್ಯ ಬಿಚ್ಚಿಟ್ಟ ಆರೋಪಿ ಪುತ್ರಿ

ತನಿಖೆಗೆ ಇಳಿದ ಪೊಲೀಸರು ಕೊಲೆ ರಹಸ್ಯ ಬಯಲು ಮಾಡಿದ್ದಾರೆ. ಆರೋಪಿ ಪುತ್ರಿಯೇ ಕೊಲೆ ಸತ್ಯ ಬಾಯ್ಬಿಟ್ಟಿದ್ದಾಳೆ. ಯಾರಿಗಾದರೂ ಹೇಳಿದರೆ ನಿನ್ನನ್ನು ಹೀಗೆ ಮಾಡುವುದಾಗಿ ತಂದೆ ಹೆದರಿಸಿರುವುದಾಗಿ ಹೇಳಿದ್ದಾಳೆ. ಬಾಲಕಿ ಮಾಹಿತಿ ಮೇರೆಗೆ ಕರೆತಂದು ವಿಚಾರಣೆ ಮಾಡಿದಾಗ ಆರೋಪಿ ಮತ್ತೂರು ಸತ್ಯ ಒಪ್ಪಿಕೊಂಡಿದ್ದಾರೆ.

### ಕೊಲೆ ಮಾಡಿ ಮೃತದೇಹ ಬ್ಯಾಗ್‌ನಲ್ಲಿ ಸಾಗಾಟ

ಮೃತ ಬಾಲಕನ ಮನೆ ಮತ್ತು ಆರೋಪಿಯ ಮನೆ ಎದುರುಬದುರಾಗಿದೆ. ಎರಡು ಕುಟುಂಬಗಳ ಮಧ್ಯೆ ಗಲಾಟೆ ನಡೆಯುತ್ತಿತ್ತು ಎನ್ನಲಾಗಿದೆ. ಮತ್ತೂರು ಪುತ್ರಿ ರಮಾನಂದ ಜೊತೆಗೆ ಆಟವಾಡುತ್ತಿದ್ದಳು. ಆತನೊಂದಿಗೆ ಆಟ ಆಡದಂತೆ ಆರೋಪಿ ಹೇಳುತ್ತಿದ್ದ. ಮೇ 6ರಂದು ಮದ್ಯಪಾನ ಮಾಡಿ ಬಂದ ಮತ್ತೂರು ರಮಾನಂದ ಮೇಲೆ ಹಲ್ಲೆ ಮಾಡಿದ್ದ. ಈ ವೇಳೆ ಬಾಲಕನ ತಾಯಿ ಮನೆಗೆಲಸಕ್ಕೆ ಹೋಗಿದ್ದಳು. ಸಂಜೆ 7 ಗಂಟೆ ಬಳಿಕ ಮಗು ಕಾಣೆಸದಿದ್ದಾಗ ಎಲ್ಲಾ ಕಡೆ ಹುಡುಕಿದ್ದಾರೆ. ಎಲ್ಲೂ ಪತ್ತೆಯಾಗಿಲ್ಲ, ಇತ್ತ ಮತ್ತೂರು ಕೂಡ ಮನೆ ಲಾಕ್ ಮಾಡಲಾಗಿದ್ದು, 12 ಗಂಟೆ ರಾತ್ರಿಗೆ ಮತ್ತೆ ಮನೆಗೆ ಬಂದು ಬ್ಯಾಗ್ ಎತ್ತುಕೊಂಡು ತನ್ನ ಸಂಬಂಧಿ ಮನೆಗೆ ಹೋಗಿದ್ದ. ಇದನ್ನ ಸ್ಥಳೀಯರು ಗಮನಿಸಿದ್ದರು. ಇದರಿಂದ ಅನುಮಾನಗೊಂಡು ಪರಪ್ಪನ ಅಗ್ರಹಾರ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ತನಿಖೆಗೆ ಇಳಿದ ಪೊಲೀಸರು ಕೊಲೆ ರಹಸ್ಯ ಬಯಲು ಮಾಡಿದ್ದಾರೆ. ಮತ್ತೂರು ಬಾಲಕನನ್ನು ಕೊಲೆ ಮಾಡಿ ಮೃತದೇಹವನ್ನು ಬ್ಯಾಗ್‌ನಲ್ಲಿ ತೆಗೆದುಕೊಂಡು ಹೋಗಿ ರಾಯಸಂದ್ರ ಕೆರೆ ಬಳಿ ಎಸೆದಿದ್ದ.


ಆರೋಪಿ ಮತ್ತೂರು

ಸ್ಥಳೀಯ ಮಹಿಳೆ ಹೇಮಾ ಎಂಬುವವರು ಪ್ರತಿಕ್ರಿಯಿಸಿದ್ದು, ಮನೆ ಬಳಿ ಆಟ ಆಡಿಕೊಂಡು ಇರುವಾಗ ಗಲಾಟೆ ಆಗಿದೆ. ಕರೆದುಕೊಂಡು ಹೋಗಿ ಕೊಲೆ ಮಾಡಿದ್ದಾನೆ. ಬಳಿಕ ರಾಯಸಂದ್ರ ಕೆರೆಗೆ ತೆಗೆದುಕೊಂಡು ಹೋಗಿ ಹಾಕಿದ್ದಾನೆ ಎಂದಿದ್ದಾರೆ.

### ಮನೆ ಮಾಲೀಕ ಸಂಪತ್ ಹೇಳಿದ್ದಿಷ್ಟು

ಮನೆ ಮಾಲೀಕ ಸಂಪತ್ ಹೇಳಿಕೆ ನೀಡಿದ್ದು, ಈ ಹಿಂದೆ ಮನೆ ಖಾಲಿ ಮಾಡಲು ಹೇಳಿದ್ದೆ. ಎರಡು ತಿಂಗಳಿಂದ ಬಾಡಿಗೆಯನ್ನು ಕೊಟ್ಟಿಲ್ಲ. ಮಗು ವಿಚಾರವಾಗಿ ಏನಾಯ್ತು ಅನ್ನೋದು ಗೊತ್ತಿಲ್ಲ. ಬ್ಯಾಗ್ ಎತ್ತಿಕೊಂಡು ಹೋಗೋದನ್ನ ಇಲ್ಲಿರುವವರು ನೋಡಿದ್ದಾರೆ. ಮಕ್ಕಳು ಒಟ್ಟಿಗೆ ಆಟವಾಡುತ್ತಿದ್ದರು. ತನ್ನ ಮಕ್ಕಳನ್ನು ಆ ಹುಡುಗನ ಜೊತೆ ಸೇರದಂತೆ ಗಲಾಟೆ ಆಗಿದೆ ಎಂದು ಹೇಳಿದ್ದಾರೆ.


### ತನ್ನ ಮಕ್ಕಳಿಗೆ ಹೊಡೆಯುತ್ತಾನೆ ಅಂತಾ ಕೊಲೆ

ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ಪ್ರತಿಕ್ರಿಯಿಸಿದ್ದು, ಪರಪ್ಪನ ಅಗ್ರಹಾರ ಠಾಣಾ ವ್ಯಾಪ್ತಿಯಲ್ಲಿ ಮೇ 6ರಂದು ಮಗುವಿನ ಮಿಸ್ಸಿಂಗ್ ಕಂಪ್ಲೆಂಟ್ ದಾಖಲಾಗಿರುತ್ತೆ. ತನಿಖೆ ಮಾಡಿದಾಗ ಪಕ್ಕದ ಮನೆಯವನ ಜೊತೆ ಹೋಗಿರೋದು ಗೊತ್ತಾಗುತ್ತೆ. ಆರೋಪಿಯನ್ನ ವಿಚಾರಣೆ ನಡೆಸಿದಾಗ ಕೃತ್ಯ ಬಯಲಾಗಿದೆ. ಮಗುವಿನ ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ. ಬಿಹಾರ ಮೂಲದ ಆರೋಪಿಯನ್ನ ಬಂಧಿಸಲಾಗಿದೆ ಎಂದಿದ್ದಾರೆ.

ಬಿಹಾರ ಮೂಲದ ಎರಡು ಕುಟುಂಬ ವಾಸವಾಗಿದ್ದವು. ಎರಡೂ ಕುಟುಂಬದ ಮಕ್ಕಳು ಜಗಳ ಆಡುವ ವಿಚಾರಕ್ಕೆ ಕೊಲೆ ಮಾಡಿರುವುದಾಗಿ ಹೇಳಿದ್ದಾನೆ. ಆರೋಪಿಗೆ ಹೆಣ್ಣು ಮಕ್ಕಳಿದ್ದಾರೆ. ತನ್ನ ಮಕ್ಕಳಿಗೆ ಬಾಲಕ ಹೊಡೆಯುತ್ತಾನೆ ಅಂತಾ ಕೊಲೆ ಮಾಡಿದ್ದಾನೆ. ಆರೋಪಿಯನ್ನ ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಹೇಳಿದ್ದಾರೆ.

**ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ಏಳು ಭಯೋತ್ಪಾದಕ ನೆಲೆಗಳನ್ನು ನಾಶಮಾಡಲು ಮೇ 7ರಂದು ಆಪರೇಷನ್ ಸಿಂಧೂರವನ್ನು ನಡೆಸಲಾಯಿತು. ಭಾರತೀಯ ಸೇನೆಯು ಅಪರಿಮಿತ ಧೈರ್ಯ ಮತ್ತು ಸಂಯಮವನ್ನು ಪ್ರದರ್ಶಿಸಿದೆ. ಪಾಕಿಸ್ತಾನದ ಅನೇಕ ಸೇನಾ ನೆಲೆಗಳ ಮೇಲೆ ದಾಳಿ ಮಾಡುವ ಮೂಲಕ ತಕ್ಕ ಉತ್ತರ ನೀಡಿದೆ. ಆಪರೇಷನ್ ಸಿಂಧೂರ ಕೇವಲ ಮಿಲಿಟರಿ ಕ್ರಮವಲ್ಲ, ಆದರೆ, ಭಯೋತ್ಪಾದನೆ ವಿರುದ್ಧ ಹೋರಾಡಲು ಭಾರತದ ರಾಜಕೀಯ, ಸಾಮಾಜಿಕ ಮತ್ತು ಕಾರ್ಯತಂತ್ರದ ಇಚ್ಛಾಶಕ್ತಿಯ ಸಂಕೇತವಾಗಿದೆ. ಪಾಕಿಸ್ತಾನದ ಆಕ್ರಮಣಗಳಿಗೆ ನಂತರದ ಎಲ್ಲ ಪ್ರತೀಕಾರ ಕ್ರಮಗಳನ್ನು ಆಪರೇಷನ್ ಸಿಂಧೂರ ಅಡಿಯಲ್ಲಿ ನಡೆಸಲಾಯಿತು. ಭಾರತ ಮತ್ತು ಪಾಕಿಸ್ತಾನ ಶನಿವಾರ ತಕ್ಷಣದಿಂದ ಜಾರಿಗೆ ಬರುವಂತೆ ಕದನ ವಿರಾಮ ಒಪ್ಪಂದಕ್ಕೆ ಒಪ್ಪಿಕೊಂಡಿರುವುದೇನೋ ನಿಜ. ಆದರೆ, ಕಿಡಿಗೇಡಿ ಪಾಕ್ ಮಾತಿಗೆ ತಪ್ಪದೆ ತೆಪ್ಪಗಿರುತ್ತಾ?!**

# ಪಾಕ್ ಕಿಡಿಗೇಡಿಗಳಿಂದ 'ಕದನ ವಿರಾಮ'ದಲ್ಲೂ ಕಿರಿಕ್! ಪಾಠ ಕಲಿಸಲು ನಮ್ಮ ಸೇನೆ ರೆಡಿ, ಆದರೆ ಪಾಲಿಟಿಕ್ಸ್?!




**ಪಾ**ಕ್ ಸೇನಾ ಮುಖ್ಯಸ್ಥನ ಮುಖವಾಡ ಇದೀಗ ಜಗತ್ತಿನ ಮುಂದೆ ಕಳಚಿದೆ... ಪಾಪಿ ಪ್ರಧಾನಿ ಶೆಬ್ಬಾಜ್ ಷರೀಫ್ ಭಾರತದ ಜತೆಗೆ ಕದನ ವಿರಾಮವನ್ನು ಸ್ವಾಗತಿಸಿದ ಕೆಲವೇ ನಿಮಿಷಗಳಲ್ಲಿಯೇ ಪಾಕ್ ಮಿಲಿಟರಿ ಪಡೆ ಭಾರತದ ಕಡೆಗೆ ಗುಂಡಿನ ದಾಳಿ ಡ್ರೋನ್ ಅಟ್ಯಾಕ್ ನಡೆಸಿದೆ. ಪಾಕ್‌ನ ಈ ನಡೆ ಪಾಕಿಸ್ತಾನ ಸರಕಾರ ಮತ್ತು ಮಿಲಿಟರಿ ನಾಯಕತ್ವದ ನಡುವಣ ಕಲಹವನ್ನು ಎತ್ತಿ ತೋರಿಸಿದೆ. ಹಾಗಾದರೆ ಪಾಕಿಸ್ತಾನವನ್ನು ಈಗ ಆಳುತ್ತಿರುವವರು ಯಾರು? ಪ್ರಧಾನಿಯೇ? ಸೇನಾ ಮುಖ್ಯಸ್ಥನೇ?? ಸೇನೆಯ ಮುಖ್ಯಸ್ಥ ಆಸಿಮ್ ಮುನೀರ್‌ಗೆ ಕದನ ವಿರಾಮ ಇಷ್ಟವಿಲ್ಲವೇ? ಭಾರತದ ಜತೆಗೆ ಆತ ಯುದ್ಧದಾಹಿಯೇ? ಆತನ ದುರುದ್ದೇಶವಾದರೂ ಏನು? ಇತ್ತೀಚೆಗೆ ಕಾಶ್ಮೀರವು ಪಾಕಿಸ್ತಾನದ ಕಂಠ ನಾಳವೆಂದು ಆಸಿಮ್ ನಾಲಿಗೆ ಹರಿಬಿಟ್ಟಿದ್ದೇಕೆ?

ಒಟ್ಟಾರೆ, ಪಾಕಿಸ್ತಾನ ಗೊಂದಲದ ಗೂಡಾಗಿದೆ. ಅಲ್ಲಿನ ಸರಕಾರ ಮತ್ತು ಮಿಲಿಟರಿ ನಾಯಕತ್ವದ ನಡುವೆ ಭಿನ್ನಾಭಿಪ್ರಾಯ ತೀವ್ರ ಸ್ವರೂಪ ಪಡೆದಿದೆ. ಒಂದು ಕಡೆ ಸರಕಾರ ಕದನ ವಿರಾಮವನ್ನು ಒಪ್ಪಿದ್ದರೆ, ಅಲ್ಲಿನ ಸೇನಾ ಪಡೆ ಕೂಡಲೇ ಉಲ್ಲಂಘಿಸುತ್ತದೆ! ಪಾಕ್ ಸೇನಾ ಮುಖ್ಯಸ್ಥರು ಸರಕಾರಗಳನ್ನು ಉರುಳಿಸಿ ತಾವೇ ಸರ್ವಾಧಿಕಾರಿಯಾಗುವ ಚಾಳಿ ಅಲ್ಲಿ ಸರ್ವೇ ಸಾಮಾನ್ಯ. ಆಸಿಮ್ ಮುನೀರ್ ಇದೀಗ ನಾಗರಿಕ ಆಡಳಿತವನ್ನು ಉರುಳಿಸದಿದ್ದರೂ, ಪಾಕ್‌ನ ಪ್ರಭಾವಿ ಸೇನಾ ನಾಯಕನಾಗಿದ್ದಾನೆ!


ಪಹಲ್ಗಾಮ್‌ನಲ್ಲಿ 26 ಮಂದಿ ಮುಗ್ಧ ಹಿಂದೂಗಳ ನರಮೇಧದಲ್ಲಿ ಹರಿದ ರಕ್ತದ ಹಿಂದಿನ ಕೈವಾಡ ಯಾರದ್ದು? ಎಂಬುದನ್ನು ಅವಲೋಕಿಸಿದರೆ, ಪಾಕಿಸ್ತಾನದ ಕ್ರೂರ ಸೇನಾ ಮುಖ್ಯಸ್ಥ ಜನರಲ್ ಆಸಿಮ್ ಮುನೀರ್ ನೆರಳನ್ನು ಕೂಡ ಕಾಣಬಹುದು. ಈತ ತನ್ನ ಸ್ವಾರ್ಥಕ್ಕಾಗಿ ಪಾಕಿಸ್ತಾನದಲ್ಲಿ ಅರಾಜಕತೆ ಸೃಷ್ಟಿಸುತ್ತಿದ್ದಾನೆ. ಈತ ಕೇವಲ ಸಮವಸ್ತ್ರದಲ್ಲಿರುವ ಸೇನಾಧಿಕಾರಿಯಲ್ಲ, ಮತಾಂಧತೆಯನ್ನು ಆಯುಧವಾಗಿ ಬಳಸುತ್ತಿರುವ ರಕ್ತ ಪಿಪಾಸು.


ಇಂಡಿಯನ್ ಆರ್ಮಿ ಚೀಫ್ ಉಪೇಂದ್ರ ದ್ವಿವೇದಿ

ಜಮ್ಮು ಕಾಶ್ಮೀರದಲ್ಲಿ ಉದ್ವಿಗ್ನ ಪರಿಸ್ಥಿತಿಯನ್ನು ಸೃಷ್ಟಿಸುವುದು, ಬಳಿಕ ಪಾಕಿಸ್ತಾನ-ಭಾರತ ಯುದ್ಧವಾದರೆ ತಾನೇ ಪಾಕಿಸ್ತಾನದ ಸರ್ವಾಧಿಕಾರಿಯಾಗಬಹುದು ಎಂದು ಆಸಿಮ್ ಮುನೀರ್ ಕನಸು ಕಾಣುತ್ತಿರಬಹುದು. ಈ ನಿಟ್ಟಿನಲ್ಲಿ ಅಲ್ಲಿನ ಸರಕಾರದ ನಿರ್ಧಾರಗಳನ್ನು ಕಡ್ಡಿ ಮುರಿದಂತೆ ಮುರಿಯುತ್ತಿದ್ದಾನೆ. ಇಲ್ಲದಿದ್ದರೆ ಕದನ ವಿರಾಮವನ್ನು ಪಾಕ್ ಪ್ರಧಾನಿ ಸ್ವಾಗತಿಸಿದ ಬೆನ್ನಲ್ಲೇ ಅಲ್ಲಿನ ಸೇನೆ ಭಾರತದ ಗಡಿಯಲ್ಲಿ ಡ್ರೋನ್ ದಾಳಿ ಮುಂದುವರಿಸಿದ್ದೇಕೆ?


ಭಾರತದ ವಿರುದ್ಧ ದಾಳಿ ನಡೆಸಲು ಉಗ್ರರಿಗೆ ಕುಮ್ಮಕ್ಕು ಕೊಟ್ಟಿದ್ದ ಆಸಿಮ್ ಮುನೀರ್ ಬಗ್ಗೆ ಪ್ರತಿಯೊಬ್ಬ ಭಾರತೀಯರು ತಿಳಿದುಕೊಳ್ಳಬೇಕು. ಆತ ಎಂಥಾ ದುಷ್ಟ ಕ್ರಿಮಿ ಎಂಬುದು ಎಲ್ಲರಿಗೂ ಗೊತ್ತಾಗಬೇಕು.

ಜಮ್ಮು ಕಾಶ್ಮೀರದ ಪಹಲ್ಗಾಮನಲ್ಲಿ ಉಗ್ರದ ದಾಳಿ ನಡೆಯುವುದಕ್ಕೆ ಕೇವಲ ಆರು ದಿನಗಳ ಮುನ್ನ, ಏಪ್ರಿಲ್ 16ರಂದು ಪಾಕಿಸ್ತಾನದ ಘಟಾನುಘಟಿಗಳೆಲ್ಲ ಹಾಗೂ ವಿದೇಶಿ ಮೂಲದ ಪಾಕಿಗಳು ಸೇರಿದ್ದ ಸಭೆಯೊಂದರಲ್ಲಿ ಸೇನೆಯ ಮುಖ್ಯಸ್ಥ ಆಸಿಮ್ ಮುನೀರ್ ಭಾರತದ ವಿರುದ್ಧ ಪ್ರಚೋದನಕಾರಿ ಭಾಷಣ ಬಿಗಿದಿದ್ದ.


ಪಾಕ್ ಪ್ರಧಾನಿ ಶೆಹಬಾಜ್ ಶರೀಫ್


ಪಾಕ್ ಆರ್ಮಿ ಚೀಫ್ ಮುನೀರ್

ಮುಸ್ಲಿಮರು ಹಿಂದೂಗಳು ಒಂದೆ ಅಲ್ಲ, ಒಂದಾಗಿರಲು ಸಾಧ್ಯವೂ ಇಲ್ಲ, ಹೀಗಾಗಿಯೇ ನಮ್ಮ ಹಿರಿಯರು ಹೋರಾಟ ಮಾಡಿ ರಾಷ್ಟ್ರಸಿದ್ಧಾಂತವನ್ನು ಎತ್ತಿ ಹಿಡಿದರು ಮತ್ತು ಅದರಿಂದಾಗಿಯೇ ಪಾಕಿಸ್ತಾನದ ಉದಯವಾಯಿತು ಎಂದು ಒದರಿದ್ದ, ಅಷ್ಟಕ್ಕೇ ಸುಮ್ಮನಿದ್ದರೆ ಹಾಳಾಗಿ ಹೋಗಲಿ ಎನ್ನಬಹುದಿತ್ತು. ಆದರ ಬಳಿಕ ಕಾಶ್ಮೀರವು ಪಾಕಿಸ್ತಾನದ ಕಂಠ ನಾಳ.... ಅಲ್ಲಿ ಭಾರತದ ಅಸ್ತಿತ್ವದ ವಿರುದ್ಧ ಪರಾಕ್ರಮದಿಂದ ಹೋರಾಡುತ್ತಿರುವ ಸೋದರರಿಗೆ ನಾವು ಬೆಂಬಲಿಸಬೇಕು, ಅವರ ಕೈ ಬಿಡಬಾರದು ಎಂಬ ಅಪಾಯಕಾರಿ ಹೇಳಿಕೆ ನೀಡಿದ! ಈ ಮೂಲಕ ಉಗ್ರರಿಗೆ ಕಾಶ್ಮೀರದಲ್ಲಿ ಗಲಭೆ ಎಬ್ಬಿಸಲು ಬಹಿರಂಗವಾಗಿಯೇ ಕುಮ್ಮಕ್ಕು ನೀಡಿದ. ಈ ವಿವಾದಾತ್ಮಕ ಭಾಷಣದ ಒಂದೇ ವಾರದಲ್ಲಿ ಪಹಲ್ಗಾಮ್‌ನಲ್ಲಿ ಉಗ್ರರ ಭೀಕರ ನರಮೇಧಕ್ಕೆ 26 ಮಂದಿ ಮುಗ್ಧ ಹಿಂದೂಗಳು ಬಲಿಯಾದರು.


ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್

ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿಯವರು ಕೂಡ ಪಾಕ್ ಆರ್ಮಿ ಚೀಫ್ ಅಸಿಮ್ ಮುನೀರ್‌ನ ಪ್ರಚೋದನಾತ್ಮಕ ಭಾಷಣಕ್ಕೂ ಪಹಲ್ಗಾಮ್ ನಲ್ಲಿ ನಡೆದಿರುವ ಟೆರರ್ ಅಟ್ಯಾಕ್‌ಗೂ ನೇರ ಸಂಬಂಧ ಇದೆ ಎಂದು ಹೇಳಿದ್ದಾರೆ. ಯೂಟ್ಯೂಬ್‌ನಲ್ಲಿ ಕೂಡ ಅಸಿಮ್ ಮುನೀರ್‌ನ ಪ್ರಚೋದಕ, ಕುಟಿಲ ರಾಜಕೀಯದ ಭಾಷಣವನ್ನು ನೀವು ವೀಕ್ಷಿಸಬಹುದು.

ಪಾಕಿಸ್ತಾನದ 77 ವರ್ಷಗಳ ಇತಿಹಾಸದಲ್ಲಿ ನಾಗರಿಕ ಆಡಳಿತಕ್ಕಿಂತ, ಪ್ರಭಾವಿ ಮಿಲಿಟರಿ ಸರ್ವಾಧಿಕಾರಿಗಳೇ ನೇರವಾಗಿ ಬಹುಕಾಲ ಆಳ್ವಿಕೆ ನಡೆಸಿದ್ದಾರೆ. ನಾಗರಿಕ ಆಡಳಿತದಲ್ಲೂ ರಾಜಕೀಯ ಮತ್ತು ಸರಕಾರದ ಮೇಲೆ ಸೇನೆಯ ಪ್ರಭಾವ ಹೆಚ್ಚು.

ಪಾಕಿಸ್ತಾನವನ್ನು ನೇರವಾಗಿ ಮಿಲಿಟರಿ ಆಡಳಿತಕ್ಕೆ ಒಳಪಡಿಸಿದ್ದ ಸೇನೆಯ ಸರ್ವಾಧಿಕಾರಿಗಳಲ್ಲಿ ಜನರಲ್ ಆಯೂಬ್ ಖಾನ್ (1958-1969), ಜನರಲ್ ಯಾಹ್ಯಾ ಖಾನ್ (1969-1971), ಜನರಲ್ ಜಿಯಾ ಉಲ್ ಹಕ್ (1977-1988) ಮತ್ತು ಜನರಲ್ ಪರ್ವೇಜ್ ಮುಷರಫ್ (1999-2008) ಇದ್ದರು.

ಅಸೀಮ್ ಮುನೀರ್‌ನ ತಂದೆ ಇಮಾಮ್ ಆಗಿದ್ದ, ಅಸೀಮ್‌ನ ಭಾಷಣಗಳೂ ಮತೀಯ ಪ್ರಚೋದಕ ಭಾಷಣವಾಗಿರುತ್ತದೆ. ಒಬ್ಬ ವೃತ್ತಿಪರ ಸೇನಾ ದಂಡನಾಯಕನಂತೆ ಇರುವುದಿಲ್ಲ.

ಇತ್ತೀಚೆಗೆ ಪಾಕಿಸ್ತಾನ ಸುಪ್ರೀಂಕೋರ್ಟ್ ಅಸೀಮ್ ಮುನೀರ್‌ನ ಕೈಯನ್ನು ಮತ್ತಷ್ಟು ಬಲಪಡಿಸಿದೆ. ಸೇನೆಯ ಕೋರ್ಟ್‌ಗಳಲ್ಲಿ ನಾಗರಿಕರ ವಿಚಾರಣೆಗೆ ಅನುಮತಿ ನೀಡಿದೆ.

ಮುಷರಫ್ ನಿರ್ಗಮನದ ಬಳಿಕ ಹಲವು ವರ್ಷಗಳ ಕಾಲ ಪಾಕಿಸ್ತಾನದಲ್ಲಿ ರಾಜಕೀಯ ಸ್ಥಿರತೆ ಇತ್ತು. ಆದರೆ ತೆರೆಮರೆಯಲ್ಲಿ ಸೇನೆಯ ಪ್ರಭಾವ ಎಂದಿನಂತಿತ್ತು. ನವಾಜ್ ಷರೀಫ್ ಆಡಳಿತ ಸಾಕಾದಾಗ ಇಮ್ರಾನ್ ಖಾನ್‌ನನ್ನು ಸೇನೆ ಬೆಂಬಲಿಸಿತು. ಬಳಿಕ ಇಮ್ರಾನ್ ಖಾನ್ ತಮ್ಮ ಭಿನ್ನ ಐಡಿಯಾಗಳಿಂದ ದೇಶವನ್ನು ನಡೆಸಲು ಬಯಸಿದಾಗ ಸೇನೆಗೆ ಮತ್ತೆ ರುಚಿಸಲಿಲ್ಲ, 2022ರಲ್ಲಿ ಇಮ್ರಾನ್ ಖಾನ್ ಅವರನ್ನು ಮೇಲ್ನೋಟಕ್ಕೆ ಅವಿಶ್ವಾಸ ಮತದ ಮೂಲಕ ಅಧಿಕೃತವಾಗಿ ಅಧಿಕಾರದಿಂದ ಕೆಳಗಿಳಿಸಲಾಯಿತು. ಆದರೆ ಮಿಲಿಟರಿ ನಾಯಕತ್ವವನ್ನು ಎದುರು ಹಾಕಿದ್ದಕ್ಕೆ ಇಮ್ರಾನ್ ಖಾನ್ ರಾಜಕೀಯ ಭವಿಷ್ಯಕ್ಕೆ ಮುಳುವಾಯಿತು. ಇದೀಗ ಜನರಲ್ ಅಸೀಮ್ ಸರ್ವಾಧಿಕಾರಿಯಾಗಲು ಬಯಸುತ್ತಿದ್ದಾನೆ. ಭಾರತದ ಜತೆಗೆ ಸಂಘರ್ಷವಾದರೆ ಹಾದಿ ಸುಗಮ ಎಂಬ ದುರಾಲೋಚನೆ ಆತನದ್ದು.



ಆಪರೇಷನ್ ಸಿಂದೂರ್ ಮೂಲಕ ಭಾರತವು ಪಾಕಿಸ್ತಾನಕ್ಕೆ ತಕ್ಕ ಪಾಠವನ್ನು ಕಲಿಸಿದೆ. ಆದರೆ ಅದು ಪಾಠವನ್ನು ಮರೆತಿದೆ. ಆದ್ದರಿಂದಲೇ ಭಾರತ ಮತ್ತೆ ಭಯೋತ್ಪಾದನೆಗೆ ಕುಮ್ಮಕ್ಕು ನೀಡಿದರೆ ಅದನ್ನು ಯುದ್ಧವೆಂದೇ ಪರಿಗಣಿಸುವುದಾಗಿ ಕದನ ವಿರಾಮದ ಷರತ್ತನ್ನು ಮಂಡಿಸಿದೆ. ಮೇ 12ಕ್ಕೆ ಮಾತುಕತೆ ನಡೆಯಲಿದೆ. ಆಗ ನೋಡೋಣ.

ಯುದ್ಧ ಎಂದರೆ ಮಿಲಿಟರಿ ಕಾರ್ಯಾಚರಣೆ ಮಾತ್ರವಲ್ಲ, ಅದೊಂದು ಪ್ರಮುಖ ಭಾಗವಾಗಿದ್ದರೆ, ಇನ್ನೂ ಹಲವು ಆಯಾಮಗಳಿವೆ. ರಾಜತಾಂತ್ರಿಕ, ಆರ್ಥಿಕ ಸಮರಗಳೂ ಇವೆ. ಅವುಗಳಿಗೆ ಭಾರತ ಕದನ ವಿರಾಮ ಹಾಕಿಲ್ಲ ಆದರೆ ಈ ಎಲ್ಲ ವಿದ್ಯಮಾನಗಳು ಪಾಕಿಸ್ತಾನ ಎಷ್ಟೊಂದು ಮತಾಂಧ ರಾಷ್ಟ್ರವಾಗಿದೆ, ಉಗ್ರರನ್ನು ಹೇಗೆ ಸಾಕುತ್ತಿದೆ ಎಂಬುದು ಜಗತ್ತಿನೆದುರು ಬಟಾ ಬಯಲಾಗಿದೆ. ಸತ್ತ ಭಯೋತ್ಪಾದಕರನ್ನು ಅಲ್ಲಿನ ಸೈನಿಕರಿಗೂ ನೀಡದಿರುವಷ್ಟು ಗೌರವದಿಂದ ಅಂತಿಮ ಸಂಸ್ಕಾರ ನಡೆಸುವ ದೃಶ್ಯಗಳು ಎಲ್ಲರ ಕಣ್ತೆರೆಸಿವೆ. ಪಾಕಿಸ್ತಾನದ ರಾಜಕಾರಣಿಗಳ ಅಂತಃಕಲಹ, ಸೇನಾಧಿಕಾರಿಗಳ ಅಧಿಕಾರ ದಾಹ ಜಾಹೀರಾಗಿದೆ.

ಅಮೇರಿಕಾ ಅಧ್ಯಕ್ಷ ಟ್ರಂಪ್ ಅವರ ಮಧ್ಯಸ್ಥಿಕೆಯಲ್ಲಿ ಭಾರತ ಮತ್ತು ಪಾಕಿಸ್ತಾನ ಕದನ ವಿರಾಮಕ್ಕೆ ಒಪ್ಪಿಕೊಂಡ ಕೆಲವೇ ಗಂಟೆಗಳಲ್ಲಿ ಪಾಕಿಸ್ತಾನ ಅದನ್ನು ಉಲ್ಲಂಘಿಸಿದೆ! ಪಾಕಿಸ್ತಾನ್ ಪ್ರಧಾನಿ ಶೆಹಬಾಜ್ ಷರೀಫ್ ಉಭಯ ರಾಷ್ಟ್ರಗಳ ಒಪ್ಪಂದಕ್ಕೆ ಸಹಿ ಹಾಕಿದ್ದಕ್ಕಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಧನ್ಯವಾದ ಹೇಳಿದ ಕೆಲವು ಗಂಟೆಗಳಲ್ಲಿ ಈ ಘಟನೆ ನಡೆದಿದೆ!

ಕಳೆದ ಮೇ 9ರ ರಾತ್ರಿ 9 ಗಂಟೆ ಸುಮಾರಿಗೆ ಶ್ರೀನಗರ ಮತ್ತು ಗುಜರಾತ್‌ನಲ್ಲಿ ಡ್ರೋನ್‌ಗಳು ಮತ್ತೆ ಕಾರ್ಯಾಚರಣೆಗೆ ಇಳಿದಿವೆ. ಭಾರತದ ವಾಯುವ್ಯ ಗಡಿಯಲ್ಲಿ ವಿವೇಚನೆಯಿಲ್ಲದ ಶೆಲ್‌ಗಳ ದಾಳಿ ನಡೆಯುತ್ತಿದೆ ಎಂಬ ಸುದ್ದಿ ಹೊರಬಿದ್ದಿದೆ. ಹಾಗಾದರೆ ಕದನ ವಿರಾಮ ಒಪ್ಪಂದ ಏನಾಯ್ತು?

ಶ್ರೀನಗರದಾದ್ಯಂತ ಸ್ಫೋಟಗಳು ಕೇಳಿಬಂದಿವೆ ಎಂದು ಆಘಾತಕ್ಕೊಳಗಾದ ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ! ಗುಜರಾತ್ ಗೃಹ ಸಚಿವ ಹರ್ಷ್ ಸಾಂಘವಿ ಕೂಡ ಕಚ್ ಜಿಲ್ಲೆಯಲ್ಲಿ ಹಲವಾರು ಡ್ರೋನ್‌ಗಳು ಪತ್ತೆಯಾಗಿವೆ ಎಂದು ಟ್ವೀಟ್ ಮಾಡಿದ್ದಾರೆ. ಈಗ ಸಂಪೂರ್ಣ ಬ್ಲ್ಯಾಕೌಟ್ ಜಾರಿಗೆ ತರಲಾಗುವುದು. ದಯವಿಟ್ಟು ಸುರಕ್ಷಿತವಾಗಿರಿ,




ಭಯಪಡಬೇಡಿ ಎಂದು ಬರೆದುಕೊಂಡಿದ್ದರು.

ಕಚ್ ಪ್ರದೇಶದಲ್ಲಿ ಸಂಜೆ ಕದನ ವಿರಾಮದ ಸುದ್ದಿಯನ್ನು ಸ್ವಾಗತಿಸಿದ ಜನರು, ನಂತರ ಅದು ಏಕೆ ಉಲ್ಲಂಘನೆಯಾಯಿತು ಎಂದು ಅಚ್ಚರಿಪಡುತ್ತಿದ್ದಾರೆ. ಪಾಕಿಸ್ತಾನ್ ಒಪ್ಪಂದವನ್ನು ಪಾಲಿಸುತ್ತದೆ ಎಂದು ಹೇಗೆ ನಂಬುವುದು?

ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ತಡರಾತ್ರಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪಾಕಿಸ್ತಾನದ ಕದನ ವಿರಾಮ ಉಲ್ಲಂಘನೆಯನ್ನು ದೃಢಪಡಿಸಿ ಖಂಡಿಸಿದ್ದಾರೆ. ಭಾರತವೇನು ಸುಮ್ಮನೆ ಕುಳಿತಿಲ್ಲ, ಪ್ರತೀಕಾರ ತೀರಿಸಿಕೊಳ್ಳುತ್ತಿದೆ.

ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಸಂದರ್ಶನ ನೀಡಿರುವ ಕಾರ್ಯತಂತ್ರದ ತಜ್ಞ ಮತ್ತು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ (ಜೆಎನ್ಯು) ಗಲ್ಫ್ ಅಧ್ಯಯನಗಳ ಮಾಜಿ ನಿರ್ದೇಶಕ ಅಫ್ತಾಬ್ ಕಮಲ್ ಪಾಷಾ, ಕದನ ವಿರಾಮ ಉಲ್ಲಂಘನೆಯು ಪಾಕಿಸ್ತಾನದಲ್ಲಿ ನಾಗರಿಕ ಸರ್ಕಾರ ಮತ್ತು ಮಿಲಿಟರಿ ನಾಯಕತ್ವದ ನಡುವಿನ ಸಂಬಂಧ ಹದಗೆಟ್ಟದ್ದರ ಪರಿಣಾಮವಾಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ ಎಂದು ಹೇಳಿದ್ದಾರೆ!

ಗಲ್ಫ್ ರಾಷ್ಟ್ರಗಳು ಮತ್ತು ಟರ್ಕಿಯ ಒತ್ತಡದ ಪರಿಣಾಮವಾಗಿ ಈ ಕದನ ವಿರಾಮ ಉಂಟಾಗಿದೆ. ಒಂದು ವೇಳೆ ಪಾಕಿಸ್ತಾನವು ಭಾರತದ ವಿರುದ್ಧ ಪರಮಾಣು ಯುದ್ಧತಂತ್ರದ ಅಸ್ತ್ರಗಳನ್ನು ಸಹ ಬಳಸಬಹುದು. ಪರಿಸ್ಥಿತಿ ಕೈ ಮೀರಿಹೋಗಬಹುದು ಎಂಬ ಭಯವಿದೆ ಎಂದಿದ್ದಾರೆ!

☞ 12


ಉಗ್ರ ಮಸೂದ್ ಅಜರ್ ಫ್ಯಾಮಿಲಿ ಉಡೀಸ್!

## ಪಾಕ್‌ಗೆ ಆರ್ಥಿಕ ನೆರವು ನೀಡಿದ ಐಎಂಎಫ್ ವಿರುದ್ಧ ಒವೈಸಿ ಕಿಡಿ!


ಅಸಾದುದ್ದೀನ್ ಓವೈಸಿ

**ಪಾ**ಕಿಸ್ತಾನಕ್ಕೆ ಶತಕೋಟಿ ರೂ ಆರ್ಥಿಕ ನೆರವು ಘೋಷಿಸಿರುವ IMF (Inter National Millitant Fund) ವಿರುದ್ಧ ಹೈದರಾಬಾದ್ ಸಂಸದ, ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಾಕಿಸ್ತಾನ ಆರ್ಥಿಕ ನೆರವನ್ನು ದುರುಪಯೋಗಪಡಿಸಿಕೊಳ್ಳಲಿದೆ ಮತ್ತು ಐಎಂಎಫ್ ಪಾಕ್‌ಗೆ ಆರ್ಥಿಕ ನೆರವು ನೀಡುವ ಮೂಲಕ ಭಯೋತ್ಪಾದನೆಗೆ ಬೆಂಬಲ ನೀಡುತ್ತಿದೆ ಎಂದು ಓವೈಸಿ ಟೀಕಿಸಿದ್ದಾರೆ. ಇದೇ ವೇಳೆ ಪಾಕ್ ವಿರುದ್ಧದ ಹೋರಾಟದ ಸಮಯದಲ್ಲಿ ಏಕೀಕೃತ ಭಾರತಕ್ಕೆ ಭಾರತೀಯ ಮುಸ್ಲಿಮರ ಬದ್ಧತೆಯನ್ನು ಓವೈಸಿ ಪುನರುಚ್ಚರಿಸಿದ್ದಾರೆ.

ಪಾಕಿಸ್ತಾನಕ್ಕೆ ಇತ್ತೀಚೆಗೆ ಒಂದು ಬಿಲಿಯನ್ ಡಾಲರ್ IMF ಬೇಲ್ ಔಟ್ ಪ್ಯಾಕೇಜ್ ಕುರಿತು ಪ್ರತಿಕ್ರಿಯೆ ನೀಡಿರುವ ಓವೈಸಿ ಇದು ಅಧಿಕೃತ ಭಿಕ್ಷೆ ಎಂದು ವ್ಯಂಗ್ಯವಾಡಿದ್ದಾರೆ. ಪಾಕ್ ಉಗ್ರವಾದ ಪೋಷಣೆ ವಿಚಾರ ಗೊತ್ತಿದ್ದರೂ ಯುಎಸ್‌ಎ, ಜರ್ಮನಿ ಮತ್ತು ಜಪಾನ್ ಅವರಿಗೆ ಹಣದ ನೆರವು ನೀಡಲು ಹೇಗೆ ಒಪ್ಪಿಕೊಂಡವು? ಎಂದು ಓವೈಸಿ ಪ್ರಶ್ನಿಸಿದ್ದಾರೆ.

ನಿಮಗೆ (ಪಾಕಿಸ್ತಾನದವರಿಗೆ) ಆರ್ಥಿಕತೆಯನ್ನು ಹೇಗೆ ನಿಭಾಯಿಸಬೇಕೆಂದು ತಿಳಿದಿಲ್ಲ, ನೀವು ಅಲ್ಲಿ ಕುಳಿತು ಇಸ್ಲಾಂ ಎಂದರೇನು ಎಂದು ನಮಗೆ ಹೇಳುತ್ತಿದ್ದೀರಿ! ಆದರೆ ನಿಮ್ಮಲ್ಲಿರುವ ಎಲ್ಲವೂ ಇಲ್ಲಿನ ಶಾಂತಿಯನ್ನು ಹಾಳು ಮಾಡಲು ಮತ್ತು ಹಿಂದೂ ಮತ್ತು ಮುಸ್ಲಿಮರ ನಡುವೆ ಸಂಘರ್ಷವನ್ನು ಸೃಷ್ಟಿಸುವ ತಪ್ಪು ನೀತಿಗಳಾಗಿವೆ ಎಂದು ಓವೈಸಿ ಪಾಕ್ ವಿರುದ್ಧವೂ ವಾಗ್ದಾಳಿ ನಡೆಸಿದ್ದಾರೆ.

## ಕಿರ್ನಾ ಹಿಲ್ಸ್ ಅಣ್ವಸ್ತ್ರ ದಾಸ್ತಾನು ಕೇಂದ್ರ ಉಡೀಸ್?!

**ಪಾ**ಕಿಸ್ತಾನದ ಭೂಪ್ರದೇಶದೊಳಗೆ ಭಾರತ ಇತ್ತೀಚೆಗೆ ನಡೆಸಿದ ಉನ್ನತ ಮಟ್ಟದ - ನಿಖರ ವಾಯುದಾಳಿಗಳ ನಂತರ, ರಾಜತಾಂತ್ರಿಕ ವಿಶ್ಲೇಷಕರು, ನಿವೃತ್ತ ಸೈನಿಕರು ಪಾಕ್‌ಗೆ ಉಂಟಾಗಿರಬಹುದಾದ ಹಾನಿಯ ಬಗ್ಗೆ ಚರ್ಚೆಯಲ್ಲಿ ತೊಡಗಿದ್ದಾರೆ. ಈ ಪೈಕಿ ಗಮನ ಸೆಳೆಯುತ್ತಿರುವ ಒಂದು ವಿಶ್ಲೇಷಣೆ ಎಂದರೆ ಅದು ಭಾರತ ಪಾಕಿಸ್ತಾನದ ನ್ಯೂಕ್ಲಿಯರ್ ದಾಸ್ತಾಕು ಕೇಂದ್ರಗಳ ಮೇಲೆ ನಿಖರ ದಾಳಿ ನಡೆಸಿ ಹಾನಿ ಮಾಡಿದೆಯಾ? ಎಂಬುದಾಗಿದೆ.



ಪಾಕಿಸ್ತಾನದ ಅಣು ಬಾಂಬ್ ದಾಸ್ತಾನು ಕೇಂದ್ರ ಕಿರ್ನಾ ಹಿಲ್ಸ್ ಮೇಲೆ ಭಾರತ ದಾಳಿ ನಡೆಸಿದೆ ಎಂಬ ಸುದ್ದಿ ಹರಿದಾಡುತ್ತಿದೆ. ಈ ಬಗ್ಗೆ ಅಧಿಕೃತ ಮಾಹಿತಿ ಇನ್ನಷ್ಟೇ ಲಭ್ಯವಾಗಬೇಕಿದೆಯಾದರೂ ಪಾಕ್ ಈ ಬಗ್ಗೆ ರಕ್ಷಣಾತ್ಮಕ ಹೇಳಿಕೆಗಳನ್ನು ನೀಡುತ್ತಿರುವುದು ಅನುಮಾನಗಳಿಗೆ ಕಾರಣವಾಗಿದೆ. ಅಷ್ಟೇ ಅಲ್ಲದೇ ಅಣ್ವಸ್ತ್ರದ ಬೆದರಿಕೆ ಕಾರಣದಿಂದಲೇ ಪಾಕ್ ಅಮೇರಿಕ ಮೊರೆ ಹೋಗಿ ಕದನ ವಿರಾಮಕ್ಕೆ ಗೋಗರೆಯಿತಾ? ಎಂಬ ಪ್ರಶ್ನೆಯೂ ಉದ್ಭವಿಸುತ್ತಿದೆ.

ಪಾಕಿಸ್ತಾನಿ ಅಧಿಕಾರಿಗಳು ಕಿರ್ನಾ ಹಿಲ್ಸ್ ದಾಳಿಯ ತೀವ್ರತೆಯನ್ನು ಮರೆಮಾಚುತ್ತಿದ್ದು, ಖಾಲಿ ಬೆಟ್ಟದ ಇಳಿಜಾರು ಪ್ರದೇಶದಲ್ಲಿ ಮಾತ್ರ ದಾಳಿಯಾಗಿದೆ ಎಂದು ಹೇಳುತ್ತಿದೆಯಾದರೂ, ಹೊರಬಂದಿರುವ ಉಪಗ್ರಹ ಚಿತ್ರಣ ಮತ್ತು ಮಿಲಿಟರಿ ವಿಶ್ಲೇಷಣೆಯು ಬೇರೆಯದೇ ಆದ ಮಾಹಿತಿಯನ್ನು ನೀಡುತ್ತಿದೆ.

ಕಿರ್ನಾ ಹಿಲ್ಸ್ ಪ್ರದೇಶವನ್ನು ಸಾಮಾನ್ಯವಾಗಿ ದೂರದ ಮತ್ತು ಮುಖ್ಯವಲ್ಲದ ಪ್ರದೇಶ ಎಂದು ನಿರ್ಲಕ್ಷ್ಯಿಸಲಾಗುತ್ತದೆ, ಇದು ಭೂಗತ ಪರಮಾಣು ಶಸ್ತ್ರಾಸ್ತ್ರಗಳ ಸಂಗ್ರಹ ಸಂಕೀರ್ಣವನ್ನು ಹೊಂದಿದೆ ಎಂಬುದು ಮಿಲಿಟರಿ ತಜ್ಞರ ನಂಬಿಕೆ. ಇದಕ್ಕೆ ಪೂರಕವೆಂಬಂತೆ ಉಪಗ್ರಹ ಚಿತ್ರಗಳಲ್ಲಿ ಬಹು ಗೋಚರ ಪ್ರವೇಶದ್ವಾರಗಳು ಮತ್ತು ಬಲವರ್ಧಿತ ಸುರಂಗ ರಚನೆಗಳನ್ನು ಗುರುತಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇದು ಪಾಕ್‌ನ ಕಾರ್ಯತಂತ್ರದ ಮೌಲ್ಯದ ಬಗ್ಗೆ ದೀರ್ಘಕಾಲದ ಊಹಾಪೋಹಗಳನ್ನು ಬೆಂಬಲಿಸುತ್ತದೆ. ರಕ್ಷಣಾ ವಿಶ್ಲೇಷಕರ ಪ್ರಕಾರ, ಈ ತಾಣವನ್ನು ಬಹು ಬಂಕರ್ ಗಳನ್ನು ಛಿದ್ರಗೊಳಿಸಿ ನುಗ್ಗುವ ಯುದ್ಧಸಾಮಗ್ರಿಗಳಿಂದ ಹೊಡೆಯಲಾಗಿದೆ. ಇದು ಸೂಕ್ಷ್ಮ ಮೂಲಸೌಕರ್ಯವನ್ನು ದುರ್ಬಲಗೊಳಿಸಲು ಅಥವಾ ಕೆಡಿಸಲು ಉದ್ದೇಶಪೂರ್ವಕ ಪ್ರಯತ್ನವನ್ನು ಸೂಚಿಸುತ್ತದೆ ಎಂದು ಹೇಳಲಾಗುತ್ತಿದೆ.

ಪರಮಾಣು ದುರಂತವನ್ನು ಉಂಟುಮಾಡದೆ ಇಂತಹ ಪರಮಾಣು ದಾಸ್ತಾನು ತಾಣವನ್ನು ಗುರಿಯಾಗಿಸುವುದು ಅಸಾಧ್ಯ ಎಂಬ ಅಭಿಪ್ರಾಯಗಳಿವೆ. ಇದಕ್ಕೆ ಪ್ರತಿಯಾಗಿ ಪರಮಾಣು ಶಸ್ತ್ರಾಸ್ತ್ರಗಳನ್ನು ವ್ಯಾಪಕವಾದ ಸುರಕ್ಷತಾ ಕ್ರಮಗಳೊಂದಿಗೆ ನಿರ್ಮಿಸಲಾಗಿದೆ ಮತ್ತು ಸಾಂಪ್ರದಾಯಿಕ ದಾಳಿಗಳಿಂದ ಸ್ಫೋಟಿಸಲು ಸಾಧ್ಯವಿಲ್ಲ ಎಂದು ವಿಶ್ಲೇಷಕರು ಹೇಳುತ್ತಾರೆ. ಆದರೆ ಈ ಅಭಿಪ್ರಾಯಕ್ಕೆ ತದ್ವಿರುದ್ಧ ಎಂಬಂತೆ ಶೀತಲ ಸಮರದ ಸಮಯದಲ್ಲಿ ಯುನೈಟೆಡ್ ಸ್ಟೇಟ್ಸ್ ಮತ್ತು ಸೋವಿಯತ್ ಒಕ್ಕೂಟ ಅಪಘಾತಗಳಲ್ಲಿ ಡಜನ್ಗಟ್ಟಲೆ ಪರಮಾಣು ಶಸ್ತ್ರಾಸ್ತ್ರಗಳನ್ನು ಕಳೆದುಕೊಂಡಿವೆ. ಆದರೆ ಇವುಗಳಲ್ಲಿ ಯಾವುದೂ ಅನಿಯಂತ್ರಿತ ಸ್ಫೋಟಗಳಿಗೆ ಕಾರಣವಾಗಲಿಲ್ಲ. ಯಾವುದೇ ಸಂಭಾವ್ಯ ವಿಕಿರಣ ಸೋರಿಕೆಗಳು ಪರ್ವತದ ಭೂಗತ ಪದರಗಳಲ್ಲಿ ಮುಚ್ಚಿಹೋಗಿರುತ್ತವೆ ಎಂದು ತಜ್ಞರು ಹೇಳುತ್ತಾರೆ.

ನ್ಯೂಯಾರ್ಕ್ ಟೈಮ್ಸ್ ವರದಿಯ ಪ್ರಕಾರ, ಆರಂಭದಲ್ಲಿ ಗಡಿಯಾಚೆಗಿನ ಭಯೋತ್ಪಾದನೆಯ ಮೇಲಿನ ನಿಯಮಿತ ಉಲ್ಬಣದಂತೆ ಕಾಣುತ್ತಿದ್ದ ಭಾರತದ ದಾಳಿ ಅಂತಿಮವಾಗಿ ವಾಷಿಂಗ್ಟನ್‌ನಲ್ಲಿ ಗಂಭೀರ ಕಳವಳವನ್ನು ಹುಟ್ಟುಹಾಕಿತು. ಭಾರತೀಯ ದಾಳಿಗಳು ಉಗ್ರಗಾಮಿ ಮೂಲಸೌಕರ್ಯವನ್ನು ಮಾತ್ರವಲ್ಲದೆ, ಗಡಿಯಾಚೆಯಿಂದ ನಿರಂತರ ಪ್ರಚೋದನೆ ಮತ್ತು ಉಲ್ಬಣದ ಪರಿಣಾಮವಾಗಿ ಪಾಕಿಸ್ತಾನದ ವಾಯುನೆಲೆಗಳನ್ನು ಗುರಿಯಾಗಿಸಲು ಪ್ರಾರಂಭಿಸಿದಾಗ ಈ ಬದಲಾವಣೆ ಸಂಭವಿಸಿತು. ಕೆಲವೇ ನಿಮಿಷಗಳಲ್ಲಿ, ಇಸ್ಲಾಮಾಬಾದ್ ಬಳಿಯ ಆಯಕಟ್ಟಿನ ಪ್ರಮುಖವಾದ ನೂರ್ ಖಾನ್ ನೆಲೆ ಸೇರಿದಂತೆ 11 ಪಾಕಿಸ್ತಾನಿ ವಾಯುನೆಲೆಗಳು ಹಾನಿಗೊಳಗಾದವು.

ಪಾಕಿಸ್ತಾನದ ಪ್ರಮುಖ ಪರಮಾಣು ಕಮಾಂಡ್-ಅಂಡ್-ಕಂಟ್ರೋಲ್ ಸೌಲಭ್ಯಗಳಿಗೆ ನೂರ್ ಖಾನ್ ನೆಲೆ ಹತ್ತಿರದಲ್ಲೇ ಇದ್ದ ಕಾರಣ ಅಮೆರಿಕದ ಅಧಿಕಾರಿಗಳು ಎಚ್ಚೆತ್ತುಕೊಂಡು ಮಧ್ಯಪ್ರವೇಶಿಸಿದ್ದಾರೆ ಎಂದು ವರದಿಯಾಗಿದೆ. ಪಾಕಿಸ್ತಾನದ ಪರಮಾಣು ಸಾಮರ್ಥ್ಯಗಳ ಮೇಲೆ ವಿನಾಶಕಾರಿ ದಾಳಿ ಕಳವಳಕ್ಕೆ ಕಾರಣವಾಯಿತು ಮತ್ತು ಈ ಪ್ರದೇಶದಲ್ಲಿನ ಕಾರ್ಯತಂತ್ರದ ಸಮತೋಲನವನ್ನು ಮೂಲಭೂತವಾಗಿ ಬದಲಾಯಿಸಿತು.

ಇಸ್ಲಾಮಾಬಾದ್ ಯಾವುದೇ ಗಮನಾರ್ಹ ನಷ್ಟಗಳನ್ನು ಅಧಿಕೃತವಾಗಿ ನಿರಾಕರಿಸಿದ್ದರೂ, ಭಾರತೀಯ ಕಾರ್ಯಾಚರಣೆಯ ಪ್ರಮಾಣ ಮತ್ತು ನಿಖರತೆಯು ಪಾಕಿಸ್ತಾನಿ ರಕ್ಷಣಾ ಯೋಜಕರು ಮತ್ತು ಅವರ ಅಂತರರಾಷ್ಟ್ರೀಯ ಮಿತ್ರರಾಷ್ಟ್ರಗಳೆರಡನ್ನೂ ಬೆಚ್ಚಿಬೀಳಿಸಿದೆ. ಕಿರ್ನಾ ಹಿಲ್ಸ್ ಈಗ ಗಮನ ಸೆಳೆಯುತ್ತಿರುವುದರಿಂದ, ದಕ್ಷಿಣ ಏಷ್ಯಾದ ದುರ್ಬಲ ಪರಮಾಣು ತಡೆಗಟ್ಟುವಿಕೆ ಹೊಸ ಅಪಾಯಕಾರಿ ಹಂತವನ್ನು ಪ್ರವೇಶಿಸಿದೆಯೇ ಎಂದು ಜಗತ್ತು ಸೂಕ್ಷ್ಮವಾಗಿ ಗಮನಿಸುತ್ತಿದೆ...

# ಹುಟ್ಟುಹಬ್ಬದ ದಿನ ಪಟಾಕಿ ಸಿಡಿಸಿದಕ್ಕೆ ಇಬ್ಬರು ಕೊಲೆಯಾಗಿ ಹೋದರು!

6 ☞

ಬಟ್ಲಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ ಈಶ್ವರಪ್ಪನ ಮಕ್ಕಳು ಮಲ್ಲೇಶ್‌ರವರ ಮೇಲೆ ದ್ವೇಷ ಸಾಧಿಸುತ್ತಿದ್ದರು.

ಬಟ್ಲಹಳ್ಳಿಯ ಬಟ್ಟೆ ವ್ಯಾಪಾರಿ ದೊಡ್ಡಲಿಂಗಪ್ಪನ ಮಲ್ಲೇಶ್‌ರವರ ಮನೆ ಮುಂದಿನ ದಾರಿ ವಿಚಾರದಲ್ಲಿ ಸಂಬಂಧಿಯಾದ ಸುರೇಶ್ ನಡುವೆ ವಿವಾದವಿದ್ದು ಈ ಬಗ್ಗೆ ಅನೇಕ ಬಾರಿ ಗಲಾಟೆಯಾಗಿದ್ದು, ಮಾರ್ಚ್ 1ರಂದು ಈ ವಿಷಯವಾಗಿ ಜಗಳವಾಗಿ ಸುರೇಶ್‌ರವರು ಮಲ್ಲೇಶ್ ರವರನ್ನು ಚರಂಡಿಗೆ ತಳ್ಳಿದ್ದು ಮೂಗೇಟುಗಳಾಗಿತ್ತು, ಸುರೇಶ್ ವಿರುದ್ಧ ಬಟ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡುವುದು ಬೇಡವೆಂದು ಸುಮ್ಮನಿದ್ದರು. ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಮಲ್ಲೇಶ್ ಮನೆ ಮುಂದಿನ ರಸ್ತೆಯಲ್ಲಿ ಕಲ್ಲುಗಳನ್ನು ತೆಗೆದು ಸ್ವಚ್ಛ ಮಾಡುತ್ತಿದ್ದಾಗ ಸುರೇಶ್‌ರವರ ಬಾವಮೈದುನನಾದ ಈಶ್ವರಪ್ಪನ ಮಕ್ಕಳಾದ ಜಾನ್‌ಬಾಬು, ಮಹಿಮರಾಜು ಹಾಗೂ ಲೇಟ್ ಗಂಗನ್ನನ ಮಕ್ಕಳಾದ ಸಾಯಿನಾಥ್, ದೇವರಾಜ್‌ರವರು ಏಕಾಏಕಿ ಬಂದು ನೀನು ರಸ್ತೆ ವಿಚಾರದಲ್ಲಿ ನಮ್ಮ ಭಾವ ಸುರೇಶ್‌ರವರ ಮೇಲೆ ಗಲಾಟೆ ಮಾಡುತ್ತೀಯ, ಲೋಫರ್ ನನ್ನ ಮಗನೇ ನಿನ್ನಮ್ಮನ್.... ಎಂದು ಅವ್ಯಾಚ ಶಬ್ದಗಳಿಂದ ಬೈದು, ನೆಲದ ಮೇಲೆ ಬಿದ್ದಿದ್ದ ಚೂಪಾದ ಕಲ್ಲನ್ನು ತೆಗೆದುಕೊಂಡ ಜಾನ್‌ಬಾಬು, ಮಲ್ಲೇಶ್‌ರವರ ಬಲಕಣ್ಣಿನ ಉಬ್ಬಿನ ಮೇಲೆ ಹೊಡೆದು ರಕ್ತಗಾಯ ಪಡಿಸಿದನು. ಮಹಿಮರಾಜು ಎಂದು ಕಬ್ಬಿಣದ ಕಂಬಿಯಿಂದ ಮಲ್ಲೇಶ್‌ನ ಬೆನ್ನು ಮತ್ತು ಮೈಕೈ ಮೇಲೆ ಹೊಡೆದನು. ಸಾಯಿನಾಥ್ ಕೈಯಿಂದ ಬಾಯಿಯ ಬಲದವಡೆ ಮತ್ತು ಕತ್ತಿನ ಬಳಿ ಗುದ್ದಿಯನ್ನು, ದೇವರಾಜ್ ಕೈಗಳಿಂದ ಹಲ್ಲೆ ಮಾಡಿ ಕಾಲಿನಿಂದ ಒದ್ದನು. ಆಗ ಜಾನ್‌ಬಾಬು ಇವನನ್ನು ಬಿಡಬಾರದು ಸಾಯಿಸಬೇಕೆಂದು ಹೇಳುತ್ತಿದ್ದಾಗ ಮಲ್ಲೇಶನ ಸಂಬಂಧಿಕರಾದ ಆದಿನಾರಾಯಣ ಮತ್ತು ಸಾಯಿಕುಮಾರ್ ರವರು ಜಗಳ ಬಿಡಿಸಿ ಸುಸ್ತಾಗಿ ಕೆಳಗೆ ಬಿದ್ದಿದ್ದ ಮಲ್ಲೇಶ್ ರವರನ್ನು ಬಟ್ಲಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು. ವಿನಾಃಕಾರಣ ನನ್ನ ಮೇಲೆ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿರುವ ಜಾನ್‌ಬಾಬು, ಮಹಿಮರಾಜು, ಸಾಯಿನಾಥ್, ದೇವರಾಜ್‌ರವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ದೂರು ನೀಡಿದರು. ಈ ವಿಚಾರವಾಗಿ ಪೊಲೀಸರು ಕ್ರಮ ಕೈಗೊಂಡಿದ್ದರು.


ಎಸ್ಪಿ ಕುಶಾಲ್ ಚೌಕ್ಸೆರವರು ಮೃತನ ಸಂಬಂಧಿಕರೊಂದಿಗೆ ಚರ್ಚಿಸುತ್ತಿರುವುದು


## ಕ್ಷುಲ್ಲಕ ಕಾರಣಕ್ಕೆ ಜೋಡಿ ಕೊಲೆ

ಆದಿಮೂರ್ತಪ್ಪನ ಮಗ ಗಂಗನ್ನ (52) ಏಪ್ರಿಲ್ 13ರಂದು ರಾತ್ರಿ 9 ಗಂಟೆ ಸಮಯದಲ್ಲಿ ಬಟ್ಲಹಳ್ಳಿ ಪೊಲೀಸ್ ಠಾಣೆಗೆ ಹಾಜರಾಗಿ ಇಂದು ಸಂಜೆ 6.30 ಗಂಟೆ ಸಮಯದಲ್ಲಿ ಈಶ್ವರಪ್ಪನ ಮಕ್ಕಳಾದ ಜಾನ್‌ಬಾಬು (22), ಮಹಿಮರಾಜು (19), ಮಹೇಶ್ (26), ವಂಶಿ (24), ಲೇಟ್ ಗಂಗನ್ನನ ಮಕ್ಕಳಾದ ದೇವರಾಜ್, ಸಾಯಿನಾಥ್, ಕುಂಟಿ ಲಿಂಗಪ್ಪನ ಮಗ ವಿಜಯ್ ರವರುಗಳು ಬೋಗಾದೆಪ್ಪನ ಮಗ ಶಿವಣ್ಣ, ಶಿವಣ್ಣನ ಮಗ ಮಲ್ಲೇಶ್, ಲಿಂಗಯ್ಯನ ಮಗ ವಿನೋದ್ ರವರುಗಳ ಕುಮ್ಮಕ್ಕಿನಿಂದ ಅಕ್ರಮ ಗುಂಪು ಕಟ್ಟಿಕೊಂಡು ಕೈಗಳಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬಟ್ಲಹಳ್ಳಿಯ ಕೊನೆ ಬೀದಿಯಲ್ಲಿರುವ ಲಿಂಗಮಯ್ಯನವರ ಮನೆಯ ಬಳಿ ಹೋಗಿ ಆ ಪೈಕಿ ಜಾನ್‌ಬಾಬು ಕೃಷ್ಣಪ್ಪನ ಮಗ ಪ್ರತಾಪ್ (24)ರವರನ್ನು ಕುರಿತು ಲೋಫರ್ ನನ್ನ ಮಗನೇ, ಎಲ್ಲಿ ಹೋದ ನಿಮ್ಮ ಮಾವ ಮಲ್ಲೇಶ್ ನಮ್ಮ ವಿರುದ್ಧವಾಗಿ ದೂರು ಕೊಟ್ಟಿದ್ದಾನೆ. ಅವನಿಗೆಷ್ಟು ಧೈರ್ಯ, ಈಗ ನಾನು ಇಲ್ಲಿಗೆ ಬಂದಿರುವುದು ನಿಮ್ಮನ್ನು ಸಾಯಿಸಿ ಜೈಲಿಗೆ ಹೋಗುತ್ತೇನೆ ಎಂದು ಕೆಟ್ಟದಾಗಿ ಬೈದು ಆತನ ಕೈಯಲ್ಲಿದ್ದ ಬಟನ್ ಚಾಕುವಿನಿಂದ ಪ್ರತಾಪ್ ತಿವಿಯಲು ಹೋದಾಗ ಪ್ರತಾಪ್ ತಪ್ಪಿಸಿಕೊಳ್ಳಲು ಪ್ರಯತ್ನಿಸಿದನು. ಆಗ ವಂಶಿ, ಪ್ರತಾಪ್‌ರವರನ್ನು ಗಟ್ಟಿಯಾಗಿ ಕೈಯಿಂದ ಹಿಡಿದುಕೊಂಡಿದ್ದು, ಜಾನ್‌ಬಾಬು ತನ್ನ ಕೈಯಲ್ಲಿದ್ದ ಚಾಕುವಿನಿಂದ ಪ್ರತಾಪ್‌ರವರ ಎದೆಯ ಬಳಿ ತಿವಿದನು. ಆಗ ಅಲ್ಲಿಯೇ ಇದ್ದ ಲಿಂಗಮಯ್ಯ ಮತ್ತು ಸಾಗರ್‌ರವರು ಅಡ್ಡ ಹೋಗಿದ್ದಕ್ಕೆ ಸಾಯಿನಾಥ್ ಲಿಂಗಮಯ್ಯನನ್ನು ಗಟ್ಟಿಯಾಗಿ ಹಿಡಿದುಕೊಂಡನು. ಮಹಿಮರಾಜು ಲಿಂಗಮಯ್ಯನ ಕಿಬ್ಬೊಟ್ಟೆಗೆ ಚಾಕುವಿನಿಂದ ತಿವಿದನು. ದೇವರಾಜ್ ಸಾಗರ್‌ನನ್ನು ಕೈಗಳಿಂದ ಹೊಡೆದು ಕಾಲಿನಿಂದ ಒದ್ದನು. ಸಾಗರ್ ನೆಲದ ಮೇಲೆ ಬೀಳುತ್ತಿದ್ದಂತೆ ವಿಜಯ್ ಸಾಗರ್‌ನನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದು, ಮಹೇಶ್ ತನ್ನ ಕೈಯಲ್ಲಿದ್ದ ಚಾಕುವಿನಿಂದ ಹೊಟ್ಟೆಗೆ ತಿವಿದು ರಕ್ತಗಾಯ ಪಡಿಸಿದನು. ಅಷ್ಟರಲ್ಲಿ ಗಂಗರಾಜು, ಮಲ್ಲೇಶ್ ಮತ್ತು ಶ್ರೀಕಾಂತ್ ಸ್ಥಳಕ್ಕೆ ಬರುತ್ತಿದ್ದಂತೆ ಅವರೆಲ್ಲರೂ ಅಲ್ಲಿಂದ ಓಡಿ ಹೋದರು. ತೀವ್ರವಾಗಿ ಗಾಯಗೊಂಡಿದ್ದ ಪ್ರತಾಪ್ ಮತ್ತು ಲಿಂಗಮಯ್ಯನವರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಸಾಗರ್‌ಗೆ ಸಣ್ಣಪುಟ್ಟ ಗಾಯಗಳಾಗಿದ್ದು ಕೂಡಲೇ ಗಾಯಾಳು ಮತ್ತು ಮೃತಪಟ್ಟವರನ್ನು 108 ಆಂಬುಲೆನ್ಸ್‌ನಲ್ಲಿ ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಮೃತದೇಹಗಳನ್ನು ಶವಗಾರದಲ್ಲಿರಿಸಿ, ಗಾಯಾಳು ಸಾಗರ್‌ಗೆ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕೋಲಾರದ ಆರ್.ಎಲ್. ಜಾಲಪ್ಪ ಆಸ್ಪತ್ರೆಗೆ ಸಾಗಿಸಿ ಅಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಯಾವುದೋ ಹಳೇಯ ದ್ವೇಷದಿಂದ ಪ್ರತಾಪ್ ಮತ್ತು ಲಿಂಗಮಯ್ಯರವರನ್ನು ಕೊಲೆ ಮಾಡಿ, ಸಾಗರ್ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿ ಗಾಯಪಡಿಸಿದ್ದು ಇಂತಹ ಹೀನಕೃತ್ಯವೆಸಗಿ ತಲೆಮರೆಸಿಕೊಂಡಿರುವವರು ಮತ್ತು ಇದಕ್ಕೆ ಕುಮ್ಮಕ್ಕು ನೀಡಿದವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಕೋರಿದ ಮೇರೆಗೆ ಬಟ್ಲಹಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ಪುನೀತ್‌ನಂಜರಾಯರವರು ಪೊಲೀಸ್ ಠಾಣೆಯ ಮೊ.ಸಂ. 41/2025 ಕಲಂ 189(2), 191(2), 191(3), 352, 351(2), 109, 103, 54 ರೆಡ್‌ವಿತ್ 190 ಬಿಎನ್‌ಎಸ್ 2023ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡರು.


ಆರೋಪಿಗಳಾದ ಮಹಿಮರಾಜು, ಸಾಯಿನಾಥ್ ಹಾಗೂ ವಂಶಿ


## ಆರೋಪಿಗಳ ಬಂಧನ

ಪ್ರತಾಪ್ ಮತ್ತು ಲಿಂಗಮಯ್ಯನವರ ಜೋಡಿ ಕೊಲೆಗೆ ಸಂಬಂಧಿಸಿದಂತೆ ಹಿರಿಯ ಅಧಿಕಾರಿಗಳಿಗೆ ವರದಿ ನೀಡಿದ್ದು, ಅದರಂತೆ ಸ್ಥಳಕ್ಕೆ ಎಸ್ಪಿ ಕುಶಾಲ್ ಚೌಕ್ಸೆ, ಎಎಸ್ಪಿ ರಾಜಾ ಇಮಾಮ್ ಖಾಸಿಮ್, ಡಿವೈಎಸ್ಪಿ ಮುರುಳಿಧರ್, ಪ್ರಭಾರ ಪಿಐ ಜನಾರ್ಧನ್ ಮತ್ತು ಸಿಬ್ಬಂದಿಯು ಆಗಮಿಸಿ ಸ್ಥಳದ ಮಹಜರ್ ನಡೆಸಿದ ನಂತರ ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಪಂಚರ ಸಮಕ್ಷಮದಲ್ಲಿ ಮೃತದೇಹದ ಪಂಚನಾಮೆ ನಡೆಸಿದ ಮೇಲೆ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಶವಪರೀಕ್ಷೆ ನಡೆಸಿದ ನಂತರ ಮೃತದೇಹಗಳನ್ನು ವಾರಸುದಾರರಿಗೆ ನೀಡಲಾಯಿತು. ಕೊಲೆಗಳನ್ನು ಮಾಡಿ ಪರಾರಿಯಾಗಿ ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ಎಸ್ಪಿ ಕುಶಾಲ್ ಚೌಕ್ಸೆ ಮತ್ತು ಡಿವೈಎಸ್ಪಿ ಮುರುಳಿಧರ್ ರವರ ಮಾರ್ಗದರ್ಶನದಲ್ಲಿ ಪಿಎಸ್ಐ ಪುನೀತ್ ನಂಜರಾಯ, ಎಎಸ್ಐ ಮುಕ್ತಿಯಾರ್ ಪಾಷ, ಸಿಬ್ಬಂದಿ ವರ್ಗದವರಾದ ರೈಟರ್ ಎಸ್.ಕೆ. ಶ್ರೀನಾಥ್, ವಿಶ್ವನಾಥ್, ಜಯರಾಮಯ್ಯ, ಅಂಬರೀಶ್, ಅನಿಲ್‌ಕುಮಾರ್, ಶ್ರೀನಾಥ್ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಪೊಲೀಸ್ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಎ1 ಆರೋಪಿ ಜಾನ್‌ಬಾಬು (22), ಎ2 ಆರೋಪಿ ಮಹಿಮರಾಜು, ಎ3 ಆರೋಪಿ ಸಾಯಿನಾಥ್, ಎ4 ಆರೋಪಿ ವಂಶಿ ಸೇರಿದಂತೆ ನಾಲ್ಕು ಜನ ಆರೋಪಿಗಳನ್ನು ಬಂಧಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಸ್ವಇಚ್ಛಾ ಹೇಳಿಕೆಗಳನ್ನು ಪಡೆದ ನಂತರ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಉಳಿದ ಆರೋಪಿಗಳಿಗಾಗಿ ತಲಾಷೆ ನಡೆಸುತ್ತಿದ್ದಾರೆ. ☯


ರೈಟರ್ ಎಸ್.ಕೆ. ಶ್ರೀನಾಥ್, ಹೆಚ್‌ಸಿಗಳಾದ ಶ್ರೀನಾಥ್, ಅನಿಲ್‌ಕುಮಾರ್, ಅಂಬರೀಶ್ ಹಾಗೂ ಜಯರಾಮಯ್ಯ


ಪ್ರತಾಪ್ ಎದೆ ಭಾಗಕ್ಕೆ ತಿವಿದಿರುವುದು


ಲಿಂಗಮಯ್ಯನ ಹೊಟ್ಟೆಗೆ ತಿವಿದಿರುವುದು



# ಕಾರುಣ್ಯಾಶ್ರಮಕ್ಕೆ ಕರುಣೆ ತೋರಿದ ರಾಯಚೂರು ಪೊಲೀಸ್ ಬಳಗ

**ರಾಯಚೂರು**
✍ ವೀರನಗೌಡ

ಕರುಣಾಮಯಿ ಸಂಸ್ಕೃತಿಯ ಕಾರುಣ್ಯಾಶ್ರಮವು ರಾಯಚೂರಿನ ಘನತೆ ಗೌರವವನ್ನು ಹೆಚ್ಚಿಸಿದೆ ನಮ್ಮ ಪೊಲೀಸ್ ಇಲಾಖೆ ಅಧಿಕಾರಿಗಳು ಕಾರುಣ್ಯಾಶ್ರಮವನ್ನು ಪ್ರೀತಿಸಿ ಪೂಜಿಸುತ್ತಿದ್ದಾರೆ... ಎಂ. ಪುಟ್ಟ ಮಾದಯ್ಯ ಪೊಲೀಸ್ ಅಧೀಕ್ಷಕರು. ಸಿಂಧನೂರು - 2005ನೇ ಸಿವಿಲ್ ಪೊಲೀಸ್ ಬ್ಯಾಚ್‌ನ 25ನೇ ವರ್ಷದ ಸ್ನೇಹಿತರ ಸಮ್ಮಿಲನ ಸಮಾರಂಭ ಕಾರ್ಯಕ್ರಮದ ಅಂಗವಾಗಿ ವೆಂಕಟೇಶ ಹೂಗಿಬಂಡಿ ಡಿವೈಎಸ್ಪಿ ಸಿರುಗುಪ್ಪ ಉಪ ವಿಭಾಗ, ವೀರಾರೆಡ್ಡಿ ಸಿಪಿಐ ಸಿಂಧನೂರು ಗ್ರಾಮೀಣ ವೃತ್ತ, ಗುಂಡೂರಾವ್ ಸಿಪಿಐ ದೇವದುರ್ಗ ಗ್ರಾಮೀಣ ವೃತ, ಸಾಬಯ್ಯ ಸಿಪಿಐ ರಾಯಚೂರು ಗ್ರಾಮೀಣ ವೃತ್ತ ಇವರುಗಳ ನೇತೃತ್ವದಲ್ಲಿ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಅವಶ್ಯಕತೆಯಿದ್ದ ವಸತಿ ಧಾಮವನ್ನು ನಿರ್ಮಿಸಿ ರಾಯಚೂರು ಪೊಲೀಸ್ ಅಧೀಕ್ಷಕರಾದ ಎಂ. ಪುಟ್ಟ ಮಾದಯ್ಯ ಅವರ ಅಮೃತ ಹಸ್ತದಿಂದ ಅನಾವರಣಗೊಳಿಸಿ ಉದ್ಘಾಟಿಸಿದರು.


ಎಸ್ಪಿ ಪುಟ್ಟಮಾದಯ್ಯ

ನಂತರ ಗಂಗಾವತಿ ರಸ್ತೆಯ ಕಮ್ಮಾರಿ ಕಲ್ಯಾಣ ಮಂಟಪದಲ್ಲಿ ನೆರವೇರಿದ ಕಾರ್ಯಕ್ರಮದಲ್ಲಿ ಕಾರುಣ್ಯ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸಯ್ಯಸ್ವಾಮಿ ಹಿರೇಮಠ ಎಲ್ಲಾ ಪೊಲೀಸ್ ಅಧಿಕಾರಿಗಳ ಸಮಕ್ಷಮದಲ್ಲಿ ಗೌರವಿಸಿ ಅಭಿನಂದಿಸಲಾಯಿತು. ಹಾಗೂ ಎರಡು ವರ್ಷಗಳ ಕಾಲ ಆಶ್ರಮದ ಆಶ್ರಯದಾತುರುಗಳಿಗೆ ಉಚಿತ ಸೇವೆ ಒದಗಿಸಿದ ಹೊಸಳ್ಳಿ (ಇ.ಜೆ.)ಕ್ಯಾಂಪ್‌ನ ಆನಂದ್ ಹೇರವ ಸ್ಟೈಲ್‌ನ ಸಿಂಹಾದ್ರಿ ಅವರನ್ನು ಆಶ್ರಮದ ವತಿಯಿಂದ ಪೊಲೀಸ್ ಇಲಾಖೆಯ ಹಿರಿಯರುಗಳು ಸನ್ಮಾನಿಸಿ ಗೌರವಿದರು.

ಈ ಸಮಯದಲ್ಲಿ ರಾಯಚೂರು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಎಂ.ಪುಟ್ಟಮಾದಯ್ಯ ಪೊಲೀಸ್ ಇಲಾಖೆ ನಿರ್ಮಿಸಿದ ನೂತನ ವಸತಿಗೃಹವನ್ನು ವೀಕ್ಷಿಸಿ ಆಶ್ರಮದ ಎಲ್ಲಾ ಕೋಣೆಗಳನ್ನು ವೀಕ್ಷಿಸಿ ಆಶ್ರಯದಾತುರುಗಳ ಯೋಗಕ್ಷೇಮವನ್ನು ವಿಚಾರಿಸಿ ಹಣ್ಣು ಹಂಪಲುಗಳನ್ನು ವಿತರಿಸಿ ಮಾತನಾಡಿ ಇಂದು 2025ನೇ ಸಿವಿಲ್ ಬ್ಯಾಚ್ ನ 20ನೇ ವರ್ಷದ ಸ್ನೇಹಿತರ ಸಮ್ಮಿಲನ ಕಾರ್ಯಕ್ರಮದ ಅಂಗವಾಗಿ ನಮ್ಮ ಪೊಲೀಸ್ ಇಲಾಖೆಯ ಅಧಿಕಾರಿಗಳು ಕಾರುಣ್ಯ ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡಿರುವುದು ನನಗೆ ಬಹಳ ಸಂತೋಷವನ್ನುಂಟು ಮಾಡಿದೆ. ಎಲ್ಲೋ ಹುಟ್ಟಿ ಎಲ್ಲೋ ಬೆಳೆದು ಜೀವನದ ಕೊನೆಯ ದಿನಗಳ ಬದುಕು ಕಟ್ಟಿಕೊಂಡಿರುವ ಈ ಕಾರುಣ್ಯ ಆಶ್ರಮದ ಆಶ್ರಯದಾತ ದೇವರುಗಳಿಗೆ ನೂರು ಕಲ್ಪಿಸಿ ಕೊಟ್ಟಿರುವ ನಮ್ಮೆಲ್ಲಾ ಪೊಲೀಸ್ ಇಲಾಖೆಯ ಅಧಿಕಾರಿಗಳು ನಮ್ಮ ಇಲಾಖೆಯ ಘನತೆ ಗೌರವವನ್ನು ಹೆಚ್ಚಿಸಿದ್ದಾರೆ.



ಕರುಣಾಮಯಿ ಸಂಸ್ಕೃತಿಯ ಕಾರುಣ್ಯಾಶ್ರಮವು ಕರುನಾಡಿನ ಕರುಣೆಯ ಮಂದಿರವಾಗಿದೆ. ಈ ಕಾರುಣ್ಯ ರಥದ ರೂವಾರಿಗಳಾದ ಚನ್ನಬಸಯ್ಯಸ್ವಾಮಿ ಹಾಗೂ ಅಶೋಕ ನಲ್ಲ ಬರಿ ಕಾರುಣ್ಯ ಕುಟುಂಬ ಆಶ್ರಮಕ್ಕಲ್ಲದೆ ಸಮಾಜಕ್ಕೆ ಎರಡು ಕಣ್ಣುಗಳಾಗಿದ್ದಾರೆ. ಇವರ ನಿರ್ವಾರ್ಥ ಸೇವೆ ನಿಸ್ವಾರ್ಥತೆಯ ಮನಸ್ಸು ಭಗವಂತನ ಸ್ವರೂಪದ್ದು. ನಮ್ಮ ಪೊಲೀಸ್ ಇಲಾಖೆ ಅಧಿಕಾರಿಗಳು ಕಾರುಣ್ಯಾಶ್ರಮವನ್ನು ಪ್ರೀತಿಸಿ ಪೂಜಿಸುತ್ತಾರೆ. ಈ ಕಾರುಣ್ಯ ಕುಟುಂಬದ ಬದುಕಿಗಾಗಿ ನಿರಂತರ ಸಹಾಯ ಸಹಕಾರ ನೀಡುತ್ತಿರುವ ನಮ್ಮ ಇಲಾಖೆಯ ಕಾರ್ಯ ಅಮೋಘವಾಗಿದೆ. ಸತ್ಯ ಪ್ರಾಮಾಣಿಕವಾದ ಕಾರುಣ್ಯ ಸಂಸ್ಥೆಗೆ ರಾಯಚೂರು ಜಿಲ್ಲಾ ಪೊಲೀಸ್ ವತಿಯಿಂದ ಅಭಿನಂದನೆಗಳು ಎಂದು ಮಾತನಾಡಿದರು. ನಂತರ ಸಿಂಧನೂರು ಉಪ ವಿಭಾಗದ ಡಿವೈಎಸ್ಪಿಗಳಾದ ಬಿ.ಎಸ್. ತಳವಾರ ಮಾತನಾಡಿ ನಮ್ಮ ಸಿಂಧನೂರಿನ ಕರುಣೆಯ ಕಾರುಣ್ಯ ಆಶ್ರಮವು ನಾಡಿನಲ್ಲಿ ಅನಾಥ ಕ್ಷೇತ್ರದಲ್ಲಿ ತನ್ನದೇ ಆದಂತಹ ವರ್ಚಸ್ಸು ಮೂಡಿಸಿಕೊಂಡಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯವಾಗಿದೆ. ನಮ್ಮ ಇಲಾಖೆಯ ವತಿಯಿಂದ ವೈಯಕ್ತಿಕವಾಗಿ ಕಾರುಣ್ಯ ಆಶ್ರಮಕ್ಕೆ ನಿರಂತರ ಸಹಾಯ ಸಹಕಾರ ದೊರೆಯುತ್ತದೆ. ಇಂದಿನ ನಮ್ಮ ಇಲಾಖೆ ಈ ಕಾರ್ಯಕ್ರಮ ಮರೆಯಲಾರದ ವಿಶೇಷ ಕಾರ್ಯಕ್ರಮವಾಗಿ ನಮ್ಮೆಲ್ಲರ ಮನಸ್ಸಿನಲ್ಲಿ ಉಳಿದುಕೊಳ್ಳುತ್ತದೆ.



ಕಾರುಣ್ಯ ಆಶ್ರಮವು ಬರೀ ವೃದ್ಧಾಶ್ರಮ ನಡೆಸುವುದಲ್ಲದೆ ಪ್ರತಿಯೊಂದು ಶಾಲಾ ಕಾಲೇಜುಗಳಲ್ಲಿ ಸಾರ್ವಜನಿಕರಲ್ಲಿ ಹೆತ್ತವರ ಬಗ್ಗೆ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ನಮ್ಮ ಭಾರತೀಯ ಸಂಸ್ಕೃತಿ ಸಂಪ್ರದಾಯಕ್ಕೆ ಮೆರಗು ತಂದು

☞ 12

---

5 ☞

ಡಿಸಿಪಿ ಸಿದ್ಧಾರ್ಥ ಗೋಯಲ್, ಅವರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದರು. ಗುಂಪಿನಿಂದ ಹಲ್ಲೆಗೊಳಗಾಗಿ ಮೃತಪಟ್ಟಂತಹ ಯುವಕನ ಗುರುತು ಪತ್ತೆಗೆ ಯುತ್ನಿಸಿದರು. ಆದರೆ ಫಲಕಾರಿಯಾಗಲಿಲ್ಲ, ಕೊನೆಗೆ ಸ್ಥಳದಲ್ಲಿದ್ದ ಮಂಗಳಾ ನಗರದ ಮಂಜುನಾಥ್ ಎಂಬಾತನಿಂದ ದೂರು ಪಡೆದುಕೊಂಡು ಅಸ್ವಾಭಾವಿಕ ಮರಣ ಎಂದು ಕೇಸು ದಾಖಲಿಸಿಕೊಳ್ಳಲಾಯಿತು. ಮೃತದೇಹವನ್ನು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಯಿತು. ಅಲ್ಲಿನ ವೈದ್ಯರು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಮೌಖಿಕವಾಗಿ



ಇದೊಂದು ಗುಂಪು ಥಳಿತದಿಂದಾಗಿ ಆಂತರಿಕ ರಕ್ತಸ್ರಾವವಾಗಿ ಮೃತಪಟ್ಟ ಪ್ರಕರಣ. ಆದ್ದರಿಂದ ಕೊಲೆ ಪ್ರಕರಣ ದಾಖಲಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಅದರಂತೆ ಮಂಗಳೂರು ಗ್ರಾಮಾಂತರ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್103 (2) ರಂತೆ ಕುಲಶೇಖರದ ದೀಪಕ್ ಕುಮಾರ್ ಎಂಬವರು ನೀಡಿದ ದೂರಿನಂತೆ ಅಪರಿಚಿತ ವ್ಯಕ್ತಿಗಳ ವಿರುದ್ಧ ಕೇಸು ದಾಖಲಿಸಿಕೊಳ್ಳಲಾಯಿತು. ಪೊಲೀಸ್ ಕಾರ್ಯಾಚರಣೆ

ಕೊಲೆ ಪ್ರಕರಣದ ದಾಖಲಾದ ಕೂಡಲೇ ಕಾರ್ಯ ಪ್ರವೃತ್ತರಾದ ಕಂಕನಾಡಿ ಗ್ರಾಮಾಂತರ ಪೊಲೀಸರು ಘಟನೆಯಲ್ಲಿ ಭಾಗಿಗಳಾದಂತಹ ಆರೋಪಿತರನ್ನು ಪತ್ತೆ ಹಚ್ಚಲು ಕಾರ್ಯಾಚರಣೆ ಆರಂಭಿಸಿದರು. ಹತ್ಯೆಯಾದ ಸಂದರ್ಭದಲ್ಲಿ ಆ ಸ್ಥಳದಲ್ಲಿದ್ದಂತಹ ವ್ಯಕ್ತಿಗಳನ್ನು ಗುರುತಿಸಿ ವಶಕ್ಕೆ ಪಡೆಯಲಾಯಿತು. ಆ ಸ್ಥಳದ ಮೊಬೈಲ್ ಟವರನ್ನು ಡಂಪ್ ಮಾಡಿ ಆ ಸಂದರ್ಭದಲ್ಲಿ ಆ ಸ್ಥಳದಲ್ಲಿ ಯಾವ ಯಾವ ಮೊಬೈಲ್‌ಗಳು ಕಾರ್ಯಾಚರಿಸುತ್ತಿತ್ತು ಎಂಬುದನ್ನು ಗುರುತಿಸಿ ವ್ಯಕ್ತಿಗಳ ಹೆಸರನ್ನು ಪಟ್ಟಿ ಮಾಡಲಾಯಿತು. ಮತ್ತು ಅವರನ್ನು ಪತ್ತೆ ಹಚ್ಚುವ ಕೆಲಸ ಮಾಡಲಾಯಿತು. ಆರಂಭದಲ್ಲಿಯೇ ಸುಮಾರು ಹತ್ತೊಂಬತ್ತು ಮಂದಿಯ ಹೆಸರನ್ನು ಎಫ್‌ಐಆರ್‌ನಲ್ಲಿ ದಾಖಲಿಸಲಾಯಿತು. ಅವರನ್ನು ಬಂಧಿಸುವ ಕೆಲಸ ನಡೆಯಿತು. ಆರಂಭದಲ್ಲಿ ಆರೋಪಿಗಳಾದ ಕುಡುಪು ನಡುಮನೆಯ ಸಚಿನ್ ಟಿ. (26), ದೇವದಾಸ್ (50), ಈ ಪ್ರಕರಣದಲ್ಲಿ ಆರಂಭದಲ್ಲಿ ಪೊಲೀಸರಿಗೆ ದೂರು ನೀಡದ್ದಂತಹ ಮಂಗಳ ನಗರದ ಮಂಜುನಾಥ್ (32) ನೀರುಮಾರ್ಗ ಸುಬ್ರಹ್ಮಣ್ಯ ನಗರದ ಸಾಯಿದೀಪ್ (29), ಮಂಗಳಾನಗರದ ನಿತೇಶ್ ಕುಮಾರ್ ಅಲಿಯಾಸ್ ಸಂತೋಷ್ (32), ಕುಡುಪು ಕಟ್ಟೆಯ ದೀಕ್ಷಿತ್ ಕುಮಾರ್ (32), ವಾಮಂಜೂರು ದೇವರ ಪದವಿನ ಸಂದೀಪ್ (23), ನಡುಮನೆಯ ವಿವಿಯನ್ ಆಲ್ವಾರಿಸ್ (41), ಕುಡುಪು ಕಟ್ಟೆಯ ಶ್ರೀದತ್ತ (32), ಕದ್ರಿ ಕೈ ಬಟ್ಟಲಿನ ರಾಹುಲ್ (23), ಕುಲಶೇಖರ ಜ್ಯೋತಿ ನಗರದ ಪ್ರವೀಣ್ ಕುಮಾರ್ (35), ಶಕ್ತಿನಗರದ ಮನೀಶ್ ಶೆಟ್ಟಿ (21), ಕುಡುಪು ಕಟ್ಟೆಯ ಧನುಷ್ (31), ಕುಲಶೇಖರ ಚೌಕಿಯ ದೀಕ್ಷಿತ್ (27), ಕುಡುಪು ದೇವಸ್ಥಾನ ಬಳಿಯ ಅಶೋಕ್ ಕುಮಾರ್ (37) ಮತ್ತು ಇತರ 8 ಮಂದಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಇನ್ನುಳಿದ ಹಲವು ಆರೋಪಗಳ ಗುರು ಪತ್ತೆಯಾಗಿದ್ದು ಅವರನ್ನು ಬಂಧಿಸಲು ಪೊಲೀಸ್ ಕಾರ್ಯಾಚರಣೆ ನಡೆಯುತ್ತಿದೆ.


### ಮೃತ ದೇಹದ ಗುರುತು ಪತ್ತೆ

ಈ ಗುಂಪು ಹತ್ಯೆಯಲ್ಲಿ ಭಾಗಿಗಳಾದಂತಹ ಆರೋಪಿಗಳ ಪತ್ತೆಕಾರ್ಯ ನಡೆದಿದ್ದರೂ ಹತ್ಯೆಯಾದಂತಹ ವ್ಯಕ್ತಿಯ ಗುರುತು ಪತ್ತೆಯಾಗಿರಲಿಲ್ಲ. ಅದಕ್ಕಾಗಿ ಪೊಲೀಸರು ಮೃತ ದೇಹದ ಭಾವಚಿತ್ರವನ್ನು ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದರು. ಮೇಲ್ನೋಟಕ್ಕೆ ಹತ್ಯೆಗೀಡಾದ ಯುವಕ ಮುಸ್ಲಿಂ ಧರ್ಮದವ ಎನ್ನುವುದು ಖಚಿತವಾಗಿತ್ತು. ಮತ್ತು ಆತನನ್ನು ನೋಡಿದವರು ಹಾಗೂ ಮಾತನಾಡಿಸಿದವರು ಆತ ಕೇರಳ ಮೂಲದವನು ಅಥವಾ ಬಿಹಾರದವನು ಎನ್ನುವಂತಹ ಮಾಹಿತಿಗಳನ್ನು ಹಂಚಿಕೊಂಡಿದ್ದರು. ಆದರೆ ಪೊಲೀಸರು ಆತ ಕೇರಳ ಮೂಲದವ ಎನ್ನುವುದನ್ನು ಸಂದೇಹಿಸಿ ಕೇರಳದ ಪತ್ರಿಕೆಗಳಲ್ಲಿ ಮತ್ತು ಸಾಮಾಜಿಕ ಮಾಧ್ಯಮದಲ್ಲಿ ಈ ಬಗ್ಗೆ ಹೆಚ್ಚಿನ ಪ್ರಚಾರ ನಡೆಸಿದ್ದರು. ಇದನ್ನು ಗಮನಿಸಿದ ಆತನ ಮನೆಯವರು ಕೊಲೆಗೀಡಾದ ವ್ಯಕ್ತಿ ಅಶ್ರಫ್ ಎಂಬುದನ್ನು ಖಚಿತ ಪಡಿಸಿಕೊಂಡು ಮಂಗಳೂರಿಗೆ ಬಂದು ಮೃತದೇಹವನ್ನು ಕಂಡು ಗುರುತು ಪತ್ತೆ ಹಚ್ಚಿ ಎಲ್ಲಾ ದಾಖಲೆಗಳಿಗೆ ಸಹಿ ಹಾಕಿ ಮೃತದೇಹವನ್ನು ಕೇರಳಕ್ಕೆ ಕೊಂಡೊಯ್ದು ಅಂತಿಮ ಸಂಸ್ಕಾರ ನಡೆಸಿದ್ದಾರೆ. ☯

## ಪೊಲೀಸರು ಎಡವಿದ್ದೆಲ್ಲಿ?

ಪರವೂರಿನ ಯುವಕ ಗುಂಪು ಹಲ್ಲೆಗೊಳಗಾಗಿ ಹತ್ಯೆಗೀಡಾದಂತಹ ಸಂದರ್ಭದಲ್ಲಿ ಸ್ಥಳಕ್ಕೆ ಬಂದ ಪೊಲೀಸ್ ಅಧಿಕಾರಿಗಳು ವಿವೇಚನೆಯಿಂದ ಮತ್ತು ಕಾನೂನಾತ್ಮಕವಾಗಿ ವರ್ತಿಸಿದ್ದರೆ ಈ ಹತ್ಯಾ ಪ್ರಕರಣಕ್ಕೊಂದು ನ್ಯಾಯ ಸಿಗುತ್ತಿತ್ತು. ಆದರೆ ಪೊಲೀಸ್ ಅಧಿಕಾರಿಗಳು ತಿಪ್ಪೆ ಸಾರಿಸುವ ಕೆಲಸ ಮಾಡಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತಿದೆ. ಯುವಕನೊಬ್ಬನ ಮೇಲೆ ಹಲ್ಲೆ ನಡೆದಿದೆ ಎನ್ನುವಂತಹ ಮಾಹಿತಿ ಸಿಕ್ಕಿದ ತಕ್ಷಣ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದಾರೆ. ಅವರು ಬರುವಷ್ಟರಲ್ಲಿ ಯುವಕ ಹೆಣವಾಗಿದ್ದ. ಆತನ ಗುರುತು ಪರಿಚಯ ಯಾರಿಗೂ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಪೊಲೀಸರು ಜವಾಬ್ದಾರಿಯುತವಾಗಿ ವರ್ತಿಸಬೇಕಿತ್ತು. ಆದರೆ ಅಲ್ಲಿಯೇ ಇದ್ದಂತಹ ಮಂಜುನಾಥ್ ಎಂಬಾತನ ಕೈಯಿಂದ ದೂರನ್ನು ಬರೆಸಿಕೊಂಡು ಅಸ್ವಾಭಾವಿಕ ಮರಣ ಎಂದು ಕೇಸು ದಾಖಲಿಸಿಕೊಂಡರು. ಅವರು ಸ್ಥಳೀಯ ಗ್ರಾಮಕರಣಿಕ ಅಥವಾ ಸ್ಥಳೀಯ ಸರಕಾರಿ ಉದ್ಯೋಗಿಯೊಬ್ಬರಿಂದ ದೂರನ್ನು ಪಡೆದುಕೊಂಡು ಕೇಸು ದಾಖಲಿಸಿಕೊಳ್ಳಬೇಕಿತ್ತು. ತದನಂತರ ತನಿಖೆಯ ಸಂದರ್ಭದಲ್ಲಿ ಅಪರಿಚಿತ ಯುವಕನ ಸಾವಿಗೆ ಗುಂಪು ಹಲ್ಲೆಯೇ ಕಾರಣ ಎಂದು ಖಚಿತವಾದ ನಂತರ ಅಂದರೆ ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರು ಇದೊಂದು ಕೊಲೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರಿಂದ ಸ್ವತಃ ತನಿಖೆರುನ್ನು ಇನ್‌ಸ್ಪೆಕ್ಟರ್ ಶಿವಕುಮಾರ್ ಕೆ.ಆರ್. ಕೈಗೆತ್ತಿಕೊಳ್ಳಬೇಕಿತ್ತು ಮತ್ತು ಸ್ವಯಂ ಪ್ರೇರಿತವಾಗಿ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕಿತ್ತು. ಆದರೆ ಪೊಲೀಸರು ಮನೆಯಲ್ಲಿ ಮಲಗಿದ್ದಂತಹ ವ್ಯಕ್ತಿಯನ್ನು ದೂರವಾಣಿ ಕರೆ ಮಾಡಿ ಕರೆಯಿಸಿ ದೂರನ್ನು ಬರೆಯಿಸಿಕೊಂಡು ಕೊಲೆ ಪ್ರಕರಣವನ್ನು ದಾಖಲಿಸಿ ಕೊಂಡಿರುವುದು ಕರ್ತವ್ಯಲೋಪ ಎನಿಸಿದೆ. ☯

9 ☞ ಯುಎಇ, ಸೌದಿ ಅರೇಬಿಯಾ, ಈಜಿಪ್ಟ್ ಮತ್ತು ಟರ್ಕಿ ರಾಷ್ಟ್ರಗಳು ಭಾರತ ಮತ್ತು ಪಾಕಿಸ್ತಾನ ನಡುವಿನ ದ್ವೇಷವನ್ನು ತಕ್ಷಣವೇ ಕೊನೆಗೊಳಿಸಲು ಅಮೆರಿಕದ ಮಧ್ಯಸ್ಥಿಕೆಯನ್ನು ಕೋರಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಸಂಪರ್ಕಿಸಿದವು. ಸಂಘರ್ಷ ಈಗಾಗಲೇ ಉಲ್ಬಣಗೊಳ್ಳುತ್ತಿತ್ತು ಅವರೆಲ್ಲ ಮಧ್ಯಪ್ರವೇಶಿಸದಿದ್ದರೆ ಅಪಾಯಕಾರಿ ತಿರುವು ಪಡೆಯುವುದಿತ್ತು ಎಂಬುದು ಅವರ ವಾದವಾಗಿದೆ. ಡೋನಾಲ್ಡ್ ಟ್ರಂಪ್ ಮಧ್ಯಪ್ರವೇಶಿಸಿ ಎರಡೂ ದೇಶಗಳು ಸಂಘರ್ಷವನ್ನು ತಕ್ಷಣವೇ ಕೊನೆಗೊಳಿಸುವಂತೆ ಕೇಳಿಕೊಂಡಿದ್ದಾರೆ. ದೀರ್ಘ ಕಾಲದವರೆಗೆ ಪಾಕಿಸ್ತಾನಕ್ಕೆ ನೀಡಬೇಕಾದ ಐಎಂಎಫ್ (ಅಂತರರಾಷ್ಟ್ರೀಯ ಹಣಕಾಸು ನಿಧಿ) ಸಾಲವನ್ನು ತಡೆಹಿಡಿದಿದ್ದ ಅಮೆರಿಕ, ಭಾರತದೊಂದಿಗೆ ಕದನ ವಿರಾಮಕ್ಕೆ ಒಪ್ಪುವ ಷರತ್ತಿನ ಮೇಲೆ ಮೊನ್ನೆ ಶುಕ್ರವಾರ ಅದನ್ನು ವಿತರಿಸಲು ಒಪ್ಪಿಕೊಂಡಿದೆ.


ಪಾಕ್ ಕುತಂತ್ರಕ್ಕೆ ಬಲಿಯಾದ ಜಮ್ಮು ಕಾಶ್ಮೀರ್ ಅಧಿಕಾರಿ ರಾಜ್‌ಕುಮಾರ್ ತಾಪಾ ಮತ್ತು ವೀರ ಯೋಧ ನಾಯಕ್

ಒಂದಂತೂ ಸತ್ಯ. ಪಾಕಿಸ್ತಾನದಲ್ಲಿ ಆರ್ಥಿಕ ಸ್ಥಿತಿ ಅಸ್ತವ್ಯಸ್ತವಾಗಿದೆ.ಅದು ದಟ್ಟ ದರಿದ್ರ ದೇಶ. ಅಲ್ಲಿನ ಜನರಲ್ಲಿ ಹೆಚ್ಚುತ್ತಿರುವ ಅಶಾಂತಿ ಒಪ್ಪಂದವನ್ನು ಕದನ ವಿರಾಮವನ್ನು ಒಪ್ಪಿಕೊಳ್ಳಲು ಪ್ರೇರೇಪಿಸಿರಬೇಕು. ಆದರೆ ಕದನ ವಿರಾಮದ ವಿಷಯಕ್ಕೆ ಬಂದಾಗ ನಾಗರಿಕ ಮತ್ತು ಮಿಲಿಟರಿ ನಾಯಕತ್ವದ ನಡುವೆ ಇರುವ ಅಭಿಪ್ರಾಯ ವ್ಯತ್ಯಾಸಗಳನ್ನು ಮಧ್ಯವರ್ತಿಗಳು ಪರಿಗಣಿಸಲು ವಿಫಲರಾಗಿರಬಹುದು.

ಕಡೆಯದಾಗಿ ಒಂದು ಮಾತು, ಇಂಡೋ ಪಾಕ್ ನಡುವೆ ಮುಸುಕಿನ ಯುದ್ಧ ನಡೆಯುತ್ತಿರುವ ಈ ಸಂದರ್ಭದಲ್ಲಿ ನಮ್ಮಿಬ್ಬರ ನೆರೆಯ ರಾಷ್ಟ್ರವಾದ ಚೀನಾ ಏನನ್ನುತ್ತದೆ ಎಂದು ಇಡೀ ಪ್ರಪಂಚ ಕುತೂಹಲದಿಂದ ಗಮನಿಸುತ್ತಿದೆ. ಈ ನಡುವೆಯೇ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಕದನ ವಿರಾಮ ಉಲ್ಲಂಘನೆಯ ನಂತರ ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ.

ಭಾರತ ಮತ್ತು ಪಾಕಿಸ್ತಾನ ಸಮಾಲೋಚನೆಯ ಮೂಲಕ ಸಮಗ್ರ ಮತ್ತು ಶಾಶ್ವತವಾದ ಕದನ ವಿರಾಮವನ್ನು ಸಾಧಿಸಬೇಕೆಂದು ಚೀನಾ ಬೆಂಬಲಿಸುತ್ತದೆ ಮತ್ತು ನಿರೀಕ್ಷಿಸುತ್ತದೆ ಎಂದು ಚೀನಾದ ಅಧಿಕೃತ ಸಂಸ್ಥೆ ಕ್ಸಿನ್ಹುವಾ ಉಲ್ಲೇಖಿಸಿದೆ! ಇದರ ನಡುವೆ ಅಮೇರಿಕಾ ಅಧ್ಯಕ್ಷ ಟ್ರಂಪ್, ಉಭಯ ದೇಶಗಳು ಒಪ್ಪಿದರೆ ತಾನು ಇಂಡೋ ಪಾಕ್ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸುತ್ತೇನೆ... ಎಂದು ಜಂಭ ಕೊಚ್ಚಿಕೊಳ್ಳುತ್ತಿದ್ದಾರೆ!

ಅಂತಾ ಉಕ್ಕಿನ ಮಹಿಳೆ ಇಂದಿರಾ ಗಾಂಧಿ ಕಾಲದಿಂದಲೂ ಮುಗಿಯದ ಕಾಶ್ಮೀರ ಸಮಸ್ಯೆ ಟ್ರಂಪ್ ಕೈಲಿ ಆಗುತ್ತಾ?! ಈ ಸಮಸ್ಯೆ ಬಗೆಹರಿಯಬೇಕು ಅಂದ್ರೆ ಅದು ಮೋದಿಯಿಂದ ಮಾತ್ರ ಸಾಧ್ಯ! ಮೋದಿಯವರು ಯಾರ ಮಾತಿಗೂ ಕಿವಿಗೊಡದೆ ಮುನ್ನುಗ್ಗಿದರೆ ಮಾತ್ರ...!! ಆದರೆ ನಮ್ಮ ದೇಶದ ಈಗಿನ ಪರಿಸ್ಥಿತಿ ಹೇಗಿದೆ ಅಂದರೆ, ಬಲಿಷ್ಠ ಸೇನೆ, ದುರ್ಬಲ ರಾಜಕೀಯ...!!!

ಅಮೇರಿಕ, ರಷ್ಯಾ, ಜಪಾನ್, ಇಸ್ರೇಲ್... ಹೀಗೆ, ಅಲ್ಲಿನ ಅಧ್ಯಕ್ಷರು ಪ್ರಧಾನಿಗಳು ಏನೇನು ಹೇಳುತ್ತಾರೋ... ಅಂತ ಕಾದು ಕುಳಿತಿದೆ ನಮ್ಮ ಮೋದಿ ಪಡೆ. ಒಂದೆಡೆ ಪಾಕ್ ಅನ್ನು ದೂಷಿಸುತ್ತ ಭಾರತದ ಜೊತೆ ನಾವಿದ್ದೇವೆ ಎನ್ನುತ್ತಾರೆ. ಇನ್ನೊಂದೆಡೆ, ಅದೇ ಪಾಕ್‌ಗೆ ಕೋಟ್ಯಾಂತರ ರೂ. ಸಾಲ ಕೊಡುತ್ತಾರೆ! ಯಾರನ್ನೂ ಹೇಗೆ ತಾನೇ ನಂಬಬೇಕು?! ಈಗ ನಮ್ಮನ್ನು ನಾವಷ್ಟೇ ನಂಬಬೇಕಿದೆ. ಕಾದು ನೋಡೋಣ ತಡೀರಿ.... ಮೋದೀಜಿ ಟೀಮ್ ಮುಂದಿನ ನಡೆ ಹೇಗಿದೆಯೋ ಏನೋ?!!



## ಆಪರೇಷನ್ ಸಿಂದೂರ 0.2
## ಬೆಂಗಳೂರು ಮಿಲಿಟರಿ ಘಟಕಗಳು ಸಜ್ಜು!!

ಭಾರತ-ಪಾಕಿಸ್ತಾನ ನಡುವೆ ಯುದ್ಧ ಸ್ಥಿತಿ ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ ಸೇನೆಯ ಭಾಷೆಯಲ್ಲಿ 'ಪೀಸ್ ಸ್ಟೇಷನ್' ಎಂದೇ ಕರೆಯಲ್ಪಡುವ ಬೆಂಗಳೂರು ನಗರದಲ್ಲಿರುವ ಸೇನಾ ಘಟಕಗಳು ಮತ್ತು ಸೇನೆಗೆ ಸಂಬಂಧಿಸಿದ ಎಲ್ಲಾ ಸಂಸ್ಥೆಗಳು, ವಿಭಾಗಗಳಲ್ಲಿ ಚಟುವಟಿಕೆಗಳು ಗರಿಗೆದರಿವೆ. ಭಾರತೀಯ ಸೇನಾಪಡೆಗಳ ಬೆನ್ನೆಲುಬಾಗಿರುವ ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್), ಸೇನೆಯ 3 ವಿಭಾಗಗಳ ಶಕ್ತಿಯಾಗಿರುವ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್), ಬಾಹ್ಯಾಕಾಶ ಸಂಸ್ಥೆ ಇಸ್ರೋ, ರಕ್ಷಣಾ ಸಂಶೋಧನೆ ಕೇಂದ್ರ ಡಿಆರ್‌ಡಿಒ, ಎಡಿಇ, ಬಿಇಎಂಎಲ್ ಮತ್ತು ಅದಕ್ಕೆ ಸಂಬಂಧಿಸಿದ ಅನೇಕ ಉಪ ಕೇಂದ್ರಗಳು ಬೆಂಗಳೂರಿನಲ್ಲಿವೆ. ಅಲ್ಲದೇ, ಸೇನೆಗೆ ಸೇವೆ ನೀಡುವ, ಮೂಲಸೌಕರ್ಯ, ಉಪಕರಣಗಳನ್ನು ಒದಗಿಸುವ ನೂರಾರು ಖಾಸಗಿ ಕಂಪನಿಗಳು, ಸೇನಾ ಘಟಕಗಳು ಉದ್ಯಾನನಗರಿಯಲ್ಲಿವೆ. ಈ ಸಂಸ್ಥೆಗಳಿಗೆ ನೀಡಿರುವ ಕೆಲವು ಟಾಸ್ಕ್ ಗಳನ್ನು ಇನ್ನಷ್ಟು ತ್ವರಿತವಾಗಿ ಪೂರ್ಣಗೊಳಿಸಬೇಕು ಮತ್ತು ಮುಂಬರುವ ದಿನಗಳಲ್ಲಿ ಸೇವೆಗಳನ್ನು ತುರ್ತಾಗಿ ಒದಗಿಸಲು ಸರ್ವ ಸನ್ನದ್ಧವಾಗಿರುವಂತೆ ಸೂಚನೆ ಇದ್ದು, ಸೇನಾ ಸಿಬ್ಬಂದಿಗೆ ಈಗಾಗಲೇ ರಜೆ ರದ್ದುಗೊಳಿಸಲಾಗಿದೆ.


ನಿವೃತ್ತ ಮೇಜರ್ ಜನರಲ್ ಎಂ.ಸಿ. ನಂಜಪ್ಪ

ಯುದ್ಧ ವಿಮಾನಗಳಾದ ಎಸ್ಯು 30 ನಿರ್ವಹಣೆ, ಎಲ್‌ಸಿಎ ತೇಜಸ್ ನಿರ್ಮಾಣ, ದಾಳಿ ಹೆಲಿಕಾಪ್ಟರ್‌ಎಎಲ್‌ಎಚ್ ಸೇರಿದಂತೆ ಅನೇಕ ಮಾದರಿಯ ಹೆಲಿಕಾಪ್ಟರ್ ನಿರ್ಮಾಣ, ನಿರ್ವಹಣೆ ಮತ್ತಿತರ ಮಹತ್ವದ ಚಟುವಟಿಕೆಗಳು ಎಚ್‌ಎಎಲ್‌ನಲ್ಲಿ ನಡೆಯುತ್ತವೆ. ಈಗ ಈ ಎಲ್ಲಾ ಕಾರ್ಯಗಳಿಗೆ ಹೆಚ್ಚಿನ ವೇಗ ನೀಡಲಾಗಿದೆ ಎಂದು ತಿಳಿದು ಬಂದಿದೆ. ಆಕಾಶದಿಂದ ಕಣ್ಣಿಟ್ಟ ಇಸ್ರೋ ಮಿಲಿಟರಿ ಮತ್ತು ಗೌಪ್ಯ ಕಾರ್ಯಾಚರಣೆಗೆ ಸಂಬಂಧಿಸಿದ ಇಸ್ರೋ ಸ್ಯಾಟಲೈಟ್‌ಗಳಾದ ಜಿ-ಸ್ಯಾಟ್, ಸಿಂಥೆಟಿಕ್ ಅಪಾರ್ಚರ್ ರಡಾರ್(ಎಸ್‌ಎಆರ್), ಕಮ್ಯುನಿಕೇಷನ್ ಸ್ಯಾಟಲೈಟ್‌ಗಳು ಎಂದಿಗಿಂತಲೂ ಹೆಚ್ಚು ಅಲರ್ಟ್ ಆಗಿವೆ. ಅದರಲ್ಲೂ ಗಡಿ ಮತ್ತು ಗಡಿಯಾಚೆಗಿನ ಚಟುವಟಿಕೆಗಳ ಮೇಲೆ ಬೆಂಗಳೂರು ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಸ್ಯಾಟಲೈಟ್ ಮಾನಿಟರ್ ಕೇಂದ್ರಗಳು ಹದ್ದಿನ ಕಣ್ಣಿಟ್ಟಿವೆ.

ತರಬೇತಿ ಕೇಂದ್ರಗಳಲ್ಲಿ ಟ್ರೈನಿಂಗ್ ಪಡೆಯುತ್ತಿರುವ ಸೈನಿಕರು, ಅಗ್ನಿವೀರರು, ವೈದ್ಯಕೀಯ, ನರ್ಸಿಂಗ್, ಎಂಜಿನಿಯರಿಂಗ್, ಕಮ್ಯುನಿಕೇಷನ್ ಸೇರಿದಂತೆ ಸೇನೆಯ ಬೇರೆ ಬೇರೆ ವಿಭಾಗಗಳಲ್ಲಿ ಕೆಲಸ ಮಾಡುವ ಸೇನಾಧಿಕಾರಿಗಳು ಮತ್ತು ಸಿಬ್ಬಂದಿ ತರಬೇತಿ ಕೇಂದ್ರಗಳಾದ ಏರ್ಫೋರ್ಸ್ ಟೆಕ್ನಿಕಲ್ ಕಾಲೇಜ್ (ಎಎಫ್‌ಟಿಸಿ), ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ (ಎಂಇಜಿ), ಕಮಾಂಡ್ ಆಸ್ಪತ್ರೆ ಮತ್ತು ನರ್ಸಿಂಗ್ ಕಾಲೇಜು ಸೇರಿದಂತೆ ಎಲ್ಲಾ ತರಬೇತಿ ಕೇಂದ್ರಗಳ ಸಿಬ್ಬಂದಿಗೆ ಸನ್ನದ್ಧ ಸ್ಥಿತಿಯ ಸೂಚನೆಯಿದೆ ಎಂದು ತಿಳಿದು ಬಂದಿದೆ.

ಮೇಜರ್ ಜನರಲ್ ಎಂ.ಸಿ. ನಂಜಪ್ಪ ಗಡಿಯಿಂದ ಸಾಕಷ್ಟು ಅಂತರದಲ್ಲಿರುವ ಕಾರಣ ಸೇನೆಗೆ ಸಂಬಂಧಿಸಿದ ತರಬೇತಿ ಮತ್ತು ಸಂಶೋಧನಾ ಕೇಂದ್ರಗಳು ಬೆಂಗಳೂರಿನಲ್ಲಿವೆ. ದೇಶದ ಸೇನಾ ವ್ಯವಸ್ಥೆಗೆ ಬೆಂಗಳೂರು ನರಮಂಡಲ ಇದ್ದಂತೆ!

ಹೀಗಾಗಿ, ಈ ನಗರದ ಮೇಲೂ ಶತ್ರುಗಳ ಕಣ್ಣಿರುತ್ತದೆ ಎಂದು ಭಾರತೀಯ ಸೇನೆಯ ನಿವೃತ್ತ ಮೇಜರ್ ಜನರಲ್ ಎಂ.ಸಿ. ನಂಜಪ್ಪ ಹೇಳಿದ್ದಾರೆ. ಪತ್ರಿಕೆಯೊಂದಿಗೆ ಮಾತನಾಡಿದ ಅವರು, ನಮ್ಮ ವೈಮಾನಿಕ ಗಡಿ ರಕ್ಷಣಾ ವ್ಯವಸ್ಥೆ ಬಲಿಷ್ಠವಾಗಿದೆ. ಬೆಂಗಳೂರು ನಗರದವರೆಗೆ ಕ್ಷಿಪಣಿಗಳು ನುಸುಳಲು ಅವಕಾಶ ನೀಡದೆ ಗಡಿಯಲ್ಲೇ ಹೊಡೆದು ಹಾಕುತ್ತವೆ. ಪಾಕಿಸ್ತಾನ-ಭಾರತ ನಡುವಿನ ಅತ್ಯಂತ ಸಮೀಪದ ಗಡಿಯನ್ನೇ ಪರಿಗಣಿಸಿದರು ಸುಮಾರು 1,800 ಕಿ.ಮೀ. ದೂರದಲ್ಲಿ ಬೆಂಗಳೂರು ನಗರವಿದೆ. ಆದರೆ, ಚೀನಾದ ನೆರವಿನೊಂದಿಗೆ ಅಭಿವೃದ್ಧಿಪಡಿಸಿರುವ ಕೆಲವು ಕ್ಷಿಪಣಿಗಳು 2,000 ಕಿ.ಮೀ. ಮೇಲ್ಪಟ್ಟು ದೂರದವರೆಗೆ ಕ್ರಮಿಸಬಲ್ಲವು. ಹೀಗಾಗಿ, ಬೆಂಗಳೂರು ಅಲರ್ಟ್ ಸ್ಥಿತಿಯಲ್ಲಿರುತ್ತದೆ. ಇನ್ನು ಸೇನೆಗೆ ಬೆನ್ನೆಲುಬಾಗಿ ಅನೇಕ ಕೆಲಸಗಳು ಬೆಂಗಳೂರಿನಿಂದ ಆಗುತ್ತಿರುತ್ತವೆ. ಜನರು ಕೂಡ ಜವಾಬ್ದಾರಿಯಿಂದ ಇರಬೇಕು ಎಂದು ತಿಳಿಸಿದರು.

ಆಪರೇಷನ್ ಸಿಂದೂರ ಬಳಿಕ ಜಮ್ಮು ಕಾಶ್ಮೀರದಲ್ಲಿ ಆಪರೇಷನ್ ಇಂಡೋರ್ (ಒಳಾಂಗಣ) ಆಗಬೇಕು. ನಮ್ಮ ದೇಶದ ವಿರುದ್ಧ ಕೆಲಸ ಮಾಡುವ ಶಕ್ತಿಗಳು ಎಲ್ಲೇ ಇದ್ದರೂ ಅವುಗಳನ್ನು ಮಟ್ಟ ಹಾಕಬೇಕು. ಆಗ ಶಾಂತಿ ನೆಲೆಸಲು ಸಾಧ್ಯ ಎಂಬುದಾಗಿ ನಿವೃತ್ತ ಮೇಜರ್ ಎಂ.ಸಿ ನಂಜಪ್ಪ ಗುಡುಗಿದ್ದಾರೆ! ☯

11 ☞ ಕೊಟ್ಟಿದೆ ಎಂದು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಅಮರಯ್ಯ ಸ್ವಾಮಿ ಹಿರೇಮಠ, ಸಂಸ್ಥಾಪಕ ಅಧ್ಯಕ್ಷರು ಕಾರುಣ್ಯ ಆಶ್ರಮ, ಮಂಜುನಾಥ ಭಂಗಿ ಅಧ್ಯಕ್ಷರು ಕಾರುಣ್ಯ ಆಶ್ರಮ, ಸಲಹಾ ಸಮಿತಿ ಮಲ್ಲಿಕಾರ್ಜುನ ಸ್ವಾಮಿ ಕರಡಕಲ್ ಸದಸ್ಯರು ಶ್ರೀಮಠ ಸೇವಾ ಟ್ರಸ್ಟ್ ಕಾರುಣ್ಯ ಆಶ್ರಮ, ಅಶೋಕ ನಲ್ಲ ಸಾರ್ವಜನಿಕ ಸಂಪರ್ಕ ಅಧಿಕಾರಿಗಳು ಕಾರುಣ್ಯ ಆಶ್ರಮ, ಫಯಾಜುದ್ದೀನ್ ನಿವೃತ್ತ ಪೊಲೀಸ್ ಅಧೀಕ್ಷಕರು, ಕೆ ಎಸ್ ಐಎಸ್‌ಎಫ್ ಧಾರವಾಡ, ವೆಂಕಟೇಶ ಹೂಗಿಬಂಡಿ ಡಿವೈಎಸ್ಪಿ, ಉಪ ವಿಭಾಗ ಸಿರುಗುಪ್ಪ, ಸಿಪಿಐಗಳಾದ ವೀರಾರೆಡ್ಡಿ- ಸಿಂಧನೂರು ಗ್ರಾಮೀಣ ವೃತ್ತ, ಸಾಬಯ್ಯ- ರಾಯಚೂರು ಗ್ರಾಮೀಣ ವೃತ್ತ, ಗುಂಡುರಾವ್- ದೇವದುರ್ಗ ಗ್ರಾಮೀಣ ವೃತ್ತ, ಎಚ್‌ಸಿಗಲಾದ ರುದ್ರಗೌಡ, ಗೋಪಾಲ, ಜಗದೀಶ, ಹೊನ್ನೂರು ಸಾ., ಹಜರತ್, ಮಲ್ಲಿಕಾರ್ಜುನ, ತೋಟಪ್ಪ ಗೌಡ, ವಿರುಪಾಕ್ಷಯ್ಯ ಸ್ವಾಮಿ, ಮಹಾದೇವ, ಶಂಕರ್, ಅಮರೇಶ ರಾಥೋಡ್ ಹಾಗೂ ಸುಮಾರು 95ಕ್ಕೂ ಹೆಚ್ಚು ಪುರುಷ ಹಾಗೂ ಮಹಿಳಾ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

### ಕಾರುಣ್ಯ ಸಂಸ್ಥೆಗೆ ರಾಯಚೂರು ಜಿಲ್ಲಾ ಪೊಲೀಸ್ ವತಿಯಿಂದ ಅಭಿನಂದನೆ

ಎಂ. ಪುಟ್ಟಮಾದಯ್ಯ ಪೊಲೀಸ್ ಅಧೀಕ್ಷಕರು, ರಾಯಚೂರು ಪೊಲೀಸ್ ಮೈದಾನದಲ್ಲಿ ಹಮ್ಮಿಕೊಂಡಿದ್ದ ಪರೇಡ್ ಕಾರ್ಯಕ್ರಮದಲ್ಲಿ ರಾಯಚೂರು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಎಂ. ಪುಟ್ಟಮಾದಯ್ಯ ಅವರು ಜಿಲ್ಲಾ ಪೊಲೀಸ್ ಅಧಿಕಾರಿಗಳ ಸಮಕ್ಷಮದಲ್ಲಿ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ದಿಮಾಂದ್ಯ ಆಶ್ರಮದ ಕಾರ್ಯಾಧ್ಯಕ್ಷರಾದ ಚನ್ನಬಸಯ್ಯಸ್ವಾಮಿ ಹಿರೇಮಠ ಅವರ ನಿರಂತರ ಅನಾಥಪರ ಸಮಾಜಪರ ಕಾರ್ಯಗಳನ್ನು ಪರಿಗಣಿಸಿ ಹಾಗೂ ಆಶ್ರಮದಲ್ಲಿ ಸುಮಾರು ಒಂದೂವರೆ ವರ್ಷಗಳ ಕಾಲ ಉಚಿತವಾಗಿ ಆಶ್ರಮದ ಆಶ್ರಯದಾದರೂಗಳ ಕ್ಷೌರ ಸೇವೆ ಮಾಡುವ ಮೂಲಕ ನಿಸ್ವಾರ್ಥತೆಯ ಸೇವೆ ಒದಗಿಸಿರುವ ಹೊಸಳ್ಳಿ (ಇ.ಜೆ) ಕ್ಯಾಂಪಿನ ಆನಂದ್ ಹೇರ್ ಸ್ಟೈಲ್ ಮಾಲೀಕರಾದ ಸಿಂಹಾದ್ರಿ, ಇವರುಗಳಿಗೆ ಗೌರವ ಪೂರ್ವಕವಾಗಿ ಪ್ರಶಂಸನೀಯ ಪ್ರಮಾಣ ಪತ್ರವನ್ನು ವಿತರಿಸಿದರು. ಈ ಕಾರ್ಯಕ್ರಮದಲ್ಲಿ ಸಿಂಧನೂರು ಉಪ ವಿಭಾಗದ ಡಿವೈಎಸ್ಪಿಗಳಾದ ಬಿ.ಎಸ್. ತಳವಾರ ಅವರು ಕಾರುಣ್ಯ ಆಶ್ರಮದ ಹುಟ್ಟು ನಡೆದು ಬಂದ ದಾರಿ ಮತ್ತು ಆಶ್ರಮದ ಉದ್ದೇಶಗಳು ಧ್ಯೇಯೋದ್ದೇಶಗಳ ಹಾಗೂ ನಿರಂತರ ಸೇವಾ ಕಾರ್ಯಗಳ ಬಗ್ಗೆ ಪೊಲೀಸ್ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ವಿವರಿಸಿ ಆಶ್ರಮದ ಸೇವೆಯನ್ನು ಶ್ಲಾಘಿಸಿದರು. ನಂತರ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸಯ್ಯಸ್ವಾಮಿ ಹಿರೇಮಠ ರಾಯಚೂರು ಜಿಲ್ಲಾ ಪೊಲೀಸ್ ಇಲಾಖೆಗೆ ಹೃದಯಪೂರ್ವಕ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸಿದರು.



☯

# ಪಾತಕ ಪ್ರಪಂಚ

# ಇದು ಸರಿಯಲ್ಲ... ತರವಲ್ಲ

ಅವಳು ಆಕರ್ಷಕ ರೂಪವತಿ. ಅವಳ ಬಲು ವಿಶಿಷ್ಟವಾದ ಸೌಂದರ್ಯಕ್ಕೆ ಬೆರಗಾಗಿ, ಬಡಕುಟುಂಬದ ಭವಾನಿಯನ್ನು ವಿವಾಹವಾಗಿದ್ದನು ಎಂದು ಹೇಳಬಹುದು.

ಶ್ರೀಮತಿ ಭವಾನಿ ರಂಗನ್.

ಶ್ರೀರಂಗನ್ ಎಂಬ ಪ್ರಭಾವಶಾಲಿ ಉದ್ಯಮಿಗೆ ಹೆಂಡತಿ ಅಂದರೆ ವಿಪರೀತ ಪ್ರೀತಿ, ಕಾಳಜಿ ಇದೆ. ಅವಳಿಗೆ ಶ್ರೀಮಂತಿಕೆಯ ವೈಭವದಲ್ಲಿ ತೇಲಾಡಿಸುತ್ತಾನೆ.

ದಾಂಪತ್ಯ ತೃಪ್ತಿ ಕೊಡುತ್ತಾನೆ.

ಮೇಡ್ ಫಾರ್ ಈಚ್ ಅದರ್.

ಬೆಂಗಳೂರಿನಲ್ಲಿ ಸುಪ್ರಸಿದ್ಧ ಟಿವಿ ಚಾನಲ್‌ನವರು ಆದರ್ಶ ದಂಪತಿಗಳ ಸ್ಪರ್ಧೆ ಏರ್ಪಡಿಸಿದ್ದರು.

ಭವಾನಿ-ರಂಗನ್ ದಂಪತಿ ಈ ಸ್ಪರ್ಧೆಯಲ್ಲಿ ನಾಲ್ಕು ಹಂತಗಳಲ್ಲಿ ಗೆದ್ದಿದ್ದಾರೆ.

ಕೊನೆಯ ಪರೀಕ್ಷೆ ನಡೆಯುತ್ತಿದೆ.

ಫಲಿತಾಂಶ ಹೊರಬಂದಿತು.

ಶ್ರೀಮಂತ ರಂಗನ್ ದಂಪತಿಗಳು ಆದರ್ಶ ದಂಪತಿಗಳಾಗಿ ಗೆದ್ದಿದ್ದಾರೆ. ಟಿವಿ ಚಾನಲ್‌ನವರು ಇವರಿಬ್ಬರನ್ನು ವಿಜೃಂಭಣೆಯಿಂದ ಸನ್ಮಾನ ಮಾಡಿ ಗೌರವಿಸುತ್ತಿದ್ದಾರೆ.

ಭೋಜನದ ವ್ಯವಸ್ಥೆ ಮಾಡಲಾಗಿದೆ. ಈಗ ಭವಾನಿ ಟಾಯ್ಲೆಟ್‌ಗೆ ಬಂದಳು.

ಡೋರ್ ಲಾಕ್ ಆಗಿದೆ.

ಫೋನ್ ಸಿಗ್ನಲ್ ನೀಡಿತು.

ಅಭಿನಂದಿಸಲು ಯಾರೋ ಫೋನ್ ಮಾಡಿರಬೇಕು ಎಂದುಕೊಂಡು ಅಟೆಂಡ್ ಮಾಡಿದಳು.

ಅನ್‌ನಂಬರ್ ಫೋನ್ ಕಾಲ್.

"ಹಲೋ... ಹಲೋ..."

''ಕಂಗ್ರ್ಯಾಜುಲೇಷನ್ ಭವಾನಿ. ಶೀಲ ಕಳೆದುಕೊಂಡಿದ್ದರೂ, ಗಂಡನಿಗೆ ವಂಚನೆ ಮಾಡುತ್ತಿರುವ ಹೆಂಡತಿ ಆಗಿದ್ದರೂ ನೀನು ಆದರ್ಶ ಪತ್ನಿ ಆಗಿದ್ದೀಯ. ಟಿವಿ ಚಾನಲ್ ವೀಕ್ಷಕರು ನಿನ್ನನ್ನು ಆದರ್ಶ ದಂಪತಿ ಎಂದು ಪ್ರಚಾರ ನೀಡುತ್ತಿದ್ದಾರೆ.''

ಅವಳು ಬೆಚ್ಚಿಬಿದ್ದಳು.

ಅವನ ಧ್ವನಿ ಗುರುತಿಸಿದಳು.

"ಹಾಂ... ನೀವಾ..."

''ನಾನು ಸತ್ತಿಲ್ಲ ಭವಾನಿ. ನನ್ನ ಆಯಸ್ಸು ಇನ್ನೂ ತುಂಬಾ ಇರೋದ್ರಿಂದ ಸಾವಿನ ಬಲೆಯಿಂದ ಪಾರಾಗಿದ್ದೇನೆ.''

ಅವಳು ಚಡಪಡಿಸುತ್ತಾ ''ನಿನಗೆ ಸಾವಿನ ವಿಚಾರದ ಬಗ್ಗೆ ಸತ್ಯ ತಿಳಿದಿಲ್ಲ. ನಾಳೆ ನಿನ್ನನ್ನು ಭೇಟಿ ಮಾಡ್ತೀನಿ. ಅಲ್ಲಿಯತನಕ ತಾಳ್ಮೆಯಿಂದ ಇರು'' ಎಂದಳು.

"ಕೊಲೆ ಮಾಡಲು ಸಂಚು ತಾನೆ?''

"ನೋಡು ಭೈರವ... ನಿನ್ನನ್ನು ಕೊಲೆ ಮಾಡಲು ನಾನು ಯಾವತ್ತೂ ಪ್ರಯತ್ನ ಮಾಡಿಲ್ಲ. ನೀನು ನನಗಾಗಿ ತುಂಬಾ ಉಪಕಾರ ಮಾಡಿದ್ದೀಯ. ಮುಂದೆ ಸಹ ನಿನ್ನಿಂದ ನನಗೆ ಸಹಾಯ ಬೇಕಾಗುತ್ತೆ. ಅಂದ ಮೇಲೆ ನಾನು ನಿನ್ನನ್ನು ಕೊಲೆ ಮಾಡಿಸಲು ಪ್ರಯತ್ನ ಮಾಡ್ತೀನಾ? ಈಗ ನಾನು ಟಾಯ್ಲೆಟ್ ಒಳಗಿದ್ದೀನಿ. ನಾಳೆ ನಿನ್ನ ಮಾಮೂಲಿ ಜಾಗದಲ್ಲಿ ಮೀಟ್ ಮಾಡ್ತೀನಿ. ಅದಕ್ಕೆ ಮೊದಲು ನಿನಗೆ ಫೋನ್ ಮಾಡ್ತೀನಿ.''

"ರಹಸ್ಯ ಕಾಪಾಡಬೇಕಾ?''

"ಅದು ನನಗೆ ಅನಿವಾರ್ಯ.''

''ನೀನು ನನಗೆ ಮೋಸ ಮಾಡಿದ್ದೀಯ. ನಂಬಿಕೆ ದ್ರೋಹ ಮಾಡಿದ್ದೀಯ. ಆದರೂ ನಿನ್ನನ್ನು ಕ್ಷಮಿಸಿದ್ದೇನೆ. ಆದರೆ ಅದಕ್ಕೆ ನೀನು ದಂಡ ಕೊಡಲೇಬೇಕು ಭವಾನಿ.''

"ದಂಡ ಅಂದರೆ ಹಣ ತಾನೆ?''

"ಐದು ಲಕ್ಷ ಬೇಕು.''

"ಆಗಲಿ ಕೊಡ್ತೀನಿ. ಓಕೆ. ಈಗ ಫೋನ್ ಲಿಂಕ್ ಕಟ್ ಮಾಡ್ತೀನಿ'' ಎಂದು ಹೇಳಿ ಅವನು ಈಗ ಮಾಡಿದ್ದ ಫೋನ್ ನಂಬರ್ ಅನ್ನು ಡಿಲೀಟ್ ಮಾಡಿ ಬೇಗ ಬೇಗ ಫ್ರಶ್ ಆಗಿ ಹೊರಗೆ ಬಂದಳು.

ಎಲ್ಲಾ... ಎಲ್ಲಾ ಓಕೆ ಆಗಿದೆ.

ಟಿವಿ ಚಾನಲ್‌ನಲ್ಲಿ ಭವಾನಿ ಮತ್ತು ಗಂಡ ಶ್ರೀರಂಗನ್ ರತಿ-ಮನ್ಮಥರಂತೆ ಕಂಗೊಳಿಸುತ್ತಿದ್ದಾರೆ.

ಆಗರ್ಭ ಶ್ರೀಮಂತನಾಗಿರುವ ರಂಗನ್ ಅಪಿಯರೆನ್ಸ್ ಹೀರೋ ರೀತಿ ಇದೆ. ಅವಳಂತು ಅತ್ಯಾಕರ್ಷಕ ರೂಪವತಿ. ಟಿವಿ ಚಾನಲ್‌ನಲ್ಲಿ ಇವರಿಬ್ಬರ ಸಂದರ್ಶನ ಬರುತ್ತಿದೆ.

ಶ್ರೀರಂಗನ್‌ಗೆ ವ್ಯಾಪಾರ-ವ್ಯವಹಾರ ಪ್ರಪಂಚ ಒಂದು ಭಾಗವಾದರೆ, ಸಂಸಾರದ ಧರ್ಮಪತ್ನಿ ಮತ್ತೊಂದು ಮುಖ್ಯಭಾಗ.

ಅವಳನ್ನು ಮತ್ತು ದಾಂಪತ್ಯದ ಮಾಧುರ್ಯತೆಯನ್ನು, ಸಂಸಾರದಲ್ಲಿರುವ ಸಾಮರಸ್ಯತೆ ಮತ್ತು ಸಂತೃಪ್ತಿಯ ಬಗ್ಗೆ ಹೃದಯಪೂರ್ವಕವಾಗಿ ಹೊಗಳುತ್ತಿದ್ದಾನೆ.

ಅವಳಿಗೆ ಕಸಿವಿಸಿ ಆಗುತ್ತಿದೆ. ಆದರೆ ತನ್ನ ಭಾವನೆಗಳನ್ನು ಕಂಟ್ರೋಲ್ ಮಾಡಿಕೊಂಡು ತುಂಬಾ ಕಷ್ಟದಿಂದ ನಗಲು ಪ್ರಯತ್ನಿಸುತ್ತಿದ್ದಾಳೆ. ಯಾಕೆ ಅಂದರೆ ಚಾನಲ್‌ನವರ ಲೈವ್ ಪ್ರೋಗ್ರಾಂ ಪ್ರಸಾರ ಆಗುತ್ತಿದೆ.

ನೂರಾರು ಮಂದಿಯಿಂದ ಇವರಿಗೆ ಅಭಿನಂದನೆಗಳ ಫೋನ್ ಕಾಲ್ಸ್ ಬರುತ್ತಿದೆ. ಕಾರಲ್ಲಿ ಪ್ರಯಾಣ ಮಾಡುತ್ತಿರುವಾಗ ಅವರಿಬ್ಬರು ಫೋನ್‌ನಲ್ಲಿ ಮಾತಾಡುತ್ತಿದ್ದಾರೆ.

ಡ್ರೈವರ್ ಡ್ರೈವಿಂಗ್ ಮಾಡುತ್ತಿದ್ದಾನೆ.

ಕಂಪನಿಯ ಉದ್ಯಮಿಗಳೆಲ್ಲಾ ಸೇರಿ ಆದರ್ಶ ದಂಪತಿ ಸ್ಪರ್ಧೆಯಲ್ಲಿ ವಿಜೇತರಾಗಿರುವ ಇವರಿಬ್ಬರಿಗೆ ಸನ್ಮಾನ ಮತ್ತು ಅಭಿನಂದನ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ.

ಅವಳು ಉತ್ಸಾಹದಿಂದ ಪಾಲ್ಗೊಂಡಿದ್ದಾಳೆ. ಎಲ್ಲರೊಂದಿಗೆ ನಗು ನಗುತ್ತಾ ಅಭಿನಂದನೆಯ ಗೌರವ ಸ್ವೀಕರಿಸುತ್ತಿದ್ದಾಳೆ.

ರಾತ್ರಿ ಹತ್ತು ಗಂಟೆ.

ಉದ್ಯಮಿಗಳ ನೀಡಿದ್ದ ಗ್ರ್ಯಾಂಡ್ ಪಾರ್ಟಿಯಲ್ಲಿ ಭರ್ಜರಿ ಊಟ ಆಗಿದ್ದರಿಂದ ಮನೆಗೆ ಬಂದ ಕೂಡಲೇ ಬೆಡ್ ರೂಮನ್ನು ಸೇರಿದ್ದಾರೆ. ಈಗ ಅವಳು ಗಂಡನ ಕಡೆ ತಿರುಗಿದಳು.

ಅವಳ ರತಿ ಚೆಲುವಿನ ಮೈಮಾಟ ಮತ್ತು ಸೌಂದರ್ಯ ತುಂಬಿರುವ ಮುದ್ದಾದ ಮುಖವನ್ನು ರೆಪ್ಪೆ ಆಡಿಸದೆ ನೋಡುತ್ತಿದ್ದಾನೆ.

ಭವಾನಿ ''ಡ್ರೆಸ್ ಚೇಂಜ್ ಮಾಡಿ ಬರ್ತೀನಿ'' ಎಂದು ಹೊರಟಳು.

ಅವಳಿಗೆ ಗೊತ್ತಿದೆ.

ಈ ರಾತ್ರಿ ಗಂಡ ಕಾಮದಾಟ ಆಡುತ್ತಾನೆ. ಆ ಕ್ಷಣಗಳಲ್ಲಿ ಮಿಲನದ ನೆನಪಾಗಿ ಮೂರು ಮುಖದಲ್ಲಿ ಬೇರೊಂದು ರೀತಿಯ ಭಾವನೆಯ ಛಾಯೆ ಮೂಡಿತು.

ಆದರ್ಶ ದಂಪತಿಗಳ ಸ್ಪರ್ಧೆಯಲ್ಲಿ ಅವಳ ಸೌಂದರ್ಯ ವಿಶೇಷವಾಗಿ ಆಕರ್ಷಿಸಿತ್ತು . ತನ್ನ ಚೆಲುವಿಗೆ ಮೆರಗು ಬರುವಂತೆ ಅವಳು ಡ್ರೆಸ್ ಮತ್ತು ಮೇಕಪ್ ಮಾಡಿಕೊಂಡಿದ್ದಳು. ಅವಳು ಹತ್ತಿರ ಬಂದಳು. ಆ ಕ್ಷಣಗಳಲ್ಲಿ ಬದಲಾದ ರಂಗನ್ ಅವಳ ಕೈ ಹಿಡಿದು ಎಳೆದುಕೊಂಡು ಮುದ್ದಾಡಿದನು.

ಅವನ ಚುಂಬನಕ್ಕೆ ತುಟಿಗಳನ್ನು ಕೊಟ್ಟು ಸಹಕರಿಸಿದಳು.

ಅವಳನ್ನು ಹಂತ ಹಂತವಾಗಿ ಬೆತ್ತಲೆಗೊಳಿಸುತ್ತಿದ್ದಾನೆ.

ಮಂಚದಲ್ಲಿ ರತಿಯಾಗಿ ತೆರೆದುಕೊಂಡು ಸಹಕರಿಸಿದಳು. ಅಬ್ಬ... ಅವಳ ದೇಹದ ಅಂಗುಲ, ಅಂಗುಲವನ್ನೂ ಹಿಂಡುತ್ತಾ, ಕೆಟ್ಟ ರೀತಿಯಲ್ಲಿ, ಒಂದು ರೀತಿ ಮುಜುಗರ ಆಗುವಂತೆ ಶೃಂಗಾರದಾಟ ಆಡುತ್ತಿದ್ದಾನೆ.

ಮಿಲನೋತ್ಸವ ಮುಗಿದಿದೆ.

ಅವಳು ಎದ್ದು ಬೆತ್ತಲಾಗಿಯೇ ಬಾತ್‌ರೂಮಿಗೆ ಹೋಗಿ ಸ್ನಾನ ಮಾಡಿ ಬಂದಳು.

ಗಂಡನ ಜೊತೆ ಸುಖದ ಆಟಗಳಿಗೆ ಸಹಕರಿಸಿದಾಗಲೆಲ್ಲಾ ಇವಳ ಮೈ ಅವನ ನಾಲಿಗೆ ಸ್ಪರ್ಶದಿಂದ ಅಂಟು ಅಂಟಾಗಿರುತ್ತದೆ. ಅವಳು ನೈಟಿ ಧರಿಸಿಕೊಂಡು ಬಂದು ಗಂಡನ ಕಡೆ ನೋಡಿದಳು.

ಗೊರಕೆ ಹೊಡೆಯುತ್ತಿದ್ದಾನೆ.

ಅವಳು ತಿರಸ್ಕಾರದಿಂದ ನೋಡಿದಳು. ಅವಳಿಗೆ ತಿಳಿದಿದೆ. ಮೈಮೇಲೆ ಇಲಿ, ಹೆಗ್ಗಣಗಳೇ ಹರಿದಾಡಿದರೂ ಸಹ ಅವನಿಗೆ ಬೆಳಗಿನ ತನಕ ಎಚ್ಚರ ಆಗೋಲ್ಲ.

ಅವಳ ಮೊಬೈಲ್ ಎತ್ತಿಕೊಂಡು ಈಗ ಬೆಡ್‌ರೂಮ್‌ನಿಂದ ಬಾಲ್ಕಾನಿಗೆ ಬಂದಳು.

ಅಂದು ಹುಣ್ಣಿಮೆ.

ಬೆಳದಿಂಗಳ ಬೆಳಕು ಹರಡಿದೆ.

ಮಹಾನಗರ ಆಗಿರುವುದರಿಂದ ರಾತ್ರಿ ಹನ್ನೆರಡು ಗಂಟೆ ಆಗಿದ್ದರೂ ಸಹ ವಾಹನಗಳ ತಿರುಗಾಟ ಇದೆ.

ಗಾಳಿ ಸೊಯ್ಯನೆ ಬೀಸುತ್ತಿದೆ.

ತಲೆ ಕೂದಲು ಕೆದರಿದೆ.

ಮುಖದ ಮೇಲೆ ಲಾಸ್ಯವಾಡುತ್ತಿದೆ.

ಅವಳು ಫೋನ್ ಮಾಡಿದಳು. ಎರಡು ಸಲ ಫೋನ್ ಮಾಡಿದ ನಂತರ ಅತ್ತ ಕಡೆಯಿಂದ ಆಕಳಿಸುತ್ತಾ ಮಾತಾಡಿದರು.

ಅವಳು ಕೋಪದಿಂದ ''ಏ ವಿನಯ್... ನಿನಗೆ ನಿದ್ರೆಯ ಮಂಪರು. ನನಗೆ ತಲೆ ಕೆಟ್ಟು ಹೋಗಿದೆ. ಸಮಸ್ಯೆಯ ಸುಳಿಯಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿದ್ದೇನೆ'' ಎಂದಳು.

ಅವನು ಗಾಬರಿಯಿಂದ ''ಏ... ಅಂತಾದ್ದು ಏನಾಗಿದೆ?''

"ಭೈರವ ಫೋನ್ ಮಾಡಿದ್ದ.''

ಅವನು ಗಾಬರಿಯಿಂದ ''ಏನಂದೆ... ಭೈರವ ಫೋನ್ ಮಾಡಿದ್ನ? ನೋ... ನೋ ಸಾಧ್ಯವಿಲ್ಲ'' ಎಂದನು.

''ಇವತ್ತು ಫೋನ್ ಮಾಡಿದ್ದ. ನಾನು ಅವನ ಮಾತುಗಳನ್ನು ರೆಕಾರ್ಡ್ ಮಾಡಿದ್ದೀನಿ.''

ವಿನಯ್ ಗಂಭೀರವಾಗಿ ''ಭವಾನಿ... ಎರಡು ದಿನಗಳ ಹಿಂದೆ ನಾನೇ ಅವನ ಕತ್ತನ್ನು ಹಿಸುಕಿ ಕೊಲೆ ಮಾಡಿದ್ದೇನೆ'' ಎಂದನು.

''ಅವನ ಡೆಡ್‌ಬಾಡಿನ ಹೂತು ಹಾಕಿದ್ಯ? ಅಥವಾ ಮಣ್ಣು ಮಾಡಿದ್ಯ?''

ಅವನು ಚಡಪಡಿಸಿದನು. ನಂತರ ''ನಾನು ಗೌಪ್ಯವಾದ ಸ್ಥಳದಲ್ಲಿ ಯಾರಿಗೂ ಅನುಮಾನ ಬಾರದ ರೀತಿ ಕೊಲೆ ಮಾಡಿದ್ದರಿಂದ ಡೆಡ್‌ಬಾಡಿ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ'' ಎಂದನು.

''ಆದರೆ ಅವನು ಸತ್ತಿಲ್ಲ. ಹರಿತವಾದ ಆಯುಧದಿಂದ ತಿವಿದು ಕೊಲೆ ಮಾಡುವುದನ್ನು ಬಿಟ್ಟು ಕತ್ತನ್ನು ಹಿಸುಕಿದ್ದೀಯ. ಅವನು ಉಸಿರಾಡುತ್ತಿದ್ದಾನೋ ಇಲ್ಲವೋ ಎಂಬುದನ್ನು ಗಮನಿಸದೆ ಅಲ್ಲಿಂದ ಜಾಗ ಕಾಲಿ ಮಾಡಿದ್ದೀಯ. ಅವನೀಗ ನನ್ನನ್ನು ಬ್ಲಾಕ್‌ಮೇಲ್ ಮಾಡಿ ಆಟ ಆಡಿಸುತ್ತಿದ್ದಾನೆ.''

''ಏ... ಏ... ನೀನು ಗಾಬರಿಯಾಗಬೇಡ. ನಾಳೆ ಅವನ ಕತೆ ಮುಗಿಸುತ್ತೇನೆ.''

''ನಾಳೆ ಐದು ಲಕ್ಷ ಹಣ ತಗೊಂಡು ಅವನನ್ನು ಮೀಟ್ ಮಾಡ್ಬೇಕು. ಈ ಸಲ ಅವನು ತುಂಬಾ ಕೇರ್‌ಫುಲ್ ಆಗಿರುತ್ತಾನೆ. ಎಡವಟ್ಟಾದರೆ ನನ್ನ ಸೀಕ್ರೇಟ್ ಸೋಷಿಯಲ್ ಮೀಡಿಯಾದಲ್ಲಿ ರಂಗು, ರಂಗಿಗೆ ಪ್ರಸಾರ ಆಗುತ್ತೆ.''

''ನೀನು ಹೆದರುವ ಅಗತ್ಯ ಇಲ್ಲ. ಅವನಿಗೆ ಫೋನ್ ಮಾಡಿ ಪ್ರೋಗ್ರಾಂ ಫಿಕ್ಸ್ ಮಾಡು. ಅವನು ಎಲ್ಲಿರುತ್ತಾನೆ ಅಂತ ನನಗೆ ಹೇಲು. ನೀನು ಅವನನ್ನು ಮೀಟ್ ಮಾಡುವ ಮೊದಲೇ ಮರ್ಡರ್ ಮಾಡ್ತೀನಿ.''

''ಗುರುವಾರ ಅವನನ್ನು ಕೊಲೆ ಮಾಡಿದಾಗ ನನಗೆ ಸಂಬಂಧಪಡುವ ಒಂದೇ ಒಂದು ವರ್ಜಿನಲ್ ವೀಡಿಯೋ ಕ್ಲಿಪ್ ತಂದುಕೊಟ್ಟೆ. ಅವನ ಹತ್ತಿರ ಇನ್ನೊಂದು ಸಿ.ವಿ.ಆರ್. ಕ್ಲಿಪ್ ಇದೆ. ಅದೇ ತುಂಬಾ ಮುಖ್ಯ.''

''ಆಗಲಿ ಅದನ್ನು ಹೇಗಾದರೂ ಮಾಡಿ ತರುತ್ತೇನೆ.''

''ಅದು ಎಲ್ಲಿದೆ ಅಂತ ಪತ್ತೆ ಮಾಡ್ಬೇಕು. ಆ ಜಾಗ ನಿಂಗೆ ಗೊತ್ತ?''

''ಅವನು... ಆ ಭೈರವ ಮಂದಾರ ಅನ್ನೋ ಕಾಲ್ ಗರ್ಲ್‌ಳನ್ನು ಪರ್ಮನೆಂಟ್ ಆಗಿ ಇಟ್ಟುಕೊಂಡಿದ್ದಾನೆ. ಹಣದ ವ್ಯವಹಾರ, ಬ್ಲಾಕ್‌ಮೇಲ್ ವ್ಯವಹಾರದ ದಾಖಲೆಗಳು ಅವಳ ಹತ್ತಿರ ಇರುತ್ತದೆ. ಅವನು ಎಲ್ಲೇ ಇದ್ದರೂ ರಾತ್ರಿ ವೇಳೆ ಅವಳ ಮನೆಗೆ ಬರುತ್ತಾನೆ. ಈ ರಹಸ್ಯ ನನಗೆ ಇತ್ತೀಚೆಗೆ ತಿಳಿಯಿತು.''

''ನೀನು ಏನು ಮಾಡ್ತೀಯೋ ಗೊತ್ತಿಲ್ಲ. ಆ ಭೈರವ ಸಾಯಬೇಕು. ಆ ಸಿ.ವಿ.ಆರ್. ವೀಡಿಯೋ ಕ್ಲಿಪ್ ನನಗೆ ಸಿಗಬೇಕು.''

ವಿನಯ್ ''ಆಗಲಿ... ಆಗಲಿ ಭವಾನಿ. ನಾವಿಬ್ಬರು ಸೇರಿ ಒಂದು ತಿಂಗಳಾಗಿದೆ. ನಾನು ಶೃಂಗಾರದಾಟದಲ್ಲಿ ವಿಜೃಂಭಿಸುವ ರೀತಿ ಎಷ್ಟೊಂದು ಪವರ್‌ಫುಲ್ ಆಗಿರುತ್ತದೆ ಅಂತ ನಿನಗೆ ಗೊತ್ತಿದೆ. ನಿನ್ನ ಬೆತ್ತಲೆ ಮೈ ಮುಟ್ಟಿ ಮುದ್ದಾಡದೆ ಹುಚ್ಚ ಆಗಿದ್ದೇನೆ.''

ಅವಳು ''ಏ ವಿನಯ್... ನನಗೂ ಸಹ ಆ ಸ್ಪೆಷಲ್ ಸುಖವನ್ನು ಆಗಾಗ ಪಡೆಯುತ್ತಿರಬೇಕು ಅಂತ ಆಸೆ ಇದೆ. ನನ್ನ ಗಂಡ ಅವನೊಬ್ಬ ದುರ್ಬಲ ಪುರುಷ. ಅವನಿಂದ ಯಾವತ್ತೂ ನನಗೆ ಐದು ಪರ್ಸೆಂಟ್ ಸುಖ ಸಿಕ್ಕಿಲ್ಲ. ನಾವಿಬ್ಬರು ಸೇರಲೇಬೇಕು. ಅದಕ್ಕೆ ಮೊದಲು ನೀನು ಆ ಭೈರವನನ್ನು ಮುಗಿಸಿ ಆ ದಾಖಲೆ ತಗೊಂಡು ಬಾ. ಆಮೇಲೆ ನಿನಗೆ ಐದು ಲಕ್ಷದ ಜೊತೆಗೆ ಸುಖ ಕೊಡ್ತೀನಿ.''

"ಆಗಲಿ ಡಿಯರ್. ಭೈರವನ ಜೊತೆ ಮಾತಾಡಿ ನನಗೆ ಮೆಸೇಜ್ ಕೊಡು.''

ಫೋನ್ ಲಿಂಕ್ ಕಟ್ ಆಗಿದೆ.

ಅವಳ ಮುಖದಲ್ಲಿ ನಗು ಮೂಡಿತು.

ಮೋಹಕ ನಗು ಅಲ್ಲ.

ಶೀತಲ ಕ್ರೌರ್ಯ ತುಂಬಿದೆ.

''ಭೈರವನ ನಂತರ ನನ್ನಿಂದ ಸುಖ ಸಿಗೋದು ಒಂದೇ ಒಂದು ಸಲ ಮಾತ್ರ. ನೀನು ಸೆಕ್ಸ್ ಆಟದಲ್ಲಿ ಪವರ್‌ಫುಲ್ ಆಗಿರೋದ್ರಿಂದ ಸುಖ ಅನುಭವಿಸಿದ ನಂತರ ಅವನನ್ನು ಸಹ ಬೇರೊಬ್ಬನ ಸಹಾಯದಿಂದ ಬೇರೆ ಲೋಕಕ್ಕೆ ಕಳಿಸುತ್ತೇನೆ'' ಎಂದು ಸ್ವಗತದಲ್ಲಿ ಎಂಬಂತೆ ಮಾತಾಡಿಕೊಂಡಳು.

●●●

ಮರುದಿವಸ ಬೆಳಿಗ್ಗೆ ಗಂಡ ರಂಗನ್ ''ಭವಾನಿ... ಇವತ್ತು ನಾನು ಊರಲ್ಲಿ ಇರೋಲ್ಲ. ಹೇಗಾದರೂ ಆಗಲಿ ಎರಡು ದಿನಗಳೊಳಗೆ ಆಗುವಷ್ಟು ಲಗೇಜ್ ಅನ್ನು ಪ್ಯಾಕ್ ಮಾಡು'' ಎಂದಾಗ ಅವಳಿಗೆ ತುಂಬಾ ಖುಷಿಯಾಯಿತು. ಇವತ್ತೇ ಭೈರವನನ್ನು ಮುಗಿಸಿ ವಿನಯ್‌ನನ್ನು ಕರೆಸಿಕೊಂಡು ಸೆಕ್ಸ್ ಎಂಜಾಯ್ ಮಾಡಬೇಕು. ಈ ಅವಕಾಶ ಬಿಡಬಾರದು ಎಂದುಕೊಂಡಳು.

ರಂಗನ್ ಹೊರಡುವ ಮೊದಲು ಹೆಂಡತಿಯ ತುಟಿಗಳನ್ನು ತೃಪ್ತಿ ಆಗುವತನಕ ಚಪ್ಪರಿಸಿದನು. ಅವಳಿಗೆ ಕೋಪ ಬಂದಿದೆ.

ಅಬ್ಬ... ತುಟಿಗಳು ಉರಿಯುತ್ತಿದೆ. ಈಗ ಅವಳು ಬೆಡ್‌ರೂಮಿಗೆ ಹೋಗಿ ಭೈರವನಿಗೆ ಫೋನ್ ಮಾಡಿದಳು.

ಪ್ರೋಗ್ರಾಂ ಫಿಕ್ಸ್ ಆಯಿತು!

ಅವಳು ವಿನಯ್‌ಗೆ ಮೆಸೇಜ್ ಪಾಸ್ ಮಾಡಿದಳು. ಭೈರವ ನನ್ನ ಮೈ ಮುಟ್ಟುವುದರಲ್ಲಿ ಅವನು ಸತ್ತಿರಬೇಕು.

ಇದನ್ನೇ ವಿನಯ್‌ಗೆ ಹೇಳಿದ್ದಳು.

☞14

13 ☜

ಅವನಿಗೆ ಅನುಮಾನ ಬರಬಾರದು ಎಂದು ಸಂಜೆ ಆರು ಗಂಟೆಯ ನಂತರ ಬೈರವ ಹೇಳಿದ್ದ ಜಾಗಕ್ಕೆ ಹೊರಟಳು. ಹೇಗಾದರೂ ಆಗಲಿ ಅಂತ ಐದು ಲಕ್ಷ ರೂಪಾಯಿ ಹಣ ತೆಗೆದುಕೊಂಡಿದ್ದಳು. ನಗರದ ಹೊರವಲಯದಲ್ಲಿರುವ ನಿರ್ಜನ ಪ್ರದೇಶದ ಮನೆಯೊಂದನ್ನು ಬೈರವ, ತನ್ನ ಕಾನೂನುಬಾಹಿರ ಕಾರ್ಯಗಳಿಗಾಗಿ ಉಪಯೋಗಿಸಿ ಕೊಳ್ಳುತ್ತಾನೆ.

ಅವಳು ಡ್ರೈವರ್‌ನ ಕರೆದುಕೊಂಡು ಹೋಗಲಿಲ್ಲ. ಅವಳೇ ಡ್ರೈವಿಂಗ್ ಮಾಡುತ್ತಿದ್ದಾಳೆ.

ಬೈರವ ನೆನಪಾದನು.

ಅವನು ರೌಡಿ ಅಂತ ಗೊತ್ತಿರಲಿಲ್ಲ. ಯಾವುದೋ ಒಂದು ಸನ್ನಿವೇಶದಲ್ಲಿ ಅವನನ್ನು ಮೀಟ್ ಮಾಡಿದ್ದಳು. ಅವನ ಬಲಾಢ್ಯ ಶರೀರ ಮತ್ತು ಮುಖದಲ್ಲಿ ವಿಶೇಷ ಕಳೆ ಮತ್ತು ಒರಟುತನಕ್ಕೆ ಬೆರಗಾಗಿದ್ದಳು. ಅವಳಿಗೆ ಇಂತಹ ಒರಟು ಗಂಡಸಿನ ಸುಖದ ಸಂಗ ಬೇಕಾಗಿತ್ತು.

ಅವನನ್ನು ಸಂಪರ್ಕಿಸಿ ರಹಸ್ಯವಾಗಿ ಅವನಿಂದ ಸುಖ ಪಡೆದಳು. ಬಲು ಅದ್ಭುತವಾಗಿ, ರಸಿಕ, ಶೃಂಗಾರತೆಯಿಂದ ವಿಜೃಂಭಿಸುತ್ತಿದ್ದರೆ, ಸುಖದ ಅಮಲಿನಿಂದ ಪರಾಕಾಷ್ಠೆಯಲ್ಲಿ ನಲುಗುತ್ತಿದ್ದಳು.

ಆಗ ಗಂಡ ನೆನಪಾಗಿದ್ದನು. ಅವಳಿಗೆ ತಿಳಿದಿತ್ತು. ಏನು ಗೊತ್ತೆ?

ಗಂಡ ರಂಗನ್‌ಗೆ ತುಂಬಾ ವರ್ಷಗಳಿಂದ ಸ್ಟಾರ್ ಲೆವೆಲ್ ಚೆಲುವೆಯರ ಜೊತೆ ಸೆಕ್ಸ್ ಲಿಂಕ್ ಇತ್ತು. ಹಾಗಾಗಿ ಇವಳನ್ನು ಮದುವೆ ಆಗುವ ಹೊತ್ತಿಗೆ ಪುರುಷತ್ವದ ಪವರ್ ತುಂಬಾ ಕಡಿಮೆ ಆಗಿತ್ತು. ಅವನಲ್ಲಿ ಉಳಿದದ್ದು ಕೇವಲ ಚಪಲ, ವಿಕೃತ ಆಸೆ, ಬಯಕೆಗಳು ಮಾತ್ರ.

ಹಾಗಾಗಿ ಭವಾನಿ ತನ್ನನ್ನು ತೃಪ್ತಿಪಡಿಸಬಲ್ಲ ಗಂಡಸರನ್ನು ಹುಡುಕಿದ್ದಳು.

ಮೊದಲ ಗಂಡು ಬೈರವ!

ಗಂಡನಲ್ಲದ ಗಂಡಸಿನ ಜೊತೆ ಪೂರ್ಣ ತೃಪ್ತಿ ಪಡೆದಿದ್ದಳು. ನಂತರ ಏನಾಯಿತು? ಅವನಿಗೆ ಕಾಲ್‌ಗರ್ಲ್ ಜೊತೆ ನಿರಂತರವಾಗಿ ಸಂಬಂಧ ಇದೆ ಅಂತ ತಿಳಿಯಿತು. ಏಕೋ ಏನೋ ಅವನ ಬಗ್ಗೆ ಆಸಕ್ತಿ ಕಡಿಮೆ ಆಯಿತು. ನಂತರ ಅವನೊಬ್ಬ ರೌಡಿ ಅಂತ ಗೊತ್ತಾಯಿತು. ಹಾಗಾಗಿ ಅವಳು ಅವನಿಂದ ದೂರಾದಳು. ಆದರೆ ಈ ಶ್ರೀಮಂತ ಸುಂದರಿಯನ್ನು ಬ್ಲಾಕ್‌ಮೇಲ್ ಮಾಡಿ ಹಣ ವಸೂಲಿ ಮಾಡಲು ಆಟ ಆಡಿದ್ದನು. ಮೊದಲ ಸಲ ಐದು ಲಕ್ಷ ರೂಪಾಯಿ ಕೊಟ್ಟಿದ್ದಳು.

ಆದರೆ ಅವನ ಜೊತೆ ಸೇರಲಿಲ್ಲ. ಗಂಡನಿಂದ ಸುಖ ಸಿಗುತ್ತಿರಲಿಲ್ಲ. ಹಾಗಾಗಿ ಅವಳು ಮತ್ತೊಬ್ಬ ಬಲಿಷ್ಠ ಶರೀರದ, ಆಕರ್ಷಕ ರೂಪಿನ ಯುವಕನನ್ನು ಬಯಸಿದ್ದಳು.

ಅವನೇ ವಿನಯ್...!

ವಿನಯ್ ಜೊತೆ ಎರಡು ಸಲ ಸೇರಿ ವಿಶಿಷ್ಟವಾದ ಸುಖದ ಅನುಭವ ಮಾಡಿಕೊಂಡಿದ್ದಳು.

ಬೈರವ ಶತ ದಡ್ಡ.

ವಿನಯ್ ಹೀರೋ...

ಸೆಕ್ಸ್‌ನಲ್ಲಿ ಸಹ ಪವರ್‌ಫುಲ್.

ಇವಳು ಆಗಾಗ ಕೊಡುತ್ತಿದ್ದ ಹಣ ಮತ್ತು ರತಿಯಾಗಿ ಕಾಮದಾಟದಲ್ಲಿ ಸಹಕರಿಸುತ್ತಿದ್ದ ರೀತಿ ಬಲು ಅದ್ಭುತವಾಗಿತ್ತು. ಹಾಗಾಗಿ ಅವಳ ಆದೇಶದಂತೆ ಬೈರವನನ್ನು ಕೊಲೆ ಮಾಡಲು ಒಪ್ಪಿಕೊಂಡಿದ್ದನು ಮತ್ತು ಪ್ರಯತ್ನ ಮಾಡಿ, ಸೆಕ್ಸ್ ಆಟಗಳ ಒಂದು ವೀಡಿಯೋ ಕ್ಲಿಪ್ ಅವನಿಂದ ಅಪಹರಿಸಿಕೊಂಡು ತಂದಿದ್ದನು.

ಆದರೆ ಬೈರವ ಸತ್ತಿರಲಿಲ್ಲ.

ಅವನ ಹತ್ತಿರ ಸಿ.ಎಸ್.ಆರ್. ಎಂಬ ವೀಡಿಯೋ ಕ್ಲಿಪ್ ಇದೆ. ಅದರ ಮೂಲಕ ಬ್ಲಾಕ್‌ಮೇಲ್ ಮಾಡುತ್ತಿದ್ದಾನೆ.

ಅವನನ್ನು ಕೊಲೆ ಮಾಡಬೇಕು!

ಪವರ್‌ಫುಲ್ ರೌಡಿನ ಈ ಸಲ ಇಂಟೆಲಿಜೆಂಟ್ ಆಗಿ ಮರ್ಡರ್ ಪ್ಲಾನ್ ಮಾಡಿ ಸಾಯಿಸಬೇಕು. ಇದರಿಂದ ಆಗುವ ಲಾಭ ಏನು?

ಭವಾನಿಯಂತ ಶ್ರೀಮಂತ ಚೆಲುವೆ ಸದಾ ನನ್ನವಳಾಗಿರುತ್ತಾಳೆ.

ಲಕ್ಷಗಳ ಹಣ ಸಿಗುತ್ತದೆ.

ರತಿಯಾಗಿ ಸುಖ ಕೊಡುತ್ತಾಳೆ.

ಬೈರವ ಸಾಯಲೇಬೇಕು.

●●●

ಕಾರಲ್ಲಿ ಭವಾನಿ ಬೈರವ ಹೇಳಿದ್ದ ಮತ್ತು ಅವನ ವ್ಯವಹಾರಗಳ ಕಾರ್ಯಾಚರಣೆ ಆಗಿರುವ ಮನೆಗೆ ಹೋಗುತ್ತಿದ್ದಾಳೆ.

ವಿನಯ್‌ಗೆ ಫೋನ್ ಮಾಡಿದಳು.

ಅವನು ಮಾತಾಡಿದನು.

''ನಿನ್ನ ಕೆಲಸ ಏನಾಯಿತು?''

''ಬೈರವ ಕೊಲೆ ಆಗಿದೆ.''

ಅವಳು ಪುಳುಕಗೊಂಡಳು. ''ಕಳೆದ ಸಲದಂತೆ ಅರ್ಧ ಜೀವ ಮಾಡಿಲ್ಲ ತಾನೆ?''

''ಹರಿತವಾದ ಚಾಕುವಿನಿಂದ ಕೊಲೆ ಮಾಡಿರೋದ್ರಿಂದ ಸಾವು ಖಚಿತವಾಗಿದೆ.''

''ಸಿ.ಎಸ್.ಆರ್. ವೀಡಿಯೋ ಕ್ಲಿಪ್ ತೆಗೆದುಕೊಂಡಿದ್ದೀಯ ತಾನೆ?''

ಕೂಡಲೇ ಉತ್ತರ ಬರಲಿಲ್ಲ.

''ಏ ವಿನಯ್... ಯಾಕೆ... ಯಾಕೆ ಮಾತಾಡುತ್ತಿಲ್ಲ?''

''ಅದು... ಅದು... ಅದನ್ನ ಅವನು ತಂದಿರಲಿಲ್ಲ.''

ಅವಳು ಬೆಚ್ಚಿಬಿದ್ದಳು.

''ಏನು... ಏನಂದೆ...''

''ಅವನು ಆಗಾಗ ಬ್ಲಾಕ್‌ಮೇಲ್ ಮಾಡಲು ಅದನ್ನ ತಂದಿರಲಿಲ್ಲ.''

ಭವಾನಿ ಗಾಬರಿಯಿಂದ ''ಮೈಗಾಡ್... ಅವನನ್ನು ಕೊಲೆ ಮಾಡಿದರೂ ಪ್ರಯೋಜನ ಆಗಿಲ್ಲ'' ಎಂದಳು.

''ಹೆದರುವ ಅಗತ್ಯ ಇಲ್ಲ. ಅವನ ಎಲ್ಲಾ ವ್ಯವಹಾರಗಳ ರಹಸ್ಯ ದಾಖಲೆಗಳು ಅವನ ಪರ್ಮನೆಂಟ್ ಕಾಲ್‌ಗರ್ಲ್ ಹತ್ತಿರ ಇರುತ್ತೆ. ಅವಳನ್ನ ಯಾಮಾರಿಸಿ ಎತ್ತಿಕೊಂಡು ಬರ್ತೀನಿ.''

''ಅಂತೂ ನನಗೆ ಟೆನ್,ನ್ ತಪ್ಪೋಲ್ಲ. ಛೇ... ಛೇ...''

ವಿನಯ್ ಧೈರ್ಯ ತುಂಬಿದನು.

ಅವಳು ''ಓಕೆ. ಕೊಲೆ ಆಗಿರುವ ಸ್ಥಳದಲ್ಲಿ ನಿನ್ನ ಬಗ್ಗೆ ಸುಳಿವು ನೀಡಬಲ್ಲ ಸಾಕ್ಷಿ, ಆಧಾರ ಬಿಟ್ಟಿಲ್ಲ ತಾನೆ?''

ವಿನಯ್ ''ಇಲ್ಲ... ಇಲ್ಲ... ನಾನು ತುಂಬಾ ಎಚ್ಚರಿಕೆಯಿಂದ ಪ್ಲಾನ್ ಮಾಡಿ ಮರ್ಡರ್ ಮಾಡಿದ್ದೀನಿ'' ಎಂದನು.

''ಆರ್ ಯೂ ಶ್ಯೂರ್.''

''ಹಂಡ್ರೆಡ್ ಪರ್ಸೆಂಟ್.''

''ಈಗ ಮುಖ್ಯವಾದ ವಿಚಾರ ಹೇಳ್ಬೇಕು.''

''ಹೇಳು ಭವಾನಿ.''

''ನೀನು ಇವತ್ತು ರಾತ್ರಿ ನನ್ನ ಮನೆಗೆ ಬಾ. ರಾತ್ರಿ ಪೂರ್ತಿ ನಾವಿಬ್ಬರು ಸುಖವಾಗಿರಬೇಕು.''

ಅವನು ಗಾಬರಿಯಿಂದ ''ನಿನ್ನ ಗಂಡ ಮತ್ತು ಮನೆಯವರು ಇರುತ್ತಾರಲ್ಲ'' ಎಂದಾಗ ಭವಾನಿ ''ಗಂಡ ಊರಲ್ಲಿ ಇಲ್ಲ. ಮಾವ-ಅತ್ತೆ ಮತ್ತು ಬೇರೆ ಇಬ್ಬರು ಸಂಬಂಧಿಕರಿಗೆ ಎಚ್ಚರ ಆಗೋಲ್ಲ.''

''ಅಂದರೆ... ಅಂದರೆ...''

''ಸೆಕ್ಯುರಿಟಿ ಗಾರ್ಡ್ ಮತ್ತು ಮನೆಯವರಿಗೆ ರಾತ್ರಿ ಊಟದಲ್ಲಿ ಸಖತ್ ಆಗಿ ನಿದ್ದೆ ಬರುವ ಪುಡಿ ಬೆರೆಸುತ್ತೇನೆ.''

''ಆದರೆ ಸಿ.ಸಿ. ಕ್ಯಾಮರ ಇರುತ್ತಲ್ಲ.''

''ಸ್ವಿಚ್ ಆಫ್ ಮಾಡಿರುತ್ತೀನಿ.''

''ಹಾಗಾದರೆ ಓ.ಕೆ. ಈ ರಾತ್ರಿ ನಾವಿಬ್ಬರು ರತಿ-ಮನ್ಮಥರಾಗಿ ಸುಖ ಅನುಭವಿಸೋಣ. ಎಷ್ಟು ಗಂಟೆಗೆ ಬರಲಿ?''

''ರಾತ್ರಿ ಹತ್ತು ಗಂಟೆಗೆ.''

''ಓಕೆ ಭವಾನಿ ಡಿಯರ್.''

''ಏ ನೆನಪಿರಲಿ... ಬೈರವನ ಸಿ.ಎಸ್.ಆರ್. ವೀಡಿಯೋ ಕ್ಲಿಪ್ ತಂದು ಕೊಡಬೇಕು.''

''ನಾಳೆಯಿಂದ ಆಪರೇಷನ್ ವೀಡಿಯೋ ಕ್ಲಿಪ್ ಪ್ರಾರಂಭ ಮಾಡ್ತೀನಿ.''

''ನಿನ್ನ ಮೇಲೆ ನಂಬಿಕೆ ಇದೆ. ಏ ರಾತ್ರಿ ಇಲ್ಲಿಗೆ ಬರಬೇಕಾದರೆ, ನಾನು ಕೊಡಿಸಿರುವ ಲೈಟ್ ರೋಸ್ ಕಲರ್ ಸಫಾರಿ ಡ್ರೆಸ್ ಹಾಕ್ಕೊಂಡು ಟ್ರಿಮ್ ಆಗಿ ಬಾ.''

''ಆಗಲಿ ಡಿಯರ್.''

ಫೋನ್ ಲಿಂಕ್ ಕಟ್ ಮಾಡಿದ ನಂತರ ಕಾರನ್ನು ರಿವರ್ಸ್ ತಗೊಂಡು ಮನೆಯ ಕಡೆ ಪ್ರಯಾಣ ಬೆಳೆಸಿದಳು. ಬೈರವ ಕೊಲೆ ಆಗಿರುವ ಜಾಗಕ್ಕೆ ಹೋಗಬಾರದು. ಸ್ವಲ್ಪ ಸುಳಿವು ಸಿಕ್ಕಿದರೂ ಕೊಲೆಯ ಆರೋಪ ನನ್ನ ಸುತ್ತಾ ಸುತ್ತಿಕೊಳ್ಳುತ್ತೆ.''

ಮನೆಗೆ ಬಂದ ಕೂಡಲೇ ಫ್ರೆಶ್ ಆದಳು. ಈಗ ಟೆನ್ಷನ್ ಕಡಿಮೆ ಆಗಿದೆ. ಮಾವ-ಅತ್ತೆ ಮತ್ತು ಮನೆಯಲ್ಲಿರುವ ಸಂಬಂಧಿಕರ ಜೊತೆ ನಗು, ನಗುತ್ತಾ ಮಾತಾಡಿದಳು. ಪ್ರತಿನಿತ್ಯ ಅಡುಗೆ ಮಾಡುವ ರತ್ನಮ್ಮ ಎಂಬ ಹೆಂಗಸನ್ನು ಕರೆದು ಅವಳಿಗೆ ಸಾವಿರ ರೂಪಾಯಿ ಕೊಟ್ಟು, ಆಹಾರ ಪದಾರ್ಥಗಳಲ್ಲಿ ಏನೇನು ಬೆರೆಸಬೇಕು ಎಂದು ಹೇಳಿದಳು.

●●●

ಗಂಡನಿಗೆ ಆಗಾಗ ಫೋನ್ ಮಾಡಿ ತುಂಬಾ ಉತ್ಸಾಹದಿಂದ ಮಾತಾಡಿದ್ದಾಳೆ. ಅವನು ಎರಡು ದಿನಗಳ ಕಾಲ ಊರಿಗೆ ಬರೋಲ್ಲ ಎಂಬುದನ್ನು ಬುದ್ಧಿವಂತಿಕೆಯಿಂದ ಮಾತಾಡಿ ಪರೋಕ್ಷ ರೀತಿಯಲ್ಲಿ ತಿಳಿದುಕೊಂಡಿದ್ದಾಳೆ.

●●●

ರಾತ್ರಿ ಒಂಭತ್ತೂವರೆ.

ಮನೆಯವರು ರುಚಿಕರವಾದ ತಿನಿಸುಗಳ ಊಟ ಮಾಡಿದ್ದಾರೆ. ವಿಶೇಷವಾಗಿ ಗಸಗಸೆ ಪಾಯಸದಲ್ಲಿ ಅಧಿಕ ಪ್ರಮಾಣದಲ್ಲಿ ಮತ್ತಿನ ಪುಡಿ ಬೆರೆಸಲಾಗಿತ್ತು.

ಸೆಕ್ಯುರಿಟಿಯವನಿಗೆ ನಿತ್ಯದಂತೆ ಊಟದ ಕ್ಯಾರಿಯರ್ ಕಳಿಸಲಾಯಿತು. ಅವನು ಒಂದು ರೌಂಡ್ ಬಂಗಲೆಯ ಸುತ್ತಲು ತಿರುಗಿದ ನಂತರ ತನ್ನ ಚೇಂಬರ್‌ಗೆ ಬಂದು ಊಟ ಮಾಡಿದನು. ಕೇವಲ ಹತ್ತು ನಿಮಿಷಗಳಲ್ಲಿ ಗಾಢವಾದ ನಿದ್ದೆಗೆ ಒಳಗಾದನು.

ಭವಾನಿ ಸಿ.ಸಿ. ಕ್ಯಾಮರಾಗಳ ಮೇಯಿನ್ ಕಂಟ್ರೋಲಿಂಗ್ ಸ್ವಿಚ್ ಆಫ್ ಮಾಡಿದ್ದಳು. ನಂತರ ಬಂಗಲೆಯಿಂದ ಹೊರಗೆ ಬಂದು, ಸೆಕ್ಯುರಿಟಿಯುವನು ನಿದ್ದೆ ಮಾಡುತ್ತಿರುವುದನ್ನು ನೋಡಿದ ನಂತರ ವಿನಯ್‌ಗೆ ಫೋನ್ ಮಾಡಿದಳು.

ಫೋನ್ ರಿಂಗ್ ಆಗುತ್ತಿದೆ.

ನಾಲ್ಕು ಸಲ ಟ್ರೈ ಮಾಡಿದಳು.

ಫೋನ್ ಅಟೆಂಡ್ ಮಾಡುತ್ತಿಲ್ಲ.

ಅವಳಿಗೆ ವಿಪರೀತ ಕೋಪ ಬಂದಿದೆ. ಅವನಿಂದ ಸುಖ ಪಡೆಯುುವ ಹಂಬಲದಲ್ಲಿ ಎಲ್ಲಾ ವ್ಯವಸ್ಥೆ ಮಾಡಿದ್ದಳು.

ಅವನ್ಯಾಕೆ ಇನ್ನೂ ಬಂದಿಲ್ಲ?

ಫೋನ್ ಯಾಕೆ ಅಟೆಂಡ್ ಮಾಡುತ್ತಿಲ್ಲ?

ಇದೆಲ್ಲಾ ಏನು?

ರಾತ್ರಿ ಹನ್ನೊಂದೂವರೆ ಆಯಿತು.

ಈಗವಳಿಗೆ ತುಂಬಾ ನಿರಾಸೆಯಾಗಿದೆ. ವಿನಯ್ ಮೇಲೆ ಕೋಪ ಬಂದಿದೆ.

ಸಿ.ಎಸ್.ಆರ್. ವೀಡಿಯೋ ಕ್ಲಿಪ್ ತರುವತನಕ ಅವನ ಸಹಾಯ ಬೇಕು. ಆಮೇಲೆ ಒಂದೇ ಒಂದು ಸಲ ಅವನಿಂದ ಸುಖವನ್ನು ಅನುಭವಿಸಿ ಕೊಲೆ ಮಾಡಿಸಬೇಕು.

ಅದಕ್ಕೆ ಮತ್ತೊಬ್ಬ ಬೇಕು!

ನಿಜ... ನಾನು ಹೇಳಿದಂತೆ ವಿನಯ್‌ನ ಕೊಲೆ ಮಾಡುವ ಮತ್ತು ನನಗೆ ಪೂರ್ಣ ಪ್ರಮಾಣದಲ್ಲಿ ಸುಖ ಕೊಡುವ ಯುವಕ ಬೇಕು.

ಆದರೂ ಸಹ ಪರ್ಮನೆಂಟ್ ಅಲ್ಲ. ಬೈರವ, ವಿನಯ್ ರೀತಿ ಇವನೂ ಸಾಯುತ್ತಾನೆ. ಈ ಆಲೋಚನೆಗಳಲ್ಲಿ ನಿಧಾನವಾಗಿ ನಿದ್ದೆ ಬಂದಿತು.

●●●

ಬೆಳಗಿನ ಎಂಟು ಗಂಟೆ.

ಶಾಕಿಂಗ್ ನ್ಯೂಸ್ ಪ್ರಸಾರ ಆಗುತ್ತಿದೆ. ಬೈರವ ಮತ್ತು ವಿನಯ್ ಬೇರೆ ಬೇರೆ ಸ್ಥಳಗಳಲ್ಲಿ ಕೊಲೆಯಾಗಿದ್ದಾರೆ.

ಭವಾನಿ ತತ್ತರಿಸುತ್ತಿದ್ದಾಳೆ.

ದಿಢೀರ್ ಅಂತ ಗಂಡ ಬಂದನು. ಅವಳ ಮುಂದೆ ಸಿ.ಎಸ್.ಆರ್. ವೀಡಿಯೋ ಕ್ಲಿಪ್ ಅನ್ನು ಹಿಡಿದನು.

ಅವಳು ನಡುಗಿಬಿಟ್ಟಳು.

ಗಂಡ ''ನನ್ನಿಂದ ಸುಖದ ತೃಪ್ತಿ ಸಿಗುತ್ತಿಲ್ಲ ಅಂತ ಬೈರವ, ವಿನಯ್‌ನನ್ನು ಬಲೆಗೆ ಹಾಕಿಕೊಂಡೆ. ಬೈರವನನ್ನು ವಿನಯ್ ಕೊಲೆ ಮಾಡಲಿಲ್ಲ. ನಾನು ಮಾಡಿಸಿದೆ. ನಿಮ್ಮಿಬ್ಬರ ಸಂಬಂಧದ ವೀಡಿಯೋ ಕ್ಲಿಪ್ ತರಿಸಿಕೊಂಡೆ. ರಹಸ್ಯ ಕಾಪಾಡಿದ್ದೀನಿ. ನಿನ್ನ ಜೊತೆ ಸಂಸಾರ ಮಾಡಲಾರೆ. ನೀನಾಗಿಯೇ ಡೈವೋರ್ಸ್‌ಗೆ ಅಪ್ಲೈ ಮಾಡು. ಇಲ್ಲದಿದ್ದರೆ ಅನೈತಿಕ ಸಂಬಂಧದ ರಹಸ್ಯ ಬಹಿರಂಗಪಡಿಸಿ ಅದರ ಆಧಾರದ ಮೇಲೆ ಡೈವೋರ್ಸ್ ಪಡೆಯುತ್ತೇನೆ.

ಅವಳು ಭಯಭ್ರಾಂತಳಾಗಿದ್ದಾಳೆ!

ಇಡೀ ದೇಹ ಬೆವರುತ್ತಿದೆ. ☯

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಆಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

ನಮ್ಮ ವಿಳಾಸ :

8884452699


policenewsreporter@gmail.com

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ,
ಬಸವೇಶ್ವರನಗರ, ಬೆಂಗಳೂರು-560 079

080-23588510

# ಅದೊಂದು ರಾತ್ರಿ ರಜನಿಕಾಂತ್, ದರ್ಶನ್, ಯಶ್ ಜೀವನದ ದಿಕ್ಕನ್ನೇ ಬದಲಿಸಿತ್ತು!

ಜೀವನದಲ್ಲಿ ಯಶಸ್ಸು ಅಷ್ಟು ಸುಲಭವಾಗಿ ಸಿಗುವುದಿಲ್ಲ, ಸತತ ಪರಿಶ್ರಮದ ಹೊರತು ಯಾವುದನ್ನು ಸಾಧಿಸಲು ಸಾಧ್ಯವಿಲ್ಲ, ಅದೃಷ್ಟ ಕೂಡ ಕೈ ಹಿಡಿದರೆ ನಿಮ್ಮನ್ನು ತಡೆಯೋಕ್ಕಾಗಲ್ಲ, ರಾತ್ರೋ ರಾತ್ರಿ ಫೇಮಸ್ ಆದವರು ಇದ್ದಾರೆ. ಅದೊಂದು ದಿನ, ಅದೊಂದು ಕ್ಷಣ, ಅದೊಂದು ರಾತ್ರಿ ತೆಗೆದುಕೊಂಡು ನಿರ್ಧಾರದಿಂದ ಎಷ್ಟೋ ಜನರ ಜೀವನ ಬದಲಾಗಿರುತ್ತದೆ.



ಎಲ್ಲಾ ಮುಗೀತು ಇನ್ನು ಸಾವೇ ಗತಿ ಎಂದುಕೊಂಡವರು ಇಂದು ನಮ್ಮ ಮುಂದೆ ಜಗವೇ ಮೆಚ್ಚುವ ನಾಯಕರಾಗಿದ್ದಾರೆ. ಶಿವಾಜಿರಾವ್ ಗಾಯಕ್ವಾಡ್ ಒಮ್ಮೆ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ನಿರ್ಧರಿಸಿಬಿಟ್ಟಿದ್ದರಂತೆ. ಹೀಗೆ ಹೇಳುತ್ತಾ ಹೋದರೆ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಅಚಲ ಧೈರ್ಯ, ಸಾಧಿಸುವ ಛಲ ಇದ್ದರೆ ಗುರು ಅಥವಾ ದೈವ ಜೊತೆಯಾದರೆ ಯಶಸ್ಸು ನಮ್ಮನ್ನು ಅರಸಿಬರುವಂತಾಗುತ್ತದೆ.

ರಜನಿಕಾಂತ್, ದರ್ಶನ್, ಯಶ್ ಮೂವರು ಇಂದು ನಮ್ಮ ಮುಂದೆ ಸ್ಟಾರ್ ನಟರಾಗಿ ನಿಂತಿದ್ದಾರೆ. ಆದರೆ ವರ್ಷಗಳ ಹಿಂದೆ ಅವರು ಹೀಗಿರಲಿಲ್ಲ, ಈ ಹೆಸರು, ಹಣ, ಅಭಿಮಾನ ಯಾವುದು ಇಲ್ಲದೇ ನಮ್ಮ ನಿಮ್ಮಂತೆ ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದರು. ಚಿತ್ರರಂಗಕ್ಕೆ ಬಂದಾಗಲೂ ಸಾಕಷ್ಟು ನೋವು, ಅವಮಾನ ಎದುರಿಸಿದ್ದರು. ಅದನ್ನೆಲ್ಲಾ ಮೆಟ್ಟಿನಿಂತರು. ಸಿನಿಮಾ ಎನ್ನುವ ಸಾಗರದಲ್ಲಿ ಈಸಬೇಕು ಇದ್ದು ಜಯಿಸಬೇಕು ಎಂದು ಹಠಕ್ಕೆ ಬಿದ್ದರು. ಕೊನೆಗೂ ಸಾಧಿಸಿಬಿಟ್ಟರು. ಅವರು ಹುಡುಕಿಕೊಂಡು ಹೋಗಿದ್ದು ಸಿಗುವಂತಾಯಿತು. ಕಂಡ ಕನಸು ನನಸಾಗಿತ್ತು.

### ರಜನಿಕಾಂತ್

ಬಿಟಿಎಸ್ ಬಸ್ ಕಂಡೆಕ್ಟರ್ ಶಿವಾಜಿ ಇವತ್ತು ಸೂಪರ್ ಸ್ಟಾರ್ ಆಗಿದ್ದಾರೆ. ದೇಶ ವಿದೇಶಗಳಲ್ಲಿ ಕೂಡ ಅಭಿಮಾನಿಗಳನ್ನು ಸಂಪಾದಿಸಿಕೊಂಡಿದ್ದಾರೆ. ರಜನಿಕಾಂತ್ ಅವರಂತೆ ಇದಕ್ಕೂ ಹಿಂದೆ ಅಥವಾ ಮುಂದೆ ಕ್ರೇಜ್ ಸೃಷ್ಟಿಸಿಕೊಳ್ಳುವುದು ಯಾರೆಗೇ ಆದರೂ ಕಷ್ಟ ಎನ್ನಬಹುದು. 150ಕ್ಕೂ ಅಧಿಕ ಸಿನಿಮಾಗಳಲ್ಲಿ ತರಹೇವಾರಿ ಪಾತ್ರಗಳಲ್ಲಿ ನಟಿಸಿ ರಜನಿಕಾಂತ್ ಸಕ್ಸಸ್ ಕಂಡಿದ್ದಾರೆ.

ಅದ್ಬುತ ನಟ ಅಲ್ಲದೇ ಇದ್ದರೂ ತಮ್ಮ ಸ್ಟೈಲ್, ಮ್ಯಾನರಿಸಂ, ಬಾಡಿಲಾಂಗ್ವೇಜ್‌ನಿಂದ ರಜನಿಕಾಂತ್ ಸೂಪರ್ ಸ್ಟಾರ್ ಆಗಿಬಿಟ್ಟರು. ವಯಸ್ಸು 70 ದಾಟಿದರೂ ತಲೈವಾ ಕ್ರೇಜ್ ಮಾತ್ರ ಕಮ್ಮಿ ಆಗಲಿಲ್ಲ, ಬೆಂಗಳೂರಿನಲ್ಲಿ ಬಸ್ ಕಂಡೆಕ್ಟರ್ ಆಗಿದ್ದುಕೊಂಡು ನಾಟಕಗಳಲ್ಲಿ ನಟಿಸುತ್ತಿದ್ದ ಶಿವಾಜಿ ಬಳಿಕ ಚೆನ್ನೈ ಫಿಲ್ಮ್ ಇನ್‌ಸ್ಟಿಟ್ಯೂಟ್ ಸೇರಿ ನಟನೆಯನ್ನು ಮತ್ತಷ್ಟು ಸಾಣೆ ಹಿಡಿದುಕೊಂಡಿದ್ದರು. ಬಳಿಕ ಕನ್ನಡದಲ್ಲಿ ಸರಿಯಾಗಿ ಅವಕಾಶಗಳು ಸಿಗದೇ ಇದ್ದಾಗ ತಮಿಳು ಚಿತ್ರರಂಗದಲ್ಲಿ ಗುರ್ತಿಸಿಕೊಂಡಿದ್ದರು.

ತಮಿಳು ಚಿತ್ರಗಳಲ್ಲೇ ರಜನಿಕಾಂತ್ ಹೆಚ್ಚು ನಟಿಸಿರೋದು. ಇವತ್ತು ಸೂಪರ್ ಸ್ಟಾರ್ ಆಗಿರುವ ಶಿವಾಜಿ ಅಂದು ಸಾಯುವ ನಿರ್ಧಾರ ಮಾಡಿದ್ದರು. ಆದರೆ ಅದೊಂದು ರಾತ್ರಿ ಅವರ ಜೀವನದಲ್ಲಿ ಎಲ್ಲವನ್ನು ಬದಲಿಸಿಬಿಟ್ಟಿತ್ತು. ಆ ಬಗ್ಗೆ ಸ್ವತಃ ರಜನಿಕಾಂತ್ ಒಮ್ಮೆ ಹೇಳಿಕೊಂಡಿದ್ದರು. ಚಿಕ್ಕಂದಿನಿಂದ ನನಗೆ ಬಹಳ ಧೈರ್ಯ, ಅದು ಪೂರ್ವಜನ್ಮದ ಪುಣ್ಯದ ಫಲ ಇರಬಹುದು. ಯಾವುದೇ ನಿರ್ಧಾರ ತೆಗೆದುಕೊಳ್ಳಲು ಹಿಂದೇಟು ಹಾಕುವುದಿಲ್ಲ, ಆದರೆ ಒಮ್ಮೆ ಮಾತ್ರ ಜೀವನದ ಬಗ್ಗೆ ಭಯ ಬಿದ್ದು ಆತ್ಮಹತ್ಯೆಗೆ ಮುಂದಾಗಿದ್ದೆ. ಬಳಿಕ ಬೇಡ ಎಂದು ನಿರ್ಧರಿಸಿ ಸುಮ್ಮನಾದೆ ಎಂದು ರಜನಿಕಾಂತ್ ಆ ಘಟನೆ ನೆನಪಿಸಿಕೊಂಡಿದ್ದರು.

ನಾನು ಒಂದು ಬೆಟ್ಟದ ಅಡಿ ಕುಳಿತ್ತಿದ್ದೆ, ಅಲ್ಲಿ ಒಬ್ಬರು ಸ್ವಾಮಿಯ ಚಿತ್ರ ಹಾಕಿದ್ದರು. ಹತ್ತಿರ ಹೋಗಿ ನೋಡಿದೆ. ಯಾರೋ ಪೂಜೆ ಮಾಡಿದ್ದರು. ಆ ಸ್ವಾಮೀಜಿ ಯಾರು ಎನ್ನುವುದು ಗೊತ್ತಿಲ್ಲ, ಅದೇನೋ ಗೊತ್ತಿಲ್ಲ, ಅವರನ್ನು ನೋಡುತ್ತಿದ್ದಂತೆ ನನ್ನ ಮನಸ್ಸಿನಲ್ಲಿ ಏನೋ ಬದಲಾವಣೆ ಆಯಿತು. ಆ ನಿರ್ಧಾರದಿಂದ ಹಿಂದೆ ಸರಿದು ಮನೆಗೆ ಹೋಗಿ ಮಲಗಿ ನಿದ್ದೆ ಮಾಡಿಬಿಟ್ಟೆ ಎಂದು ರಜನಿಕಾಂತ್ ಅಂದು ರಾತ್ರಿ ನಡೆದ ಘಟನೆಯನ್ನು ಬಿಚ್ಚಿಟ್ಟಿದ್ದರು.



ನಿದ್ದೆ ಮಾಡುವಾಗ ನನಗೆ ಒಂದು ಕನಸು ಬಿತ್ತು. ಒಬ್ಬರು ಸ್ವಾಮಿಜಿ. ಬಿಳಿ ದಾಡಿ, ಕಾವಿ ಬಟ್ಟೆ ಧರಿಸಿದ್ದರು. ಅವರು ಮುಂದೆ ಪ್ರವಾಹದ ರೀತಿ ದೊಡ್ಡ ನದಿ ಹರಿಯುತ್ತಿತ್ತು. ಆ ದಡದಲ್ಲಿ ಸ್ವಾಮಿಜಿ. ಈ ದಡದಲ್ಲಿ ನಾನು. ಅವರು ನನ್ನನ್ನು ಕರೆಯುತ್ತಿದ್ದಾರೆ. ನಾನು ಈಜದೇ ಅವರ ಬಳಿ ಓಡಿ ಹೋದೆ. ತನ್ನ ಹಿಂದೆ ಬರೋಕೆ ಹೇಳಿ ಹೊರಟರು, ನಾನು ಹೊರಟೆ. ಕೂಡಲೇ ಎಚ್ಚರ ಆಯಿತು. ನಾನು ಫೋಟೊದಲ್ಲಿ ನೋಡಿದ ಸ್ವಾಮಿಯೇ ಕನಸಿನಲ್ಲಿ ಬಂದಿದ್ದರು. ಅವರು ಯಾರು ಎಂದು ಕೇಳಿದಾಗ ರಾಘವೇಂದ್ರ ಸ್ವಾಮಿ ಎಂದರು.

ಮಾತು ಮುಂದುವರೆಸಿದ ರಜನಿಕಾಂತ್, ನಾನು ಬಳಿಕ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಹೋದೆ. ನಾನು ದೊಡ್ಡ ಶ್ರೀಮಂತನಾಗಬೇಕು ಎಂದು ರಾಘವೇಂದ್ರ ಸ್ವಾಮಿ ಮಠದಲ್ಲಿ ಬೇಡಿಕೊಂಡೆ. ಆ ಬಳಿಕ ನಾನು ಕಂಡೆಕ್ಟರ್ ಆಗಿದ್ದು ಬಳಿಕ ಫಿಲ್ಮ್ ಇನ್‌ಸ್ಟಿಟ್ಯೂಟ್ ಸೇರಿ ಬಾಲಚಂದರ್ ಸಹಾಯದಿಂದ ಹೀರೋ ಆಗಿದ್ದು ಎಲ್ಲವೂ ನಡೆಯಿತು. ಬಳಿಕ ನಾನು ನಟನಾಗಿ ಮಂತ್ರಾಲಯಕ್ಕೆ ಹೋಗಿದ್ದೆ. ಅಂದು ನಾನು ಕನಸಿನಲ್ಲಿ ನೋಡಿದ್ದ ಆ ನದಿ ಆ ಜಾಗ ಅಲ್ಲಿ ನೋಡಿದೆ. ಅದಕ್ಕೂ ಮುನ್ನ ಆ ಜಾಗವನ್ನು ನೋಡಿರಲಿಲ್ಲ, ಆ ರಾಘವೇಂದ್ರ ಸ್ವಾಮಿ ಆಶೀರ್ವಾದದಿಂದ ನಾನು ಇವತ್ತು ಎಲ್ಲವನ್ನು ಸಾಧಿಸಿದ್ದೀನಿ ಎಂದಿದ್ದರು. ಆ ಒಂದು ರಾತ್ರಿ ಶಿವಾಜಿ ರಾವ್ ಜೀವನವನ್ನು ಬದಲಿಸಿತ್ತು.



### ಯಶ್

ಚಿತ್ರರಂಗದ ಹಿನ್ನೆಲೆ ಇಲ್ಲದೇ ಬಣ್ಣದ ಲೋಕಕ್ಕೆ ಬಂದು ಗೆದ್ದವರಲ್ಲಿ ಯಶ್ ಕೂಡ ಒಬ್ಬರು. ಪ್ರತಿದಿನ ಚಿತ್ರರಂಗಕ್ಕೆ ಸಾಕಷ್ಟು ಜನ ಬರ್ತಾರೆ. ಆದರೆ ಎಲ್ಲರಿಗೂ ಯಶಸ್ಸು ಸಿಗುವುದಿಲ್ಲ, ನವೀನ್ ಗೌಡ ಕೂಡ ನಟನಾಗುವ ಆಸೆ ಕಂಡು ಮೈಸೂರಿನಿಂದ ಬೆಂಗಳೂರಿಗೆ ಬಂದಿದ್ದರು. ಚಿಕ್ಕಂದಿನಿಂದಲೇ ಅವರು ಹೀರೋ ಆಗುವ ಕನಸು ಕಂಡಿದ್ದರು. ಅದನ್ನು ನನಸು ಮಾಡಿಕೊಂಡಿದ್ದಾರೆ.

ಪಿಯುಸಿ ಮುಗಿಸಿ ವಿದ್ಯಾಭ್ಯಾಸ ಬಿಟ್ಟು ಹೀರೋ ಆಗುವ ಕನಸು ಕಂಡವರು ನವೀನ್‌ಗೌಡ. ನೇರವಾಗಿ ಚಿತ್ರರಂಗಕ್ಕೆ ಬರುವ ಮುನ್ನ ರಂಗಭೂಮಿ ಪ್ರವೇಶಿಸಿದರು. ಬೆನಕ ತಂಡ ಸೇರಿಕೊಂಡರು. ಎಷ್ಟೋ ದಿನ ತಿನ್ನಲು ಹಣವಿಲ್ಲದೇ ಯಶ್ ಕಳ್ಳೆಪುರಿ ತಿಂದು ನೀರು ಕುಡಿದು ಮಲಗಿದ್ದು ಇದೆ. 'ಸ್ಟಾಪ್' ಎಂಬ ಚಿತ್ರದಲ್ಲಿ ಯಶ್ ಸಹಾಯಕ ನಿರ್ದೇಶಕರಾಗಿದ್ದರು. ಆದರೆ ಆ ಸಿನಿಮಾ ನಿಂತೇಹೋಗಿತ್ತು. ಒಮ್ಮೆ ನೆಂಟರ ಮನೆಯಲ್ಲಿ ಲಗೇಜ್ ಬ್ಯಾಗ್ ಇಡಲು ಅವಕಾಶ ಸಿಕ್ಕಿರಲಿಲ್ಲ, ಆಗ ಸ್ನೇಹಿತರಾಗಿದ್ದ ಮೋಹನ್ ತಮ್ಮ ಮನೆಗೆ ಕರೆದುಕೊಂಡು ಹೋಗಿದ್ದರು.

ಮೋಹನ್ ಅವರ ಮನೆಗೆ ಹೋಗಿ ಅವರ ಮನೆ ಸ್ಥಿತಿ ಕಂಡು ಬ್ಯಾಗ್ ಮಾತ್ರ ಇಟ್ಟು ಅಲ್ಲಿಂದ ಹೊರಟು ಬಂದು ಬಿಟ್ಟಿದ್ದರಂತೆ. ನೇರ ಹೋಗಿ ಮೆಜೆಸ್ಟಿಕ್ ಬಸ್ ಸ್ಟಾಪ್‌ನಲ್ಲಿ ರಾತ್ರಿ ಮಲಗಿದ್ದರಂತೆ. ಈ ವಿಚಾರವನ್ನು ವೀಕೆಂಡ್ ವಿತ್ ರಮೇಶ್ ಶೋನಲ್ಲಿ ಸ್ವತಃ ಯಶ್ ವಿವರಿಸಿದ್ದರು. ಅಂದು ರಾತ್ರಿ ಮೆಜೆಸ್ಟಿಕ್‌ನಲ್ಲಿ ಇಡೀ ಪ್ರಪಂಚ ನೋಡಿದೆ. ಒಂದು ಕಡೆ ಯಾರೋ ಮೈಸೂರು ಎಂದು ಬಸ್‌ನವರು ಕೂಗುತ್ತಿದ್ದರು, ಮತ್ತೊಂದು ಕಡೆ ಗಾಂಧಿನಗರ.

ಅವತ್ತು ಬಸ್ ಹತ್ತಿ ಮತ್ತೆ ಮೈಸೂರಿಗೆ ಹೋಗಿಬಿಡ್ಲಾ? ಅಥವಾ ಇಲ್ಲೇ ಗಾಂಧಿನಗರದಲ್ಲಿ ಏನಾದರೂ ಸಾಧಿಸ್ಲಾ? ಎಂದು ಯಶ್ ಗೊಂದಲಕ್ಕೆ ಸಿಲುಕಿದ್ದರು. ಭಿಕ್ಷುಕರು, ವೇಶ್ಯೆಯರು ಎಲ್ಲಾ ತರಹದ ಜನರನ್ನು ನೋಡಿದೆ. ಬಸ್ ಸ್ಟಾಂಡ್‌ನಲ್ಲಿ ಮಲಗಿದ್ದವರಿಗೆ ಪೊಲೀಸರು ಲಾಠಿಯಿಂದ ಹೊಡೆಯುತ್ತಿದ್ದರು. ಇವರೆಲ್ಲರ ನಡುವೆ ನಾನು ಬದುಕಬೇಕು ಎಂಬ ಕನಸು ಇತ್ತು. ಗೆಲ್ಲುವ ಹಠ ಬಂತು ಎಂದು ಯಶ್ ತಮ್ಮ ಜೀವನದ ಆ ಒಂದು ರಾತ್ರಿಯನ್ನು ನೆನಪು ಮಾಡಿಕೊಂಡಿದ್ದರು.

### ದರ್ಶನ್

ತಂದೆ ತೂಗುದೀಪ ಶ್ರೀನಿವಾಸ್ ಹಾದಿಯಲ್ಲಿ ದರ್ಶನ್ ಚಿತ್ರರಂಗಕ್ಕೆ ಬಂದಿದ್ದರು. ಆದರೂ ತಂದೆ ಅಗಲಿಕೆ ಬಳಿಕ ಇಂಡಸ್ಟ್ರಿಯಲ್ಲಿ ಬೆಲೆ ಸಿಗಲಿಲ್ಲ, ಸಾಕಷ್ಟು ಅವಮಾನ ಅಪಮಾನ ಎದುರಿಸಿ ದರ್ಶನ್ ಬೆಳೆದು ಬಂದವರು. ಮೊದಲಿಗೆ ಲೈಟ್ ಬಾಯ್ ಆಗಿ ಚಿತ್ರರಂಗ ಪ್ರವೇಶಿಸಿದ್ದರು. ಮೊದಲ ದಿನ ಚೆನ್ನಾಗಿ ನೋಡಿದರು. ಎರಡನೇ ದಿನ ನಾನು ಕೂರುವ ಚೇರ್ ಒದ್ದು ಬಿಟ್ಟಿದ್ದರು. ಅವತ್ತು ನನಗೆ ಭೂಮಿ ಬಾಯ್ಬಿಟ್ಟಂತೆ ಆಗಿತ್ತು. ಅದೇ ದಿನ ಮನೆಗೆ ಬಂದು ಅಮ್ಮನಿಗೆ ಹೇಳಿದೆ. ಸಿನಿಮಾ ಬೇಡ, ನಾನು ಚಿತ್ರರಂಗದಲ್ಲಿ ಕೆಲಸ ಮಾಡಲ್ಲ ಅಂತ ದರ್ಶನ್, 'ವೀಕೆಂಡ್ ವಿತ್ ರಮೇಶ್' ಶೋನಲ್ಲಿ ನೆನಪಿಸಿಕೊಂಡಿದ್ದರು.

ಮನೆಗೆ ಬಂದು ಅಮ್ಮನಿಗೆ ಹೇಳ್ದೆ, ನಾನು ಸಿನಿಮಾ ಕೆಲಸ ಮಾಡಲ್ಲ ಅಂತ. ನನಗೆ ಬೇಡ. ಇಷ್ಟು ಅವಮಾನ ಪಟ್ಕೊಂಡು ಕೆಲಸ ಮಾಡೋಕೆ ಇಷ್ಟ ಇಲ್ಲ, ಹೇಗಿದ್ದರೂ ಅಪ್ಪನ ತೂಗುದೀಪ ಎನ್ನುವ ಟ್ಯಾಗ್ ಇತ್ತು. ಅದಕ್ಕೆ ಅವಮಾನ ಮಾಡೋದು ಬೇಡ ಎಂದುಕೊಂಡೆ. ಅವತ್ತು ರಾತ್ರಿಯೆಲ್ಲಾ ನಿದ್ದೆ ಬರಲಿಲ್ಲ, ಆಮೇಲೆ ಒಂದು ಕ್ಷಣದಲ್ಲಿ ಅನ್ನಿಸಿತು. ಅಪ್ಪ ಇದ್ದಾಗ ಬೆಲೆ ಕೊಡುತ್ತಿದ್ದರು. ಈಗ ಕೊಡುತ್ತಿಲ್ಲ, ಅಷ್ಟೇ ಅಲ್ವಾ? ಅದನ್ನು ಪಡೆದುಕೊಂಡ್ರೆ ಆಯ್ತು ಎಂದು ದರ್ಶನ್ ನಿರ್ಧಾರ ಬದಲಿಸಿಕೊಂಡು ಮತ್ತೆ ಚಿತ್ರರಂಗದಲ್ಲೇ ಮುಂದುವರೆಯಬೇಕು ಎಂದುಕೊಂಡೆ. ಬೆಳಗ್ಗೆ ಸಾಮಾನ್ಯ ಲೈಟ್‌ಬಾಯ್ ತರ ಹೋದೆ, ಕ್ಯೂನಲ್ಲಿ ನಿಂತು ಊಟ ತಗೊಂಡೆ. ಅವತ್ತು ನಾನು ಇಂಡಸ್ಟ್ರಿ ಬೇಡ ಎಂದು ಬಿಟ್ಟಿದ್ದರೆ ಇವತ್ತು ನಾನು ಇಲ್ಲಿ ಕೂರುತ್ತಿರಲಿಲ್ಲ ಎಂದು ದರ್ಶನ್ ವಿವರಿಸಿದ್ದರು.

# ನಗುತ್ತಲೇ... ನಗಿಸುತ್ತಲೇ ಹೋಗಿಬಿಟ್ಟ ರಾಕೇಶ್

ಕಾಮಿಡಿ ಕಿಲಾಡಿ ಸೀಸನ್ 3ರ ವಿಜೇತರಾಗಿ ಹೊರಹೊಮ್ಮಿದ್ದ ಉಡುಪಿ ಮೂಲದ ರಾಕೇಶ್ ಪೂಜಾರಿ ನಿಧನ ಅವರ ಅಭಿಮಾನಿಗಳು ಮಾತ್ರವಲ್ಲದೇ ರಾಜ್ಯದ ಜನತೆ ಶೋಕದಲ್ಲಿ ಮುಳುಗುವಂತೆ ಮಾಡಿದೆ. ನಿನ್ನೆಯ ತನಕವೂ ಆರೋಗ್ಯವಾಗಿ ಗಟ್ಟಿಮುಟ್ಟಾಗಿದ್ದ ರಾಕೇಶ್ ಇಂದು ದಿಢೀರ್ ಸತ್ತು ಹೋಗಿದ್ದಾರೆ ಎಂದರೆ ನಂಬಲಾದಿತೇ? ರಾಕೇಶ್ ನಿಧನ ಯುವಜನರಲ್ಲಿ ಆತಂಕ ಮೂಡಿಸಿದ್ದು, ಪುನೀತ್ ರಾಜ್‌ಕುಮಾರ್ ಅವರ ನಿಧನದ ಬಳಿಕ ಮತ್ತೋರ್ವ ಪ್ರತಿಭಾನ್ವಿತನನ್ನು ಕನ್ನಡ ಚಿತ್ರರಂಗ ಕಳೆದುಕೊಂಡಿದೆ.

ಯಾವಾಗಲೂ ನಗುತ್ತಿದ್ದ ಎಲ್ಲರನ್ನೂ ನಗಿಸುತ್ತಿದ್ದ, ನಗು ನಗುತ್ತಲೇ ಹೋದ... ಕಾಮಿಡಿ ಕಿಲಾಡಿ ಸಹಪಾಠಿಗಳು ರಾಕೇಶ್ ಸಾವಿಗೆ ಮಮ್ಮಲ ಮರುಗುತ್ತಿದ್ದಾರೆ. ರಾಕೇಶ್ ಪೂಜಾರಿ ಅವರ ಆಪ್ತರು ಹೇಳುವ ಪ್ರಕಾರ, ಕಾಂತಾರ-2 ಸಿನಿಮಾದಲ್ಲಿ ಬ್ಯುಸಿ ಆಗಿರುವ ರಾಕೇಶ್ ನಿನ್ನೆಯಷ್ಟೇ ಶೂಟಿಂಗ್‌ನಲ್ಲಿ ಭಾಗಿಯಾಗಿದ್ದರು. ಬಳಿಕ ರಾತ್ರಿ ಸ್ನೇಹಿತರೊಬ್ಬರ ಮೆಹಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಎಂಜಾಯ್ ಮಾಡಿದ್ದರು. ಬಹುಶಃ ರಾಕೇಶ್ ಈ ಮೆಹಂದಿ ಕಾರ್ಯಕ್ರಮದಲ್ಲಿ ಸಿಕ್ಕಾಪಟ್ಟೆ ಡ್ಯಾನ್ಸ್ ಮಾಡಿ ಅವರಿಗೆ ಲೋಪಿ ಬಿಪಿ ಉಂಟಾಗಿದೆ. ಬಳಿಕ ಹೃದಯಾಘಾತ ಸಂಭವಿಸಿ ನಿಧನ ಹೊಂದಿದ್ದಾರೆ ಎಂದು ಹೇಳಲಾಗ್ತಿದೆ. ರಾತ್ರಿ 01 ಗಂಟೆ ಸುಮಾರಿಗೆ ಲೋ ಬಿಪಿ ಉಂಟಾಗಿ ರಾಕೇಶ್ ಕುಸಿದು ಬೀಳುತ್ತಿದ್ದಂತೆ ತಕ್ಷಣ ಅವರನ್ನು ಸ್ಥಳೀಯ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಆದರೆ ಅದಾಗಲೇ ಅವರು ಮೃತಪಟ್ಟಿದ್ದರು.



ಅವರ ಆಪ್ತರು ಹೇಳುವ ಪ್ರಕಾರ, ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರ ತನಕ ಪ್ರತಿಯೊಬ್ಬರ ಜೊತೆಯೂ ನಗುಮೊಗದಿಂದ ಒಂಚೂರೂ ಅಹಂಕಾರ ಪ್ರದರ್ಶಿಸದೆ ಮಾತನಾಡುತ್ತಿದ್ದ ರಾಕೇಶ್ ಪೂಜಾರಿ ಮೊದಲ ಮಾತಿನಲ್ಲೇ ಎಲ್ಲರ ಹೃದಯ ಗೆಲ್ಲುತ್ತಿದ್ದರು. ಆದರೆ ಅವರು ಮೆಹಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಾಗ ಮಾಡಿದ ಒಂದು ತಪ್ಪು ಅವರ ಸಾವಿಗೆ ಕಾರಣ ಇರಬಹುದು ಅಂತಾ ಅವರ ಆಪ್ತವಲಯ ಹೇಳ್ತಿದೆ. ಮೆಹಂದಿ ಗೆಳೆಯನ ಮೆಹಂದಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ರಾಕೇಶ್ ಪೂಜಾರಿ ಸಿಕ್ಕಾಪಟ್ಟೆ ಡ್ಯಾನ್ಸ್ ಮಾಡಿದ್ದರು. ಸ್ನೇಹಿತನ ಮದುವೆಯ ಸಂಭ್ರಮದಲ್ಲಿ ಮನಸೋ ಇಚ್ಛೆ ಸಂಭ್ರಮಪಟ್ಟು ಕುಣಿದಿದ್ದರು. ಆಗ ಅವರ ದೇಹಕ್ಕೆ ದಣಿವಾಗಿದ್ದರೂ ಸಹ ಅವರು ರೆಸ್ಟ್ ಮಾಡಿರಲಿಲ್ಲ, ಹೀಗಾಗಿ ದೇಹಕ್ಕೆ ತೀವ್ರ ಸುಸ್ತಾಗಿ ಮಧ್ಯರಾತ್ರಿ 1 ಗಂಟೆ ಸುಮಾರಿಗೆ ಅವರಿಗೆ ಲೋ ಬಿಪಿ ಉಂಟಾಗಿ ಹೃದಯಾಘಾತ ಆಗಿದೆ. ಯಾವುದೇ ದುಶ್ಚಟ, ದುರಭ್ಯಾಸ ಇಲ್ಲದ ರಾಕೇಶ್ ಪೂಜಾರಿ ನಿಧನ ಎಲ್ಲರಿಗೂ ಆತಂಕ ತಂದಿದೆ.

### ಕೋವಿಡ್ ನಂತರ ಹೆಚ್ಚು ಹೃದಯಾಘಾತ

ಹೌದು... ಅನೇಕ ಜನರು ಮಾತನಾಡುವಂತೆ ಕೋವಿಡ್ ನಂತರ ಬಹುತೇಕರು ಕೋವ್ಯಾಕ್ಸಿನ್ ಹಾಕಿಸಿಕೊಂಡಿದ್ದರು. ಆ ಬಳಿಕ ಚಿಕ್ಕಮಕ್ಕಳಿಂದ ಹಿಡಿದ ವಯಸ್ಸಾದವರ ತನಕವೂ ಹೃದಯಾಘಾತದ ಸಂಖ್ಯೆಗಳು ಹೆಚ್ಚುತ್ತಿದೆ. ಇದಕ್ಕೆ ವೈಜ್ಞಾನಿಕ ಕಾರಣಗಳು ಅನೇಕ ಇದ್ದರೂ ಸಹ ಕೊರೊನಾ ನಂತರ ಹಾರ್ಟ್ ಸಂಖ್ಯೆ ಹೆಚ್ಚುತ್ತಿದೆ ಅನ್ನುವ ವಿಷಯ ಜನರ ತಲೆಯಲ್ಲಿ ಕೂತುಬಿಟ್ಟಿದೆ. ತಮಿಳು ಹಾಸ್ಯ ನಟ ವಿವೇಕ್ ಕೂಡ ಇದೇ ರೀತಿ ದುರ್ಮರಣ ಹೊಂದಿದ್ದರು. ಅವತ್ತು ಕೂಡ ಕೊವ್ಯಾಕ್ಷಿನ್ ಬಗ್ಗೆಯೇ ಚರ್ಚೆ ನಡೆದಿತ್ತು.


POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 11.5.2025

# ಮೇ 30ಕ್ಕೆ ಬರುತ್ತಿದ್ದಾನೆ 'ಮಾದೇವ'

ನವೀನ್ ರೆಡ್ಡಿ ಬಿ. ನಿರ್ದೇಶನದ ಮತ್ತು ವಿನೋದ್ ಪ್ರಭಾಕರ್ ನಟಿಸಿರುವ ಮಾದೇವ ಚಿತ್ರವು ಬಿಡುಗಡೆಗೆ ಸಿದ್ಧವಾಗಿದ್ದು, ಮೇ 30ರಂದು ರಾಜ್ಯಾದ್ಯಂತ ಚಿತ್ರಮಂದಿರಗಳಲ್ಲಿ ತೆರೆಕಾಣಲಿದೆ. ಆ್ಯಕ್ಷನ್ ಪ್ರಧಾನ ಪಾತ್ರಗಳಿಂದ ಹೃದಯ ಗೆದ್ದಿರುವ ವಿನೋದ್ ಪ್ರಭಾಕರ್ ಈ ಚಿತ್ರದಲ್ಲಿ ರಗಡ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಈವರೆಗೆ ಮಾಡಿರದ ವಿಭಿನ್ನ ಪಾತ್ರದಲ್ಲಿ ನಟಿಸಿದ್ದಾರೆ.

ರಾಧಾಕೃಷ್ಣ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಆರ್. ಕೇಶವ (ದೇವಸಂದ್ರ) ನಿರ್ಮಿಸಿರುವ ಈ ಚಿತ್ರಕ್ಕೆ ಖಾಕಿ ಚಿತ್ರದ ನಂತರ ನವೀನ್ ರೆಡ್ಡಿ ಅವರು ಆ್ಯಕ್ಷನ್ ಕಟ್ ಹೇಳಿದ್ದಾರೆ. ಚಿತ್ರಕ್ಕಾಗಿ ತಾವೇ ಕಥೆ ಮತ್ತು ಚಿತ್ರಕಥೆಯನ್ನೂ ಬರೆದಿದ್ದಾರೆ. ಈ ಚಿತ್ರಕ್ಕೆ ಪ್ರದ್ಯೋತನ್ ಅವರ ಸಂಗೀತ ಸಂಯೋಜನೆ, ಬಾಲಕೃಷ್ಣ ತೋಟ ಅವರ ಛಾಯಾಗ್ರಹಣ, ವಿಜಯ್ ಎಂ. ಕುಮಾರ್ ಅವರ ಸಂಕಲನ, ಗುಣ ಅವರ ಕಲಾ ನಿರ್ದೇಶನ, ಜೊತೆಗೆ ಥ್ರಿಲ್ಲರ್ ಮಂಜು, ಡಿಫರೆಂಟ್ ಡ್ಯಾನಿ, ರಿಯಲ್ ಸತೀಶ್ ಮತ್ತು ವಿಕ್ರಮ್ ಮೋರ್ ಅವರ ಸಾಹಸ ಸಂಯೋಜನೆ ಇದೆ.

'ಮಾದೇವ' ಚಿತ್ರದಲ್ಲಿ ವಿನೋದ್ ಪ್ರಭಾಕರ್ ಅವರಿಗೆ ಜೋಡಿಯಾಗಿ ಸೋನಲ್ ಮೊಂತೆರೋ ನಟಿಸಿದ್ದಾರೆ. ಶ್ರೀನಗರ ಕಿಟ್ಟಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇವರೊಂದಿಗೆ ಹಿರಿಯ ನಟರಾದ ಮಾಲಾಶ್ರೀ, ಶ್ರುತಿ, ಅಚ್ಯುತ್ ಕುಮಾರ್, ಕಾಕ್ರೋಚ್ ಸುಧಿ, ಮೈಕೋ ನಾಗರಾಜ್, ಬಾಲ ರಾಜವಾಡಿ, ಮುನಿರಾಜು ಮತ್ತು ಚೈತ್ರ ಕೂಡ ತಾರಾಗಣದಲ್ಲಿದ್ದಾರೆ.






# ಹೊಸಬರೇ ನಿರ್ಮಿಸಿರುವ 'ಟೈಮ್ ಪಾಸ್' ಚಿತ್ರ

ಬಹುತೇಕ ಹೊಸಬರೇ ತುಂಬಿರುವ 'ಟೈಮ್ ಪಾಸ್' ಚಿತ್ರದ ಫಸ್ಟ್ ಲುಕ್ ಪೋಸ್ಟರ್ ಬಿಡುಗಡೆಯಾಗಿದ್ದು, ಕುತೂಹಲ ಮೂಡಿಸಿದೆ. ಕೆ ಚೇತನ್ ಜೋಡಿದಾರ್ ಮೊದಲ ಬಾರಿಗೆ ಆ್ಯಕ್ಷನ್ ಕಟ್ ಹೇಳಿರುವ ಟೈಮ್‌ಪಾಸ್ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

ಯುವ ತಂಡವೊಂದು ಚಿತ್ರವನ್ನು ನಿರ್ಮಿಸಿದ್ದು, ಸರಳ ಮತ್ತು ಉತ್ಸಾಹಭರಿತ ಕಥೆ ಹೇಳುವಿಕೆಯನ್ನು ತೆರೆ ಮೇಲೆ ತರಲು ಮುಂದಾಗಿದೆ. ಚಿತ್ರರಂಗದ ಪರಿಸ್ಥಿತಿಗೆ ಕನ್ನಡಿ ಹಿಡಿಯುವ ನೈಜ ಘಟನೆಗಳನ್ನು ಆಧರಿಸಿದ ಕಥೆಯನ್ನು ಒಳಗೊಂಡಿದ್ದು, ಡಾರ್ಕ್ ಹ್ಯೂಮರ್ ಚಿತ್ರ ಇದಾಗಿದೆ.

ನಿರ್ದೇಶಕ ಚೇತನ್‌ಗೆ ಯಾವುದೇ ನಟನಾ ಶಾಲೆಯ ಹಿನ್ನೆಲೆ ಅಥವಾ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿರುವ ಅನುಭವವಿಲ್ಲ, ಅವರು ಸಿನಿಮಾಗಳನ್ನು ನೋಡುವ ಮೂಲಕ ಮತ್ತುಯೂಟ್ಯೂಬ್ ಟ್ಯುಟೋರಿಯಲ್‌ಗಳನ್ನು ಅಧ್ಯಯನ ಮಾಡುವ ಮೂಲಕ ನಿರ್ದೇಶನಕ್ಕೆ ಇಳಿದಿದ್ದಾರೆ. ಈ ಕಚ್ಚಾ ಕುತೂಹಲವೇ ಚಲನಚಿತ್ರವಾಗಿ ರೂಪಾಂತರಗೊಂಡಿದೆ. ಸಿನಿಮಾ ಕುರಿತು ವ್ಯಾಮೋಹ ಹೊಂದಿರುವ ಏಳು ಪಾತ್ರಗಳು ಒಂದೆಡೆ ಸೇರಿದಾಗ ತೆರೆದುಕೊಳ್ಳುವ ಕಥೆಯನ್ನು ಒಳಗೊಂಡಿದ್ದು, ಹಾಸ್ಯದ ದಾಟಿಯಲ್ಲಿ ಭಾವನಾತ್ಮಕ ಸತ್ಯದೊಂದಿಗೆ ಬೆರೆಸುತ್ತದೆ.

ಚಿತ್ರಕ್ಕೆರಾಜೀವ್ ಗಣೇಶನ್ ಅವರ ಛಾಯಾಗ್ರಹಣ, ಹರಿ ಪರಮ್ ಅವರ ಸಂಕಲನ ಮತ್ತು ಡಿಕೆ (ಡಿಎಂ ಉದಯಕುಮಾರ್) ಅವರ ಸಂಗೀತ ಸಂಯೋಜನೆಯಿದೆ. ಚೇತನ್ ಮತ್ತು ವೈಷ್ಣವಿ ಸತ್ಯನಾರಾಯಣ್ ಅವರು ಸಾಹಿತ್ಯ ಬರೆದಿದ್ದಾರೆ. ಈ ಧ್ವನಿಪಥವು ಇಳಯರಾಜ ಮತ್ತು ಎ.ಆರ್. ರೆಹಮಾನ್ ಅವರಂತಹ ಸಂಗೀತಗಾರರೊಂದಿಗೆ ಕೆಲಸ ಮಾಡಿದ ಲೈವ್-ರೆಕಾರ್ಡ್ ಸಂಗೀತವನ್ನು ಒಳಗೊಂಡಿದೆ. ಚೇತನ್ ಮತ್ತು ವೈಷ್ಣವಿ ಸತ್ಯನಾರಾಯಣ್ ಈ ಚಿತ್ರದಲ್ಲಿ ಸಾಹಿತ್ಯ ಬರೆದಿದ್ದಾರೆ.

ಶ್ರೀ ಚೇತನಾ ಸರ್ವಿಸಸ್, ಗುಂಡೂರು ಶೇಖರ್, ಕಿರಣ್‌ಕುಮಾರ್ ಶೆಟ್ಟಿ ಮತ್ತು ಎಂಎಚ್ ಕೃಷ್ಣಮೂರ್ತಿ ನಿರ್ಮಿಸಿರುವ ಈ ಚಿತ್ರದ ತಾರಾಗಣದಲ್ಲಿ ಇಮ್ರಾನ್ ಪಾಷಾ, ವೈಸಿರಿ ಕೆ. ಗೌಡ, ಓಂ ಶ್ರೀ ಮತ್ತು ಚೇತನ್ ಇದ್ದಾರೆ.

# ಸಮಾರಂಭದ ವೇದಿಕೆ ಮೇಲೆ ಪ್ರಜ್ಞೆ ತಪ್ಪಿ ಬಿದ್ದ ನಟ ವಿಶಾಲ್!

ವಿಲ್ಲುಪುರಂನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ವಿಶಾಲ್, ವೇದಿಕೆ ಮೇಲೆಯೇ ಮತ್ತೊಮ್ಮೆ ಅಸ್ವಸ್ಥರಾಗಿದ್ದಾರೆ. ಇದಕ್ಕೆ ಸಂಬಂಧಿಸಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ತಮಿಳುನಾಡಿನ ವಿಲ್ಲುಪುರಂನಲ್ಲಿ ನಡೆದ ಮಿಸ್ ಕೂವಗಮ್ ಟ್ರಾನ್ಸ್‌ಜೆಂಡರ್ ಬ್ಯೂಟಿ ಕಂಟೆಸ್ಟ್‌ಗೆ ಮುಖ್ಯ ಅತಿಥಿಯಾಗಿ ತೆರಳಿದ್ದ ತಮಿಳು ನಟ ವಿಶಾಲ್ ವೇದಿಕೆಯ ಮೇಲೆ ಕುಸಿದು ಬಿದ್ದು ಅಭಿಮಾನಿಗಳಿಗೆ ಶಾಕ್ ನೀಡಿದ್ದಾರೆ.

ವಿಲ್ಲುಪುರಂನ ಕೂವಾಗಮ್ ಗ್ರಾಮದಲ್ಲಿರುವ ದೇವಾಲಯವೊಂದರಲ್ಲಿ ಕಳೆದ ಕೆಲವು ದಿನಗಳಿಂದ ಚಿತ್ತಿರೈ (ತಮಿಳು ಮಾಸ) ಆಚರಣೆಗಳು ನಡೆಯುತ್ತಿವೆ. ವಿಶಾಲ್ ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಮೇ 11ರಂದು ಆಯೋಜಕರು ಮಿಸ್ ಕೂವಾಗಮ್ ತೃತೀಯ ಲಿಂಗಿ ಸೌಂದರ್ಯ ಸ್ಪರ್ಧೆಯನ್ನು ಆಯೋಜಿಸಿದ್ದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿಶಾಲ್ ಸ್ವಲ್ಪ ಸಮಯದ ನಂತರ ವೇದಿಕೆಯಲ್ಲಿ ಪ್ರಜ್ಞೆ ತಪ್ಪಿ ಬಿದ್ದರು. ತಕ್ಷಣ, ವಿಶಾಲ್ ಅವರ ತಂಡ ಹಾಗೂ ಮಾಜಿ ಸಚಿವ ಕೆ. ಪೊನ್ಮುಡಿ ಮತ್ತು ಕಾರ್ಯಕ್ರಮ ಆಯೋಜಕರು ವಿಶಾಲ್ ಅವರನ್ನು ಚಿಕಿತ್ಸೆಗಾಗಿ ಹತ್ತಿರದ ಖಾಸಗಿ ಆಸ್ಪತ್ರೆಗೆ ಕರೆದೊಯ್ದರು. ಸದ್ಯಕ್ಕೆ ಆರೋಗ್ಯ ಸ್ಥಿತಿ ಸ್ಥಿರವಾಗಿದೆ. ಇತ್ತೀಚಿನ ದಿನಗಳಲ್ಲಿ ವಿಶಾಲ್‌ಗೆ ಇದು ಎರಡನೇ ಬಾರಿ ಸಂಭವಿಸಿದೆ. 'ಮದ ಗಜ ರಾಜ' ಚಿತ್ರದ ಪ್ರಚಾರದ ಸಮಯದಲ್ಲಿ ವಿಶಾಲ್ ಅವರ ಕೈಗಳು ನಡುಗುತ್ತಿತ್ತು. ಅಷ್ಟೇ ಅಲ್ಲದೆ, ತುಂಬಾ ಅಸ್ವಸ್ಥರಾಗಿರುವಂತೆ ಕಾಣುತ್ತಿದ್ದರು. ಇದಕ್ಕೆ ಸಂಬಂಧಿಸಿದ ವಿಡಿಯೋಗಳು ಸಿಕ್ಕಾಪಟ್ಟೆ ವೈರಲ್ ಆಗಿ, ಸಾಕಷ್ಟು ಚರ್ಚೆ ಹುಟ್ಟುಹಾಕಿತ್ತು. ಕಳೆದ ಎರಡು ವರ್ಷಗಳಿಂದ ಯಾವುದೇ ಸಿನಿಮಾ ಮಾಡದೇ ನೇಪಥ್ಯಕ್ಕೆ ಸರಿದಿದ್ದ ವಿಶಾಲ್ ಈಗ್ಗೆ ಎರಡು ತಿಂಗಳ ಹಿಂದೆಯಷ್ಟೇ ತನ್ನ ಅಭಿನಯದ ಮದಗಜರಾಜ ಹಳೇಯ ಚಿತ್ರದ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿ ಸುದ್ದಿಯಾಗಿದ್ದರು. ಅವತ್ತು ಅವರು ಮೈಕ್ ಹಿಡಿಯಲು ಆಗದೆ, ಗಡಗಡ ನಡುಗುತ್ತಿದ್ದರು. ಅದನ್ನು ನೋಡಿ ವಿಶಾಲ್‌ಗೆ ಏನಾಗಿ ಹೋಯ್ತು ಎಂದು ತಮಿಳಿಗರು ಶಾಕ್ ಆಗಿದ್ದರು. ಯಾವುದೋ ನರರೋಗ ವ್ಯಾದಿಯಿಂದ ಬಳಲುತ್ತಿರುವ ವಿಶಾಲ್ ಇದೀಗ ಮತ್ತೆ ಪ್ರಜ್ಞೆತಪ್ಪಿ ಬಿದ್ದು ಸುದ್ದಿಯಾಗಿದ್ದಾರೆ. ಇವರ ಪರಿಸ್ಥಿತಿಯನ್ನ ಗಮನಿಸಿದರೆ ಚೇತರಿಸಿಕೊಳ್ಳುವುದೇ ಅನುಮಾನ!





# 'ಇಂಟಿಮೇಟ್ ಸೀನ್‌ಗಳಿಗೆ ರಿಹರ್ಸಲ್ ಮಾಡಲಕ್ಕಾಗಲ್ಲ'

ತೆರೆಯಲ್ಲಿ ನೀವು ನೋಡುವ ಇಂಟಿಮೇಟ್ ಸನ್ನಿವೇಶಗಳಲ್ಲಿ ಅಭಿನಯಿಸುವುದು ಸುಲಭ ಅಲ್ಲ. ಎಷ್ಟೋ ಕಲಾವಿದರು ಇಂಥಾ ಸಂದರ್ಭಗಳಲ್ಲಿ ಬಹಳ ಮುಜುಗರ, ಕಷ್ಟ ಅನುಭವಿಸುತ್ತಾರೆ. ಏಕೆಂದರೆ ಇಂಟಿಮೇಟ್ ಸೀನ್‌ಗಳಿಗೆ ರಿಹರ್ಸಲ್‌ಗಳಿರುವುದಿಲ್ಲ. ನೇರ ಕ್ಯಾಮರಾ ಮುಂದೆ ಸಹ ನಟನೊಂದಿಗೆ ಆಪ್ತವಾಗಿ ಕಾಣಿಸಿಕೊಳ್ಳಬೇಕಾಗುತ್ತದೆ. ಆದರೆ ದಿ ರಾಯಲ್ಸ್ ಸೀರೀಸ್‌ನಲ್ಲಿ ಅಂಥಾ ದೃಶ್ಯಗಳಿದ್ದರೂ ಅಭಿನಯಿಸುವುದು ಕಷ್ಟವೆನಿಸಲಿಲ್ಲ ಎಂದು ನಟಿ ಭೂಮಿ ಪೆಡ್ನೇಕರ್ ಹೇಳಿದ್ದಾರೆ.

'ದಿ ರಾಯಲ್ಸ್' ರೀರೀಸ್ ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅವರು, 'ಚಿತ್ರೀಕರಣಕ್ಕೂ ಮೊದಲೇ ಚಿತ್ರತಂಡ ನಾಯಕ ಇಷಾನ್ ಕಟ್ಟರ್ ಜೊತೆಗೆ ಆತ್ಮೀಯತೆ ಬೆಳೆಸಿಕೊಳ್ಳಲು ಹೇಳಿತ್ತು. ನಾವು ಪ್ರಾಮಾಣಿಕ ಪ್ರಯತ್ನ ಮಾಡಿದೆವು, ಆಪ್ತರಾದೆವು. ಹೀಗಾಗಿ ಇಂಟಿಮೇಟ್ ಸೀನ್‌ಗಳಲ್ಲಿ ನಟಿಸುವುದು ಕಷ್ಟವೆನಿಸಲಿಲ್ಲ. ಅಲ್ಲೂ ನಟನೆಯನ್ನು ಎನ್‌ಜಾಯ್ ಮಾಡುವುದು ಸಾಧ್ಯವಾಯಿತು' ಎಂದಿದ್ದಾರೆ.

Vol. 40 No. 49 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com